# ವಾಲ್ಮೀಕಿಯಿಂದ ಜೆ.ಪಿ.-ವರೆಗೆ

ಭಾರತ-ಭಾರತಿ
ರಮ್ಯ ಕಥೆ

## ಕೃತಂ ಸ್ಮರ

ಅನಾದಿಕಾಲದಿಂದ ನಮ್ಮ ನಾಡು-ನುಡಿ-ಸಂಸ್ಕೃತಿ ಪರಂಪರೆಯನ್ನು ಕಟ್ಟಿ, ಇಂದಿನ-ಮುಂದಿನ ಪೀಳಿಗೆಗೆ ತಮ್ಮದೆಲ್ಲವನ್ನೂ ನೀಡಿ, ಆಗಿ ಹೋದ ಮಹಾ ಚೇತನಗಳಿಗೆ ನಮ್ಮ ಈ ಅಳಿಲು ಸೇವೆ ಸಮರ್ಪಿತ.

3/=

# ವಾಲ್ಮೀಕಿಯಿಂದ........
# ........ಜೆ. ಪಿ. ವರೆಗೆ

ಭಾರತ-ಭಾರತಿ ರಮ್ಯ ಕಥೆ




ಭಾರತ-ಭಾರತಿ ಪುಸ್ತಕ ಸಂಪದ. ಬೆಂಗಳೂರು-೫೬೦ ೦೧೯

ಪ್ರಕಾಶಕರು

ರಾಷ್ಟ್ರೋತ್ಥಾನ ಸಾಹಿತ್ಯ
ಭಾರತ-ಭಾರತಿ ಪುಸ್ತಕ ಸಂಪದ
ಕೆಂಪೇಗೌಡನಗರ ಬೆಂಗಳೂರು - ೫೬೦ ೦೧೯

ಪ್ರಕಟಣೆ

೧೧ ಜನವರಿ ೧೯೮೧
ಭಾರತ-ಭಾರತಿ ಮಂಗಳ ಸಮಾರಂಭ

ಬೆಲೆ : ರೂ. ಒಂದೂವರೆ

ರಕ್ಷಾಪುಟ ವಿನ್ಯಾಸ : ಮನೋಹರ್

ಮುದ್ರಣ

ರಾಷ್ಟ್ರೋತ್ಥಾನ ಮುದ್ರಣಾಲಯ
ಬೆಂಗಳೂರು - ೫೬೦ ೦೧೯

* ಆಲೋಚನೆ–ಕಲ್ಪನೆ ನಂ. ಮಧ್ವರಾವ್
* ಸಂಪಾದನೆ–ಅನುಭವ ಎಲ್. ಎಸ್. ಶೇಷಗಿರಿ ರಾವ್
* ನಿರ್ವಹಣೆ–ಕಥೆ ಎಂ. ಐ. ತಿರುನಾರಾಯಣ ಐಯ್ಯಂಗಾರ್

# ವೈಶಿಷ್ಟ್ಯ — ವಿಕ್ರಮ

* ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ನೂರಾರು ಮಹಾಪುರುಷರ, ಹಾಗೂ ಇತಿಹಾಸದ ಅಂತರಾಳದಲ್ಲಡಗಿ ಬೆಳಕು ಕಾಣದ ಅನೇಕ ಮಂದಿ ಮಹನೀಯರ ಕುರಿತು ಪುಸ್ತಕಗಳ ಪ್ರಕಟಣೆ.

* ಭಾರತದ ಎಲ್ಲಾ ಪ್ರಾಂತಗಳಿಂದಲೂ ಆರಿಸಿದ ಮಹಾಪುರುಷರ ಜೀವನ ಚರಿತ್ರೆಗಳ ಸಂಕಲನ.

* ಯೋಜನೆಯ ಮೊದಲ ಹತ್ತು ಪುಸ್ತಕಗಳು ಸಮಾರಂಭದಂದೇ ಒಂದು ಲಕ್ಷ ಮೂವತ್ತು ಸಾವಿರ ಪ್ರತಿ ಮಾರಾಟ.

* ೫೧೦ ಮಕ್ಕಳ ಪುಸ್ತಕಗಳಲ್ಲಿ ಒಟ್ಟು ೨೨,೧೪೦ ಪುಟಗಳ ಸಾಹಿತ್ಯ ಪ್ರಕಟಣೆ, ೧,೫೨೦ ರೇಖಾಚಿತ್ರಗಳು, ಮತ್ತು ಸುಮಾರು ಹದಿನೈದು ಲಕ್ಷ ಮೂವತ್ತು ಸಹಸ್ರ ಪದಗಳು.

* ಒಟ್ಟು ಸುಮಾರು ಒಂದು ಕೋಟಿಗೂ ಮೀರಿ ಪ್ರತಿಗಳ ಮುದ್ರಣ.

* ಸುಮಾರು ೨೫೫ ಟನ್ ಮುದ್ರಣ ಕಾಗದದ ಉಪಯೋಗ (ಸುಮಾರು ೧೪,೦೦೦ ರೀಂಗಳು).

* ಸುಮಾರು ೬,೨೦೦ ಗ್ರೋಸ್ ರಕ್ಷಾಪುಟದ ಆರ್ಟ್‌ಬೋರ್ಡ್ ಉಪಯೋಗ.

* 'ಮಕ್ಕಳ ಕೈಗೆ ಸರಸ್ವತಿ' ಯೋಜನೆ – ಹಿಂದುಳಿದ ಸಮಾಜವರ್ಗಗಳ ಮಕ್ಕಳಿಗೆ ಸುಮಾರು ೨,೦೦,೦೦೦ ಭಾರತ-ಭಾರತಿ ಪುಸ್ತಕಗಳ ಹಂಚಿಕೆ.

* ಜನರಿಂದಲೇ ಸಂಗ್ರಹವಾದ ಒಟ್ಟು ಠೇವಣಿ ಮೊತ್ತ ಸುಮಾರು ೭,೪೦,೦೦೦; ಠೇವಣಿದಾರರ ಸಂಖ್ಯೆ ೬೫೫.

* ಯೋಜನೆಯ ಅವಧಿ: ೮ ವರ್ಷ, ೬೭ ದಿನಗಳು.

# ಆಲೋಚನೆ-ಕಲ್ಪನೆ

* ನಂ. ಮಧ್ಯರಾವ್

ಅದು ಆದದ್ದು ಹೀಗೆ.

ಮೂರು ವರ್ಷಗಳ ಹಿಂದೆ, ಮೂವತ್ತು ವರ್ಷಗಳ ಸುಮಾರು ಕಾಲ ನಾನೊಬ್ಬ ನಿತ್ಯ ಪ್ರವಾಸಿ. ಒಬ್ಬ ಅಲೆಮಾರಿ ಅನ್ನಿ. ರೈಲು ಬಸ್ಸುಗಳಲ್ಲೇ ಹೆಚ್ಚು ವಾಸ!

ಬೆಂಗಳೂರಿಗೆ ಬಂದಾಗ ಶಂಕರಪುರದಲ್ಲಿರುವ ಕೇಶವಕೃಪಾದಲ್ಲಿ ಇರುತ್ತಿದ್ದೆ. ಕೇಶವಕೃಪಾ ನನ್ನ ಬಾಳಸಂಗಾತಿಗಳಲ್ಲಿ ಒಂದು. ಅದರದೇ ಒಂದು ದೊಡ್ಡ ಕತೆ. ನಾನು ಬೆಳೆದಿದ್ದು-ಅರಳಿದ್ದು ಅಲ್ಲೇ.

ಕೇಶವಕೃಪಾದಲ್ಲಿ ನಿತ್ಯ ಬೆಳಗ್ಗೆ ಅಲ್ಲಿರುವವರೆಲ್ಲ ಸೇರಿ ಪ್ರಾತಃಸ್ಮರಣೆ ಎಂಬ ಶ್ಲೋಕಗಳನ್ನು ಹೇಳುವುದು ವಾಡಿಕೆ. ಇದನ್ನು ಹೇಳುವಾಗ, ನಮ್ಮ ದೇಶದಲ್ಲಿ ಆಗಿಹೋದ ನೂರಾರು ಮಹಾವ್ಯಕ್ತಿಗಳ ಹೆಸರುಗಳು ಬರುತ್ತವೆ. ಆಗ ಅವರನ್ನು ಕುರಿತು ಆಲೋಚನೆ ಬರುತ್ತಿತ್ತು. ಅವರುಗಳು ಯಾರು? ಅವರ ಸ್ಮರಣೆ ಏಕೆ? ಎಲ್ಲಿ ಹುಟ್ಟಿದರು? ಏನೇನು ಮಾಡಿದರು? ಮೊದಲಾದ ನೂರಾರು ಪ್ರಶ್ನೆಗಳು, ತಲೆತುಂಬ ತುಂಬುತ್ತಿತ್ತು.

ಅವರೆಲ್ಲರನ್ನು ಕುರಿತು ಒಂದೊಂದು ಪುಸ್ತಕ ಬರೆದರೆ? ಅಬ್ಬಾ, ಬಲು ಕಷ್ಟ! ನಮ್ಮ ದೇಶವಂತೂ ಸಾವಿರಾರು ಉನ್ನತ ವ್ಯಕ್ತಿಗಳನ್ನು ಪಡೆದ ಬೀಡು. ವಿವರಗಳನ್ನು ಹುಡುಕಿ ಸಮಗ್ರವಾಗಿ ಗ್ರಂಥ ರಚಿಸುವುದು.... ಕಷ್ಟ! ಅನೇಕ ದಶಕಗಳ ಕೆಲಸ. ಲಕ್ಷಾಂತರ ರೂಪಾಯಿಗಳ ಕೆಲಸ. ನೂರಾರು ಜನ ಕೂಡಿ ಅದನ್ನೇ ಮಾಡುವ ಕೆಲಸ....

ಹಾಗಾದರೆ? ಮುಂದೆ? ದಾರಿ?.... ಆಲೋಚನೆಯು ದುಂಬಿ ಕೊರೆಯುತ್ತಲೇ ಹೋಯಿತು.

ಓಡಾಡುತ್ತಿರಬೇಕಾದರೆ ಇಂತಹುದೇ ಇನ್ನೂ ಅನೇಕ ಆಲೋಚನೆಗಳು. ಬಸ್ಸಿಗೆ ಕಾಯುವಾಗ, ಬಸ್ಸಿನೊಳಗೆ ಕೂತಿದ್ದಾಗ, ಅಂತೆಯೇ ರೈಲಿನಲ್ಲಿ-ಎಡೆಬಿಡದ ಆಲೋಚನೆಗಳು.

ಸಮಗ್ರ ಕರ್ನಾಟಕವನ್ನೇ ಪ್ರಸರಿಸುವ ಕೆಲಸ ಮಾಡಬೇಕು.

ಅದು ಭಾರತದ ಇನ್ನುಳಿದ ಭಾಗಗಳಿಗೆ ಮಾದರಿ ಆಗಬೇಕು.

ಕೇವಲ ಸಂಸ್ಥೆ ಕಟ್ಟಿ ನಿಲ್ಲಬಾರದು. ಅದೊಂದು ಚಳವಳಿ ಆಗಬೇಕು.

ಹೊಸ ಜನ, ಹೊಸ ಆಲೋಚನೆಗಳು ಹರಿಯಬೇಕು.

ಹೊಸ ಪೀಳಿಗೆ–ಒಂದೊಂದರಲ್ಲೂ ಹೊಸ ಆಲೋಚನೆಗಳು ಹುಟ್ಟಿ ಬರುತ್ತವಲ್ಲವೇ ?

ಯುವಕರನ್ನು ಮುಂದೆ ತರಬೇಕು. ಅವರಿಗೆ ಅವಕಾಶಗಳನ್ನು ಕೊಟ್ಟು ನೋಡಬೇಕು. ಪ್ರತಿಭೆ, ತ್ಯಾಗ, ನಿಷ್ಠೆಗಳಿಗೆ ಮಾನ್ಯತೆ ನೀಡಬೇಕು. ಹೀಗೆ ಇನ್ನೂ ಅನೇಕ ಆಲೋಚನೆಗಳು, ಸಾಲುಗಟ್ಟಿ ಸಾಗುತ್ತಿದ್ದ ಆಲೋಚನೆಗಳು ಬಸ್ಸು ರೈಲುಗಳ ವೇಗಕ್ಕಿಂತ ಅತಿ ವೇಗದಲ್ಲಿ ಓಡುತ್ತಿದ್ದವು.

ಒಮ್ಮೆ ರೈಲಿನಲ್ಲಿ ಹೋಗುತ್ತಿದ್ದೆ. ತಲೆ ತುಂಬ ಯೋಚನೆಗಳು. ರೈಲಿನಲ್ಲಿ ಒಂದು ಚಿಕ್ಕ ಸಂಸಾರ. ತಂದತಾಯಿಯರೊಂದಿಗೆ ಮಕ್ಕಳು. ಕಿಟಕಿಯಿಂದ ಹೊರಗಡೆ ನೋಡುವುದು, ಸ್ವಲ್ಪ ಆಟವಾಡುವುದು, ಚೇಷ್ಟೆ ಮಾಡುವುದು, ಆಯಿತು. ಅನಂತರ ಬೇಸರ. ಕೊನೆಗೆ ಚೀಲಗಳನ್ನು ಕೆದಕಿ, ಪುಸ್ತಕಗಳನ್ನು ಹೊರತೆಗೆದವು ಆ ಪುಟಾಣಿಗಳು. ಅವುಗಳಲ್ಲಿ ತಲ್ಲೀನವಾದವು. ಬಗೆಬಗೆಯ, ಬಣ್ಣಬಣ್ಣದ ಚಿತ್ರಗಳು. ಅಂದವಾಗಿ ಅಚ್ಚಾಗಿದ್ದ ಆ 'ಕಾಮಿಕ್ಸ್' ಪುಸ್ತಕಗಳಲ್ಲಿ ಆ ಮಕ್ಕಳ ಮನಸ್ಸು ನಾಟಿಹೋಯಿತು. ಮಂತ್ರ ಹಾಕಿದಂತೆ ಒಂದೊಂದು ಪುಸ್ತಕ ಹಿಡಿದು ಒಂದೊಂದು ಕಂದಮ್ಮಗಳು ಕೂತವು.

ರೈಲು ಚಲಿಸುತ್ತಿತ್ತು. ದೊಡ್ಡವರ ಮಾತು ಸಾಗುತ್ತಿತ್ತು. ಮಕ್ಕಳ ಮನಸ್ಸು ಮಾಯಾಲೋಕದಲ್ಲಿತ್ತು. ನನ್ನ ಆಲೋಚನಗಳೂ ಓಡುತ್ತಿದ್ದವು.

ಈ ಮಕ್ಕಳೇ ಅರಳುವ ಯುವಜನರಲ್ಲವೇ ?

ಆ ಯುವಕರಲ್ಲವೇ ಈ ದೇಶದ ಭಾಗ್ಯವಿಧಾತರು ?

ಈ ಮಕ್ಕಳನ್ನೇ ದೇಶದ ಆಸ್ತಿಯನ್ನಾಗಿ ಪರಿವರ್ತಿಸಿದರೆ–

ಈ ಬಡ ದೇಶ ಭಾಗ್ಯಶಾಲಿ ಆದೀತಲ್ಲವೇ ?

ಮನಸ್ಸಿಗೂ ಬುದ್ಧಿಗೂ ಆರೋಗ್ಯಕರ ಆಹಾರ ಕೊಟ್ಟರೆ ನಮ್ಮ ಮಕ್ಕಳೂ ಎತ್ತರವಾಗಿ ಬೆಳೆದಾರು.

ಯಾರಾದರೂ, ಹೇಗಾದರೂ, ಆರಂಭಿಸಬೇಕು—ಕೆಲಸ. ಮುಂದೆ ನೋಡೋಣ. ಕ್ಷೇತ್ರ ಬಲು ದೊಡ್ಡದು. ಜೀವನ ಚಿಕ್ಕದು. ಆದರೆ—ಕೆಲಸ ಆರಂಭವಾದರೆ ಯಾರಾದರೂ ಮುಂದೆ ಸಾಗಿಸುತ್ತಾರೆ. ಸತ್ಸಂಕಲ್ಪ, ನಿಃಸ್ಪೃಹತೆ ಇದ್ದರಾಯಿತಲ್ಲವೇ ?

ಆಲೋಚನೆಗಳು ಕನಸಾದವು. ಕನ್ನಡದ ಮಕ್ಕಳಿಗೆ ಭಾರತದ ಮಹಾಚೇತನಗಳ ಜೀವನಚರಿತ್ರೆಯನ್ನು ಪುಟ್ಟದಾಗಿ ಅಧಿಕೃತವಾಗಿ, ಚಿತ್ರವತ್ತಾಗಿ, ಅವುಗಳ ಮನಸ್ಸನ್ನು ಸೂರೆಗೊಳ್ಳುವಂತೆ ಪ್ರಕಟಿಸಬೇಕು. ಪುಸ್ತಕದ ಆಕಾರ,

ನೋಟ ಆಟದ ಸಾಮಾನಿನಂತೆ, ನುಣುಪಾಗಿ, ಹೊಳೆಯುವಂತೆ ಇರಬೇಕು. ಕಿಸೆಯಲ್ಲಿ ಇಟ್ಟುಕೊಂಡು, ಬೇಕಾದಾಗ ಆಟಿಕೆಯಂತೆ ಆಡುತ್ತಾ ಸಂಗಡಿಗರೊಡನೆ ಮೋಜುಮಾಡುತ್ತಾ ಇರುವ ಮಕ್ಕಳ ಸ್ಪಷ್ಟವಾದ ದೃಶ್ಯ ಕಣ್ಣಿಗೆ ಕಟ್ಟಿತು. ಕನಸು ಚಲನಚಿತ್ರದಂತೆ ಪ್ರದರ್ಶಿತವಾಯಿತು. ಅದೆಷ್ಟೋ ವೇಳೆ ಆ ನೆನಪಿನ ಚಿತ್ರಗಳು 'ಥ್ರಿಲ್' ತಂದವು. ಮನಸ್ಸು ಹುಚ್ಚಾಯಿತು. ಸಾಧಿಸಲೇಬೇಕು. ಹಟದ ಭೂತ ಬೆನ್ನೇರಿತು.

ಇನ್ನು ಈ ಹುಚ್ಚಿನ ಹಲವು ಮುಖಗಳು – ಚಿಂತೆ. ಸಂಪಾದಕರು, ಬರಹಗಾರರು, ಸಿಬ್ಬಂದಿ, ಮುದ್ರಣ ಯಂತ್ರಗಳು, ಆಕಾರ, ಚಿತ್ರಗಳು, ಚಿತ್ರಗಾರರು, ಮಾರಾಟದ ವ್ಯವಸ್ಥೆ, ಹಣ ಇತ್ಯಾದಿ ಇತ್ಯಾದಿ – ಎಲ್ಲಾ ಚಿಂತೆಗಳು.

ಹೀಗೇ ಯೋಚಿಸುತ್ತಾ ಒಂದು ವರ್ಷ ಉರುಳಿತು. ನಾನು ಯಾರಿಗೂ ಈ ವಿಷಯ ತಿಳಿಸಲೇ ಇಲ್ಲ.

ಅನಂತರ ಸೋಮನಹಳ್ಳಿಯಲ್ಲಿ ನಡೆದ ಒಂದು ಯುವಕರ ಶಿಬಿರದಲ್ಲಿ ಶ್ರೀ ಜಯದೇವ್ ಹತ್ತಿರ ಈ ಯೋಜನೆಯನ್ನು ಮೊಟ್ಟಮೊದಲು ಪ್ರಸ್ತಾಪಿಸಿದೆ. ಆಗ ರಾಷ್ಟ್ರೋತ್ಥಾನ ಪರಿಷತ್ತು ಆರ್ಥಿಕವಾಗಿ ಕಷ್ಟದಲ್ಲಿದ್ದ ಕಾಲ. ಸಿಬ್ಬಂದಿಗೆ ತಿಂಗಳ ಸಂಬಳ ಹೇಗೆ ಪೂರೈಸುವುದು ಎಂಬುದೇ ಇದ್ದ ದೊಡ್ಡ ಪ್ರಶ್ನೆ.

ಪುನಃ ಪುನಃ ಪ್ರಸ್ತಾಪಿಸತೊಡಗಿದೆ. ಅನೇಕರೊಡನೆ ಚರ್ಚಿಸಿ ಅವರ ಪ್ರತಿಕ್ರಿಯೆ ಪಡೆಯಲು ಯತ್ನಿಸಿದೆ.

ಈ ನನ್ನ ಕನಸನ್ನು ನನಸು ಮಾಡುವುದರಲ್ಲಿ ಎರಡು ಭುಜಗಳಂತೆ ಕೆಲಸ ಮಾಡಲು ಶ್ರೀ ಜಯದೇವ್ ಮತ್ತು ಶ್ರೀ ಅರಕಲಿ ನಾರಾಯಣ್ ಮುಂದಾದರು. ಹಣ ಕೂಡಿಸಲು, ಕೊಟ್ಟ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಲು ಇವರಿಬ್ಬರ ಸೇವೆಯನ್ನು ಮರೆತರೆ ದೊಡ್ಡ ಲೋಪವಾದೀತು. ಅದೆಷ್ಟು ಬಾರಿ ನಾನು ಅವರನ್ನು ತರಾಟೆಗೆ ತೆಗೆದುಕೊಂಡಿದ್ದೇನೋ, ಸಣ್ಣಪುಟ್ಟ ಕೊರತೆಗಳಿಗಾಗಿ. ನನ್ನ ಜೊತೆ ಜೊತೆಗೂ ಆರಂಭದಿಂದಲೂ—ಈ ಯೋಜನೆಯ ಹೆಸರನ್ನು ನಿರ್ಧರಿಸುವುದರಿಂದ ಹಿಡಿದು ಇವತ್ತಿನವರೆಗೂ ಭಾರತ–ಭಾರತಿಯ ಆತ್ಮದಂತೆ ಕೆಲಸ ಮಾಡಿಕೊಂಡು ಬಂದಿರುವ ಶ್ರೀ ತಿರು ನನ್ನ ಇನ್ನೊಬ್ಬ ದಿಗ್ಗಜ. ಯೋಜನೆಗಾಗಿ ಈತ ಯಾವ ಕೆಲಸ ಮಾಡಿಲ್ಲ ? ತೆರೆಯ ಹಿಂದೆಯೇ ಇದ್ದುಕೊಂಡು ಬಂದಿರುವ ಈತನ ಸೇವೆ ಅವಿಸ್ಮರಣೀಯ.

ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಥಮ ಅಧ್ಯಕ್ಷರಾದ ಸ್ವರ್ಗೀಯ ಶ್ರೀ ಎಂ. ಗೋವಿಂದರಾವ್ ಅವರ ಪ್ರೀತಿ ಅಮೋಘವಾದದ್ದು. ತಮ್ಮ ಕಾರಿನ ಡಿಕ್ಕಿ ಭರ್ತಿ ಭಾರತ–ಭಾರತಿ ಪುಸ್ತಕಗಳನ್ನು ತುಂಬಿಕೊಂಡು ಸಿಹಿ ಮಿಠಾಯಿ ಹಂಚುವಂತೆ, ಮಕ್ಕಳಿಗೆಲ್ಲ ಉಚಿತವಾಗಿ ಹಂಚುತ್ತಿದ್ದ ದೃಶ್ಯ ಕಣ್ಣಿಗೆ ಕಟ್ಟಿದಂತಿದೆ.

ಕೇಶವಕೃಪಾ ಋಷಿ, ಸಂಘದ ನಾಯಕ ಶ್ರೀ ಯಾದವರಾವ್‌ಜೀ ಅವರನ್ನು ಹೇಗೆ ಮರೆಯಲಿ? ತಾಯಿಯಂತೆ ನನ್ನನ್ನು ಪ್ರೀತಿಸುತ್ತಾ, ಭಾರತ–ಭಾರತಿ ಯೋಜನೆಯೂ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಪರಿಹಾರ ನೀಡುತ್ತಾ, ಸ್ಫೂರ್ತಿಯ ಚಿಲುಮೆಯಾಗಿದ್ದ ಅವರಿಗೆ ನಾನು ಯಾವಾಗಲೂ ಋಣಿ.

ಕನ್ನಡದ ಪ್ರತಿಭಾವಂತ ಲೇಖಕರೂ, ಕವಿಗಳೂ ಆದ ಶಿವರಾಮು ಜೊತೆ ಜೊತೆಗೂ ದುಡಿದಿದ್ದಾರೆ. ನನ್ನ ಸಲಹೆಗಾರರಾಗಿ, ಬರಹಗಾರರಾಗಿ ದುಡಿದಿದ್ದಾರೆ. ಎಷ್ಟು ಹೊತ್ತಿನಲ್ಲಾದರೂ ಸರಿ, ಯಾವ ಕೆಲಸಕ್ಕಾದರೂ ಸರಿ ಶಿವರಾಮು ಸಿದ್ಧ. ಅವರ ಪ್ರತಿಭೆಯ 'ಫ್ಯಾನ್' ನಾನು ಆಗಿಬಿಟ್ಟಿದ್ದೇನೆ.

ಭಾರತ–ಭಾರತಿ ಯೋಜನೆ ಸಿದ್ಧವಾದ ಮೇಲೆ, ಈ ಯೋಜನೆಯ ಮಾಲೆಗೆ ಯಾರು ಪ್ರಧಾನ ಸಂಪಾದಕರು ಎಂಬ ಚಿಂತೆಯಿದ್ದಾಗ ತೋರಿದ ಹೆಸರು ಶ್ರೀ ಎಲ್. ಎಸ್. ಶೇಷಗಿರಿರಾಯರದು. 'ಇದು ಆಗಬೇಕಾದ ಕೆಲಸ; ನಾನು ನಿರ್ವಹಿಸಬಲ್ಲೆನೇ ಪ್ರಧಾನ ಸಂಪಾದಕನಾಗಿ ?' ಎಂಬ ಸಂಶಯದಿಂದಲೇ ಒಪ್ಪಿಕೊಂಡ ಶ್ರೀ ರಾಯರಿಗೆ ನಾನು ಚಿರಋಣಿ. ಹತ್ತಿರ ಹೋದಷ್ಟೂ ಅವರು ಎಷ್ಟು ಎತ್ತರ ಎಂಬುದನ್ನು ಕಂಡಿದ್ದೇನೆ.

ನನ್ನೊಂದಿಗೂ ಸುತ್ತಾಡಿ ಭಾರತ–ಭಾರತಿಯನ್ನು ರಾಜ್ಯದ ಮೂಲೆ ಮೂಲೆಗೂ ಕೊಂಡೊಯ್ಯುವುದರಲ್ಲಿ ಶ್ರೀ ಕೊ. ರಾ. ರಾಜಗೋಪಾಲ್ ಪಾತ್ರ ಹಿರಿದಾದ್ದು. ಪ್ರೆಸ್ ರಾಘು, ಬಾಬು ಕೃಷ್ಣಮೂರ್ತಿ, ಹೆಚ್. ನಾಗರಾಜ – ಇವರುಗಳ ಸೇವೆಯನ್ನು ಹೇಗೆ ಮರೆಯಲಿ ?

ಭಾರತ–ಭಾರತಿ ಪುಸ್ತಕ ಸಂಪದವು ಕನ್ನಡ ಮಕ್ಕಳ ನಿಜವಾದ ಸಂಪತ್ತು. ಕನ್ನಡದ ಕಂದಮ್ಮಗಳು ಇವನ್ನು ಮೆಚ್ಚಿದ್ದಾರೆ. ಸಾಕು, ನಮ್ಮ ಶ್ರಮ ಸಾರ್ಥಕ.

# ಸಂಪಾದನೆ-ಅನುಭವ

* ಎಲ್. ಎಸ್. ಶೇಷಗಿರಿ ರಾವ್

ಭಾರತ-ಭಾರತಿ ಪುಸ್ತಕ ಸಂಪದದ ಹಸ್ತಪ್ರತಿಗಳ ಸಂಪಾದಕೀಯ ಕೆಲಸ ಒಂದು ಬಗೆಯ ಶಿಕ್ಷಣವೇ.

ಒಂದು ಬಿಗಿಯಾದ ಚೌಕಟ್ಟಿನಲ್ಲಿ ಕೆಲಸ ಮಾಡಲು ಮೊದಲೇ ಸಂಪಾದಕ ಮಂಡಳಿ ನಿರ್ಧರಿಸಿತ್ತು. ಪ್ರತಿ ಪುಸ್ತಕದಲ್ಲಿ ಓದಲು ನಲವತ್ತು ಪುಟಗಳ ಸಾಮಗ್ರಿ ಇರಬೇಕು, ಮಧ್ಯದ ಎರಡು ಪುಟಗಳನ್ನು ತುಂಬುವ ಒಂದು ಚಿತ್ರ ಇರಬೇಕು, ಹತ್ತು ಪುಸ್ತಕಗಳ ಕಂತಿನಲ್ಲಿ ವೈವಿಧ್ಯ ಇರಬೇಕು, ಮೊದಲೇ ನಿರ್ಧರಿಸಿದ ದಿನಾಂಕಗಳಲ್ಲಿ ಬಿಡುಗಡೆಯಾಗಬೇಕು – ಹೀಗೆ ಪುಸ್ತಕದ ಆಕಾರ, ಬಿಡುಗಡೆ ಇಂತಹ ವಿಷಯಗಳನ್ನು ನಮಗೆ ನಾವೇ ಸ್ಪಷ್ಟ ಮಾಡಿಕೊಂಡಿದ್ದೆವು. ಇದರಿಂದ ನಮ್ಮ ಕೆಲಸಕ್ಕೆ ಶಿಸ್ತು ಬಂದಿತ್ತು. ಪುಸ್ತಕದ ವಸ್ತು, ನಿರೂಪಣೆ, ಭಾಷೆ ಇವನ್ನು ಕುರಿತೂ ಸ್ಪಷ್ಟ ಸೂತ್ರಗಳಿದ್ದವು. ಕೀರ್ತಿಕಾಯರಾದವರನ್ನು ಮಾತ್ರ ಕುರಿತು ಪುಸ್ತಕ ಬರೆಸುವುದು; ಭಾಷೆ ಸರಳವಾಗಿರಬೇಕು; ಹತ್ತು ಹನ್ನೆರಡು ವರ್ಷದ ಮಕ್ಕಳು ಹಿರಿಯರ ನೆರವನ್ನು ಕೋರದೆ ತಾವೇ ಓದಲು ಸಾಧ್ಯವಾಗಬೇಕು; ಪುಸ್ತಕ ಓದಿಸಿಕೊಂಡು ಹೋಗುವಂತಿರಬೇಕು; ಅಂಕಿಗಳು, ವಿವರಗಳು ಇವನ್ನೆ ತುಂಬಿ ಪುಸ್ತಕವನ್ನು ದಾಖಲೆಯನ್ನಾಗಿ ಮಾಡದೆ, ಕೃತಿಯ ನಾಯಕರ ವ್ಯಕ್ತಿತ್ವದ ಘನತೆ, ಸಾಧನೆಯ ಮಹತ್ವ ಇವನ್ನು ಸ್ಪಷ್ಟವಾಗಿ ಮೂಡಿಸುವಂತೆ ನಿರೂಪಿಸಬೇಕು. ಆದರೆ ಪ್ರತಿ ವಿವರಕ್ಕೂ ಆಧಾರವಿರಬೇಕು. ಯಾವ ಮತದವರ ಅಥವಾ ಪಂಗಡದವರ ಮನಸ್ಸನ್ನೂ ನೋಯಿಸಬಾರದು. ಜೀವನದ ಎಲ್ಲ ಕ್ಷೇತ್ರಗಳಲ್ಲಿ ಹಿರಿಮೆ ಸಾಧಿಸಿದವರನ್ನು ಮಾಲೆಯಲ್ಲಿ ಪರಿಚಯ ಮಾಡಿಕೊಡಬೇಕು. ಹೀಗೆ ಕೆಲವು ಸೂತ್ರಗಳನ್ನು ರೂಪಿಸಿಕೊಂಡು ಕೆಲಸ ಪ್ರಾರಂಭಿಸಿದೆವು.

ಲೇಖಕ ಲೇಖಕಿಯರಿಂದ ಒಟ್ಟಿನಲ್ಲಿ ಸಿಕ್ಕ ಸಹಕಾರ ನಮ್ಮನ್ನು ಕೃತಜ್ಞತೆಯಿಂದ ಮೂಕರನ್ನಾಗಿ ಮಾಡುವಂತಹದು. ಮಕ್ಕಳ ಕೆಲಸ ನಾಡಿನ ಕೆಲಸ ಎಂಬ ಧೈರ್ಯದಿಂದ ನಾವು ನಾಡಿನ ಅತ್ಯಂತ ಹಿರಿಯ ಲೇಖಕರಿಂದ ಪ್ರಾರಂಭಿಸಿ ಎಲ್ಲರನ್ನೂ ಸಹಕಾರ ಬೇಡಿದೆವು. ಎಂಬತ್ತು ದಾಟಿದ ಮಾಸ್ತಿಯವರು, ಬೇಂದ್ರೆ

ಯವರಿಂದ ಪ್ರಾರಂಭಿಸಿ ಎಲ್ಲರೂ ನಮ್ಮನ್ನು ತಮ್ಮ ವಿಶ್ವಾಸ, ಸಹಕಾರಗಳಿಂದ ಬೆರಗುಗೊಳಿಸಿದರು.

ಕೆಲಸ ಪ್ರಾರಂಭಿಸುತ್ತಲೇ ಸಮಸ್ಯೆಗಳೂ ಪ್ರಾರಂಭವಾದವು. ನಾವು ಹಸ್ತಪ್ರತಿ ಬರೆದು ಕೊಡಿ ಎಂಬ ಪ್ರಾರ್ಥನೆಯೊಂದಿಗೇ, ಲೇಖಕರ ತಾಳ್ಮೆ ಪರೀಕ್ಷಿಸುವಷ್ಟು ಉದ್ದದ ಸೂಚನಾಪತ್ರವನ್ನೂ ಕಳುಹಿಸುತ್ತಿದ್ದೆವು. ನಮ್ಮ ಮಾಲೆಯ ಗುರಿ, ಮಿತಿ, ನಮ್ಮ ಅಗತ್ಯಗಳು, ಎಲ್ಲವನ್ನೂ ವಿವರಿಸುತ್ತಿದ್ದೆವು. ಬಹುಮಂದಿ ಲೇಖಕ ಲೇಖಕಿಯರು ಸಹನೆ ಕಳೆದುಕೊಳ್ಳದೆ ನಮ್ಮ ಪ್ರಾರ್ಥನೆಗಳನ್ನು ಗಮನಿಸಿ ಹಸ್ತಪ್ರತಿ ಸಿದ್ಧಮಾಡಿದ್ದಾರೆ. ಆದರೂ ಒಮ್ಮೊಮ್ಮೆ ಸಮಸ್ಯೆಗಳು ಉದ್ಭವವಾದವು.

ಒಂದು ಉದಾಹರಣೆ. ಪ್ರಾರಂಭದಲ್ಲಿಯೆ ಲೇಖಕರೊಬ್ಬರು ಒಬ್ಬ ಪೌರಾಣಿಕ ವ್ಯಕ್ತಿಯನ್ನು ಕುರಿತು ಹಸ್ತಪ್ರತಿ ಕಳುಹಿಸಿದರು. ಅದರ ಕಥೆ ರಂಜಕವಾಗಿದ್ದರೂ ರಾಮಾಯಣ ಮಹಾಭಾರತ ಮತ್ತಿತರ ಪೌರಾಣಿಕ ಗ್ರಂಥಗಳಲ್ಲಿ ಕಥೆಯ ಮುಖ್ಯ ಘಟನೆಗಳಿಗೂ ಆಧಾರ ಕಾಣಲಿಲ್ಲ. ಅವರಿಗೆ ಪತ್ರ ಬರೆದಾಗ, 'ಘಟನೆಗಳನ್ನು ಯಕ್ಷಗಾನ ಮತ್ತು ಕೆಲವು ನಾಟಕಗಳಿಂದ ತೆಗೆದುಕೊಂಡಿದ್ದೇನೆ' ಎಂದರು. ಪೌರಾಣಿಕ ವ್ಯಕ್ತಿಗಳ ವಿಷಯ ಬರೆಯುವಾಗಲೂ ಅವರು ಮೊದಲು ಕಾಣಿಸಿಕೊಳ್ಳುವ ಪ್ರಾಚೀನ ಕೃತಿಗಳ ಆಧಾರ ಬೇಕು ಎಂದು ಹೇಳಿ, ಇಡೀ ಕೃತಿಯನ್ನು ಮತ್ತೆ ಬರೆಯಬೇಕಾಯಿತು. ಈ ಆಧಾರದ ಸಮಸ್ಯೆ ಹಲವು ರೂಪಗಳನ್ನು ತಾಳಿತು. 'ಇದು ಆಧಾರ' ಎಂದು ಸ್ವೀಕರಿಸಬೇಕಾದರೆ ಆಧಾರವೇನು ? ಚರಿತ್ರಕಾರರಲ್ಲಿ ತೀವ್ರ ಭಿನ್ನಾಭಿಪ್ರಾಯ ಇರುತ್ತದೆ. ಯಾರ ಪುಸ್ತಕವನ್ನು ಒಪ್ಪುವುದು ? ಇಂತಹ ಸಮಸ್ಯೆಗಳನ್ನು ಬಿಡಿಸುವಾಗ ನಮಗೆ ನೆರವಾದ ವಿದ್ವದ್ವರ್ಗದ ಉಪಕಾರ ಬಹು ದೊಡ್ಡದು. ಯಾವ ಅನುಮಾನ ಬರಲಿ, ಆ ಕ್ಷೇತ್ರದಲ್ಲಿ ಅಧಿಕಾರದಿಂದ ಮಾತನಾಡಬಲ್ಲವರ ಬಳಿ ಹೋಗಿ ಅವರ ಮಾರ್ಗದರ್ಶನ ಪಡೆದಿದ್ದೇವೆ. ಅವರು ತಮ್ಮ ಅಭಿಪ್ರಾಯ ತಿಳಿಸಿದ್ದಲ್ಲದೆ ಅದಕ್ಕೆ ಆಧಾರಗಳನ್ನು ಕೊಟ್ಟು ಉಪಕಾರ ಮಾಡಿದ್ದಾರೆ.

ಇದಕ್ಕೆ ಅಂಟಿದಂತೆ ಮತ್ತೊಂದು ಸಮಸ್ಯೆ ಪವಾಡಗಳದು. ಪುರಾಣದ ವ್ಯಕ್ತಿಗಳ ವಿಷಯದಲ್ಲಿಯೂ ಇದು ಸ್ವಲ್ಪಮಟ್ಟಿಗೆ ಕಾಡಿತು. ಪುರಾಣಪುರುಷರ ಕಥೆಗಳಲ್ಲಿ ಅಸಾಧಾರಣ ಘಟನೆಗಳು ಬರುತ್ತವೆ, ಜನ ಅವನ್ನು ಸ್ವೀಕರಿಸಿದ್ದಾರೆ. ಅಕ್ಷರಶಃ ಕೆಲವರು ನಂಬಬಹುದು, ಸಾಂಕೇತಿಕವಾಗಿ ಕೆಲವರು ವ್ಯಾಖ್ಯಾನ ಮಾಡಬಹುದು. ಸಾಗರವನ್ನು ಹಾರಿದ ಹನುಮಂತ, ಸಾಗರವನ್ನು ಆಪೋಶನ ಮಾಡಿಕೊಂಡ ಅಗಸ್ತ್ಯ, ಬೆಂಕಿಯನ್ನು ಹೊಕ್ಕು ಎದ್ದು ಬಂದ ಸೀತೆ, ಹೊಸ ಜಗತ್ತನ್ನು ಸೃಷ್ಟಿಸ ಹೊರಟ ವಿಶ್ವಾಮಿತ್ರ, ಎರಡು ಹೆಜ್ಜೆಗಳಿಂದ ಭೂಮಿ ಆಕಾಶಗಳನ್ನು ಅಳೆದ

ವಾಮನ—ಇವರೆಲ್ಲ ಜನಮನದಲ್ಲಿ ಸ್ಥಿರವಾಗಿ ನಿಂತವರು. ಪೌರಾಣಿಕ ವ್ಯಕ್ತಿಗಳನ್ನು ಕುರಿತ ಪುಸ್ತಕಗಳಲ್ಲಿಂತಹ ಅದ್ಭುತಗಳನ್ನು ವರ್ಣಿಸಿ ಓದುಗರನ್ನು ರಂಜಿಸುವುದು ಮುಖ್ಯವಾಗಿರಬಾರದು, ವ್ಯಕ್ತಿಗಳ ಹಿರಿಮೆ ಮನದಟ್ಟಾಗಬೇಕು ಎಂದೇ ಪ್ರಯತ್ನಿಸಿದ್ದೇವೆ. ಉದಾಹರಣೆಗೆ, ಅಗಸ್ತ್ಯನನ್ನು ಮನುಷ್ಯನ ಸಾಹಸದ ಪ್ರತೀಕವಾಗಿ ಕಂಡಿದ್ದೇವೆ. ಮೂಲ ಕಥೆಗಳ ಮನೋಧರ್ಮಕ್ಕೂ ಅಪಚಾರವಾಗದೆ ಇಂದಿನ ಜೀವನಕ್ಕೆ ಪ್ರಕೃತವಾದುದಕ್ಕೆ ಮಹತ್ವ ನೀಡಿದ್ದೇವೆ. ಆದರೆ, ಕೆಲವರು ಚಾರಿತ್ರಿಕ ವ್ಯಕ್ತಿಗಳ ವಿಷಯದಲ್ಲಿ ಅದ್ಭುತಗಳು, ಪವಾಡಗಳು ಜನರ ಮನಸ್ಸಿನಲ್ಲಿ ಹೆಣೆದುಕೊಂಡಿವೆ. ಕಾಳಿದಾಸ, ಕುಮಾರವ್ಯಾಸ, ಬಸವೇಶ್ವರರು, ರಾಘವೇಂದ್ರಸ್ವಾಮಿಗಳು ಎಲ್ಲ ಚಾರಿತ್ರಿಕ ವ್ಯಕ್ತಿಗಳೇ. ಪವಾಡಗಳಿಗೆ ಮಹತ್ವಕೊಟ್ಟು ಪವಾಡಗಳಿಂದಲೇ ಅವರು ಸ್ಮರಣೀಯ ಎನ್ನುವ ಭಾವನೆ ಮೂಡಿಸುವುದು ನಮ್ಮ ಉದ್ದೇಶವಲ್ಲ. ಆದರೆ ಪವಾಡಗಳನ್ನು ಸಂಪೂರ್ಣವಾಗಿ ಕೈಬಿಟ್ಟರೆ ಜನರ ಮನಸ್ಸಿನಲ್ಲಿ ನೆಲೆಸಿರುವ ಮೂರ್ತಿಗೂ ನಾವು ಕೆತ್ತಿ ನಿಲ್ಲಿಸುವ ಮೂರ್ತಿಗೂ ಸಾದೃಶ್ಯವಿಲ್ಲದೆ ಹೋಗುತ್ತದೆ. ಇಂತಹ ಸಂದರ್ಭಗಳಲ್ಲಿ ಪವಾಡವನ್ನು ಸೂಚಿಸಿದೆ; 'ಹೀಗೆ ಹೇಳುತ್ತಾರೆ', 'ಹೀಗೆ ಭಕ್ತರು ನಂಬುತ್ತಾರೆ', 'ಹೀಗೆ ಒಂದು ಕಥೆ ಇದೆ' ಎಂದು ಸೂಚಿಸಿದ್ದೇವೆ. ಕೃತಿಯ ನಾಯಕರ ಮಾನವೀಯ ಸಾಧನೆಗೆ ಪ್ರಾಧಾನ್ಯ ಕೊಟ್ಟಿದ್ದೇವೆ. ಕೆಲವೊಮ್ಮೆ ಲೇಖಕರು ಈ ದೃಷ್ಟಿಯನ್ನು ಸಂಪೂರ್ಣವಾಗಿ ಒಪ್ಪದಿದ್ದುದುಂಟು. 'ಅವರು ಪವಾಡ ಮಾಡುವ ಶಕ್ತಿ ಬಂದದ್ದೇ ಅವರ ಸಾಧನೆಯಿಂದ; ಪವಾಡಗಳು ಅವರ ಸಾಧನೆಯ ಅಭಿವ್ಯಕ್ತಿ, ಅವರು ಇತರರಂತೆ ಮನುಷ್ಯರಾಗಿ ಹುಟ್ಟಿ ಇತರರನ್ನು ಮೀರಿ ಎತ್ತರ ಬೆಳೆದರೆಂಬುದಕ್ಕೆ ಎದ್ದು ಕಾಣುವ ಸಾಕ್ಷಿ' ಎಂದು ಅಭಿಪ್ರಾಯಪಟ್ಟಿದ್ದಾರೆ. ಇಂತಹ ಸಂದರ್ಭದಲ್ಲಿ ಲೇಖಕರ ಅಭಿಪ್ರಾಯಕ್ಕೂ ಗೌರವ ಕೊಟ್ಟಿದ್ದೇವೆ.

ಹಸ್ತಪ್ರತಿಗಳ ಸಂಪಾದನೆ (ಎರಡು ಅರ್ಥಗಳಲ್ಲೂ!) ಪ್ರಾರಂಭಿಸಿದ ನಂತರ ಮತ್ತೊಂದು ಸಮಸ್ಯೆ ಎದುರಾಯಿತು. ನಮ್ಮ ಪುಸ್ತಕದ ಮಿತಿ ಮೂರುಸಾವಿರ ಪದಗಳು. ನಾವು ಆರಿಸಿಕೊಂಡ ಕೆಲವರು ಹಿರಿಯರ ಸಾಧನೆ ಎಷ್ಟು ಬೃಹತ್ತಾದುದೆಂದರೆ ಅವರನ್ನು ಕುರಿತು ಮಹಾಕಾವ್ಯಗಳನ್ನೆ ಬರೆಯಬಹುದು! ಶ್ರೀರಾಮ, ಶ್ರೀಕೃಷ್ಣ, ಸೀತೆ, ಬಾಹುಬಲಿ ಮುಂತಾದ ಪೌರಾಣಿಕ ವ್ಯಕ್ತಿಗಳನ್ನಾಗಲಿ, ಬುದ್ಧ, ಮಹಾವೀರ, ಗಾಂಧೀಜಿ, ಜಯಪ್ರಕಾಶ ನಾರಾಯಣ್, ಸಿ. ವಿ. ರಾಮನ್, ರವೀಂದ್ರರು, ವಿವೇಕಾನಂದರು, ಎಂ. ವಿಶ್ವೇಶ್ವರಯ್ಯನವರು, ಅಂಬೇಡಕರ್, ತಿಲಕರು, ಲೋಹಿಯಾ, ಮಾಳವೀಯ, ಝಾನ್ಸಿ ಲಕ್ಷ್ಮೀಬಾಯಿ, ಬಸವೇಶ್ವರರು, ನಿವೇದಿತಾ ಇಂತಹ ಚಾರಿತ್ರಿಕ ವ್ಯಕ್ತಿಗಳನ್ನಾಗಲಿ ಕುರಿತು ಮೂರುಸಾವಿರ ಪದಗಳಲ್ಲಿ ಪುಸ್ತಕ ಬರೆದುಕೊಡಿ ಎಂದು ಪ್ರಾರ್ಥಿಸುವಾಗ ನಮಗೇ ಅಳುಕು. ಆನೆಯನ್ನು ಕನ್ನಡಿಯಲ್ಲಿ ತೋರಿಸುವ ಈ ಪ್ರಯತ್ನ ಒಂದು ಸವಾಲೇ. ಏನನ್ನು ಹೇಳುವುದು, ಏನನ್ನು

ಬಿಡುವುದು ? (ಒಬ್ಬ [illegible] ಶಬ್ದಗಳ ಹಸ್ತಪ್ರತಿ ಕಳುಹಿಸಿದರು. "ಇದು ಹೆಚ್ಚಾಯಿತು, ಅರ್ಧಕ್ಕೆ ಇಳಿಸಿ" ಎಂದು ನಾವು ಪ್ರಾರ್ಥಿಸಿದೆವು. "ಎರಡು ಪುಸ್ತಕಮಾಡಿ" ಎಂದರು. "ಅದು ಸಾಧ್ಯವಿಲ್ಲ, ಈ ಮಾಲೆಯಲ್ಲಿ ಒಬ್ಬರನ್ನು ಕುರಿತು ಒಂದೇ ಪುಸ್ತಕ" ಎಂದು ನಮ್ಮ ಬಿನ್ನಹ. ಅವರು ಮಾಲೆಯ ಅಭಿಮಾನಿಗಳು, ತಮ್ಮ ಕೃತಿಯ ನಾಯಕ ಪಾತ್ರದ ಭಕ್ತರು. ಕಡೆಗೆ ನಮ್ಮ ವಿನಂತಿಗೆ ಒಪ್ಪಿ, 'ನೀವೇ ಯಾವ ಭಾಗಗಳನ್ನು ಬಿಡಬೇಕೋ ತೀರ್ಮಾನಿಸಿ' ಎಂದರು.) ನಮ್ಮ ಮಾಲೆಯ ಪುಸ್ತಕ ಕೃತಿಯ ನಾಯಕರನ್ನು ಕುರಿತು ಎಲ್ಲ ಮಾಹಿತಿಯನ್ನು ಕೊಡುವ ಗ್ರಂಥವಲ್ಲ, ನಾಯಕರನ್ನು ಪರಿಚಯ ಮಾಡಿಕೊಡುವ ಕೃತಿ ಅಷ್ಟೆ. ಆದರೆ ಕೆಲವರು ಪರ್ವತ ಸದೃಶ ವ್ಯಕ್ತಿಗಳ ಕಿರುಪರಿಚಯವನ್ನೂ ಮೂರುಸಾವಿರ ಶಬ್ದಗಳಲ್ಲಿ ಅಡಗಿಸುವುದು ಕಷ್ಟವೇ ಆಯಿತು. ಒಮ್ಮೊಮ್ಮೆ ನಮಗೂ ಅತೃಪ್ತಿ, ಎಷ್ಟೋ ಹೇಳಬೇಕಾದದ್ದನ್ನು ಬಿಟ್ಟೆವು ಎಂದು.

ಇದಕ್ಕೆ ಪ್ರತಿಯಾದ ಅನುಭವವೂ ಉಂಟು. ನಾವು ಲೇಖಕರನ್ನು ಮೊದಲ ಪತ್ರದಲ್ಲೆ ಪ್ರಾರ್ಥಿಸುತ್ತಿದ್ದೆವು : 'ಈ ವಯಸ್ಸಿನ ಮಕ್ಕಳಿಗೆ ಈ ಹಿರಿಯರ ವಿಷಯವನ್ನು ಹೇಳಲು ಮೂರುಸಾವಿರ ಶಬ್ದಗಳಷ್ಟು ಸಾಮಗ್ರಿ ಇಲ್ಲ ಎಂದು ತಮಗೆ ತೋರಿದರೆ ತಿಳಿಸಿ' ಎಂದು. ವಿದ್ವತ್ತು, ವೈಜ್ಞಾನಿಕ ಅಧ್ಯಯನ, ಸಂಗೀತದ ಪ್ರೌಢಿಮೆ, ಕಲೆಯ ಪ್ರಭುತ್ವ ಇಂತಹ ಸಾಧನೆಗಳಿಂದ ಹಿರಿಯರಾದವರ ವಿಷಯ ಹತ್ತು ಹನ್ನೆರಡು ವರ್ಷದ ಮಕ್ಕಳಿಗೆ ಅರ್ಥವಾಗುವಂತೆ ಹೇಳಬಹುದಾದದ್ದು ಸಾಕಷ್ಟು ವಿಷಯ ಇಲ್ಲದಿರಬಹುದು. ಅನೇಕ ವೇಳೆ ಲೇಖಕರು ಒಪ್ಪಿಕೊಂಡು, ನಾವು ರಕ್ಷಾಪತ್ರವನ್ನು ಅಚ್ಚು ಮಾಡಿ, ಹಸ್ತಪ್ರತಿಗಾಗಿ ಮತ್ತೆ ಮತ್ತೆ ಬರೆದಾಗ, ನಮ್ಮ ಮಾಲೆಯ ಗಾತ್ರಕ್ಕೆ ಸಾಲದಷ್ಟು ಅಥವಾ ಮಾತಿಗೆ ಸರಿಹೊಂದದಂತಹ ಹಸ್ತಪ್ರತಿ ಕಳುಹಿಸಿದ್ದುಂಟು.

ಪ್ರಾಚೀನ ಭಾರತದ ಹಿರಿಯರೊಬ್ಬರನ್ನು ಕುರಿತ ಹಸ್ತಪ್ರತಿ ತುಂಬ ಶಾಸ್ತ್ರೀಯ ವಿಷಯಗಳನ್ನು ಒಳಗೊಂಡು ವಯಸ್ಕರಿಗೂ ಅರ್ಥವಾಗುವುದು ಕಷ್ಟ ಎಂದು ತೋರಿತು. ಹಸ್ತಪ್ರತಿಯನ್ನೂ ಶೀರ್ಷಿಕೆಯನ್ನೂ ಕೈಬಿಡಬೇಕಾಯಿತು. ಸಂಗೀತಗಾರರೊಬ್ಬರ ವಿಷಯ ಬಂದ ಹಸ್ತಪ್ರತಿಯಲ್ಲಿ ಅವರ ಜೀವನಕ್ಕೆ ಸಂಬಂಧಪಟ್ಟ ಒಂದು ವಾಕ್ಯವೂ ಇರಲಿಲ್ಲ; ಅವರ ಸಂಗೀತದ ವೈಖರಿ, ವೈಶಿಷ್ಟ್ಯ ಇವನ್ನು ಶಾಸ್ತ್ರೀಯವಾಗಿ ನಿರೂಪಿಸಲಾಗಿತ್ತು. ಲೇಖಕರಿಗೆ ವಿಷಯವನ್ನು ತಿಳಿಸಿದಾಗ "ನನಗೆ ಇನ್ನೇನೂ ಮಾಡಲು ತೋರುವುದಿಲ್ಲ. ನೀವು ಅದನ್ನು ಹೇಗೆ ಮಾರ್ಪಡಿಸಿದರೂ ನನಗೆ ಒಪ್ಪಿಗೆ" ಎಂದರು. ಮತ್ತೊಬ್ಬ ಲೇಖಕರನ್ನು ಪ್ರಾರ್ಥಿಸಿ ಕೃತಿನಾಯಕರ ಜೀವನದ ವಿವರಗಳನ್ನೂ ವ್ಯಕ್ತಿತ್ವವನ್ನೂ ಕುರಿತು ಬರೆಸಿ ಪುಸ್ತಕದ ಸುಮಾರು ಅರ್ಧ ಭಾಗವನ್ನೆ ಹೊಸದಾಗಿ ಸೇರಿಸಬೇಕಾಯಿತು. (ಎರಡನೆಯ ಲೇಖಕರು ಈ ಕೆಲಸವನ್ನು ನಮಗಾಗಿ ಸಂತೋಷದಿಂದ ಮಾಡಿಕೊಟ್ಟರು, ತಮ್ಮ ಹೆಸರನ್ನು ಸೇರಿಸುವುದು ಬೇಡ ಎಂದರು, ಒಂದು ಪೈಸೆಯನ್ನೂ ಮುಟ್ಟಲಿಲ್ಲ ಎಂಬ ಸಂಗತಿಯನ್ನು ಕೃತಜ್ಞತೆಯಿಂದ ಸ್ಮರಿಸಬೇಕು.)

ಮತ್ತೊಬ್ಬ ಲೇಖಕರು ಒಬ್ಬ ಹಿರಿಯ ಸಾಹಿತಿಯನ್ನು ಕುರಿತು ಬರೆದ ಪುಸ್ತಕ ದಲ್ಲಿ ಒಂದುಸಾವಿರದ ಒಂದುನೂರು ಶಬ್ದಗಳಿದ್ದವು. ನಾವು ಮೇಲೆ ಮೇಲೆ ಒತ್ತಾಯ ಮಾಡಿದಾಗ ಇನ್ನೊಂದು ಏಳುನೂರು ಎಂಟುನೂರು ಶಬ್ದಗಳನ್ನು ಬರೆದು ಕಳುಹಿಸಿ ದರು. ಓದಿ ನೋಡಿದರೆ ಸಾಮಗ್ರಿಯಲ್ಲಿ ಒಂದು ಒಪ್ಪವಿಲ್ಲ, ಬಂಧವಿಲ್ಲ. ಯಾವ ಕೃತಿ ಸಾಹಿತಿಗೆ ಅಖಿಲ ಭಾರತ ಕೀರ್ತಿಯನ್ನು ತಂದುಕೊಟ್ಟಿತೊ ಅದರ ಹೆಸರಷ್ಟೇ ಇದೆ. ಮತ್ತೆ ಬೇರೊಬ್ಬ ವಿದ್ವಾಂಸರನ್ನು ಪ್ರಾರ್ಥಿಸಿ ಆ ಸಾಹಿತಿಯ ಕೃತಿಗಳನ್ನು ಕುರಿತು ಬರೆಸಿದ್ದಾಯಿತು. ಅನಂತರ ಇಡೀ ಹಸ್ತಪ್ರತಿಯ ಬೇರೆ ಬೇರೆ ಭಾಗಗಳನ್ನು ಹೊಂದಾಣಿಕೆ ಬರುವಂತೆ ಜೋಡಿಸಿ ಹೊಸ ಸಾಮಗ್ರಿಯನ್ನು ಸೇರಿಸಿ ಅಚ್ಚಿಗೆ ಸಿದ್ಧ ಮಾಡಿದ್ದಾಯಿತು. ಇಂತಹ ಸಂದರ್ಭಗಳಲ್ಲಿ ಕೃತಿನಾಯಕರ ವ್ಯಕ್ತಿತ್ವದ ಹಲವು ಮುಖಗಳು, ಸಾಧನೆಯ ಹಲವು ಮುಖಗಳು ಇವುಗಳಲ್ಲಿ ಸಾಪೇಕ್ಷ ಮಹತ್ವಕ್ಕೆ ಲೋಪಬಾರದಂತೆ, ಒಂದು ಸ್ಪಷ್ಟ ಚಿತ್ರ ಮೂಡುವಂತೆ ಎಚ್ಚರಿಕೆ ವಹಿಸಬೇಕಾ ಗುತ್ತಿತ್ತು. ಅಚ್ಚಿನ ಮೊಳೆ ಜೋಡಿಸಿದಾಗ ಕರಡು ಪ್ರತಿಯ ಘಟ್ಟದಲ್ಲಿ ಉದ್ದ ಹೆಚ್ಚಾಯಿತೆಂದೋ ಕಡಿಮೆಯಾಯಿತೆಂದೋ ಕಂಡುಬಂದು ಸಮಸ್ಯೆಗಳು ಉದ್ಭವ ವಾದದ್ದೂ ಉಂಟು.

ಈ ಸಮಸ್ಯೆ – ಕೆಲವು ವಿಶಿಷ್ಟ ಕ್ಷೇತ್ರಗಳಲ್ಲಿ ಹಿರಿಮೆ ಗಳಿಸಿದವರ ಕಾರ್ಯ ಸ್ವರೂಪವನ್ನು ಪರಿಚಯ ಮಾಡಿಕೊಡುವ ಸಮಸ್ಯೆ–ಮತ್ತೆ ಮತ್ತೆ ನಮಗೆ ಎದುರಾ ಯಿತು. ಆರ್ಯಭಟ, ಎಚ್. ಜೆ. ಭಾಭಾ, ವೀಣಾ ಧನಮ್ಮಾಳ್, ಧ್ಯಾನಚಂದ್ ಮೊದಲಾದವರನ್ನು ಕುರಿತ ಪುಸ್ತಕಗಳಲ್ಲಿ ಶಾಸ್ತ್ರೀಯ ಭಾಗ ಅನಿವಾರ್ಯ, ಅಲ್ಲವೆ ? ಇಂತಹ ಸಂದರ್ಭಗಳಲ್ಲಿ ಒಂದು ಸೂತ್ರವನ್ನು ಅನುಸರಿಸಿದ್ದೇವೆ. ಅವರ ಸಾಧ ನೆಯ ತಿರುಳನ್ನು ಸೂಚಿಸುವುದು ; ಎಷ್ಟನ್ನು ಈ ವಯಸ್ಸಿನ ಮಕ್ಕಳಿಗೆ ಅರ್ಥ ವಾಗುವಂತೆ ಹೇಳಬಹುದೊ ಅಷ್ಟನ್ನು ಹೇಳುವುದು, ಜೊತೆಗೆ ಒಂದು ಸ್ವಲ್ಪವೇ ಸ್ವಲ್ಪ ಭಾಗ ಅವರಿಗೆ ಅರ್ಥವಾಗಲಾರದೇನೊ ಎಂಬ ಸಂದೇಹವಿದ್ದರೂ ಸೇರಿ ಸುವುದು. ಇದಕ್ಕೆ ಕಾರಣ, ವಿಷಯದಲ್ಲಿ ಆಸಕ್ತಿ ಹುಟ್ಟಿದರೆ ಈ ಭಾಗವೂ ಮನಸ್ಸಿನ ಅಂಚಿನಲ್ಲಿ ಉಳಿದು ಎಂದೋ ಮತ್ತೆ ಹುಡುಗನ ಲಕ್ಷ್ಯವನ್ನು ಸೆಳೆ ಯಲು ಅವಕಾಶವಿರಲಿ ಎನ್ನುವುದು.

ಸಾಮಗ್ರಿಯನ್ನು ಆಯುವಾಗ ನಾವು ಬಿಡಿವಿವರಗಳ ಸಮೃದ್ಧಿಗಿಂತ ಘಟನೆಗಳಿಗೆ ಹೆಚ್ಚು ಪ್ರಾಮುಖ್ಯ ಕೊಡುತ್ತಿದ್ದೆವು. ಒಬ್ಬ ರಾಜನ ಮನೆತನ ಅಥವಾ ಅವನು ಮಾಡಿದ ಯುದ್ಧಗಳು ಅಥವಾ ಅವನು ಗೆದ್ದುಕೊಂಡ ಪ್ರದೇಶಗಳು, ಒಬ್ಬ ಸಮಾಜ ಸುಧಾರಕ ವಾಸಿಸಿದ ಊರುಗಳು ಇಂತಹ ವಿವರಗಳಿಗಿಂತ ಆತನ ಗುರಿಯೋ ವ್ಯಕ್ತಿತ್ವವೋ ಹರಳುಗಟ್ಟಿದ ಒಂದೆರಡು ಘಟನೆಗಳು ನಮಗೆ ಮುಖ್ಯ. ಎಳೆಯರ ಮನಸ್ಸಿನಲ್ಲಿ ಘಟನೆಗಳು ಸುಲಭವಾಗಿ ಉಳಿಯುತ್ತವೆ. ಹಾಗೆಯೇ ಶೌರ್ಯ ಪರಾಕ್ರಮಗಳು ನಮಗೆ ಮೆಚ್ಚಿಗೆಯ ಗುಣಗಳೇ. ಆದರೆ ನೂರು ಕದನಗಳ

ಕಲಿ ಎಂದೇ ಚಿಬ್ಬುಲಿಗೆ ಮನ್ನಣೆ [illegible]. ಬಿತ್ತರು ಮಂದಿ ಪಾಳೆಯ ಗಾರರು ಅಥವಾ ದೇಶದ ಶತ್ರುಗಳು ಪ್ರಬಲರಾಗಿದ್ದಾಗ ಅವರಿಂದ ಪ್ರಜೆಗಳನ್ನು ಕಾಪಾಡಿ ರಾಜ್ಯದೊಳಗೆ ಶಾಂತಿಯನ್ನು ಉಳಿಸುವ ಧೀರನಿಗೆ ಮನ್ನಣೆ ಸಲ್ಲಬೇಕು; ಆದರೆ ಅದರಾಚೆ ಅವನು ಪ್ರಜೆಗಳಿಗಾಗಿ ಮಾಡಿದ್ದೇನು ಎನ್ನುವ ಪ್ರಶ್ನೆಗೆ ಉತ್ತರ ಸಮರ್ಪಕವಾಗಿರಬೇಕು. ಚಾರಿತ್ರಿಕ ವ್ಯಕ್ತಿಗಳನ್ನು ಅವರ ಯುಗಗಳ ಸಂದರ್ಭ ದಲ್ಲಿ ಮಾತ್ರ ಅರ್ಥಮಾಡಿಕೊಳ್ಳಬಹುದು. ಆದರೆ ಯಾವುದನ್ನು ನಾವಿಂದು ಫ್ಯೂಡಲ್ ವ್ಯಾಲ್ಯೂಸ್ ಎಂದು ಕರೆಯುತ್ತೇವೊ ಆ ಪಾಳೆಗಾರಿಕೆ ಕಾಲದ ಮೌಲ್ಯ ಗಳನ್ನು ಇಂದು ಬಿತ್ತಲು ನಾವು ಸಿದ್ಧರಿರಲಿಲ್ಲ. ನಾವು ಯಾವ ಶೀರ್ಷಿಕೆಯನ್ನು ಆರಿಸಲಿ, ಹಸ್ತಪ್ರತಿಯನ್ನು ಕೈಗೆತ್ತಿಕೊಳ್ಳಲಿ, ಕೇಳಿಕೊಳ್ಳುತ್ತಿದ್ದ ಪ್ರಶ್ನೆ – ಇತರರಿ ಗಾಗಿ ಇವರು ಮಾಡಿದ್ದೇನು ? ಯಾವ ಸಾರ್ವಕಾಲಿಕ ಮೌಲ್ಯಗಳನ್ನು ನೆಚ್ಚಿ ಬದುಕಿದರು ?

ಸಾರ್ವಕಾಲಿಕ ಮೌಲ್ಯಗಳು ಯಾವುವು ಎನ್ನುವುದರ ನಿರ್ಧಾರವೂ ಸುಲಭ ವಲ್ಲ. ಮತ್ತೆಮತ್ತೆ ನಮ್ಮ ಮುಂದೆ ನಿಲ್ಲುತ್ತಿದ್ದ ಪ್ರಶ್ನೆ, ನಮ್ಮ ಹೊಣೆಗಾರಿಕೆಯ ನೆನಪನ್ನು ಮಾಡಿಕೊಡುತ್ತಿದ್ದ ಪ್ರಶ್ನೆ – ನಮ್ಮ ನಂಬಿಕೆಗಳನ್ನೂ ಮೌಲ್ಯಗಳನ್ನೂ ಧ್ಯೇಯಗಳನ್ನೂ ಎಷ್ಟರಮಟ್ಟಿಗೆ ಮಕ್ಕಳ ಮೇಲೆ ಹೇರುತ್ತಿದ್ದೇವೆ? ಅವರ ಮನಸ್ಸು ಬೆಳೆಯುವುದಕ್ಕೆ ಅವಕಾಶ ಮಾಡುವುದು ನಮ್ಮ ಗುರಿ. ಆದರೆ ನಾವು ಪಂಜರ ವನ್ನೇ ನಿರ್ಮಿಸುತ್ತಿದ್ದೇವೆಯೆ ? ನಾವು ಆರಿಸಿರುವ ಶೀರ್ಷಿಕೆಗಳೇ ಇಂತಹ ಅಪಾ ಯವನ್ನು ನಿವಾರಿಸುತ್ತವೆ ಎಂದು ನಮ್ಮ ಧೈರ್ಯ. ಸಂತ ಮೀರಾ, ಜ್ಞಾನದೇವ, ಅಕ್ಕಮಹಾದೇವಿ, ತ್ಯಾಗರಾಜ, ಪುರಂದರದಾಸರಿಂದ ರಾಮಮನೋಹರ ಲೋಹಿಯ, ಅಂಬೇಡಕರ್, ನಾರಾಯಣಗುರು, ಜ್ಯೋತಿರಾವ್ ಫುಲೆಯವರೆಗೆ ವಿವಿಧ ಮನೋಧರ್ಮಗಳು ಮತ್ತು ಮೌಲ್ಯಗಳ ಪ್ರತಿಪಾದಕರನ್ನು ಪರಿಚಯ ಮಾಡಿ ಕೊಟ್ಟಿದ್ದೇವೆ. ಭಾರತದಲ್ಲಿ ಎಲ್ಲ ಧರ್ಮಗಳಿಂದ, ಎಲ್ಲ ಜಾತಿಗಳಿಂದ ಹಿರಿಯ ಚೇತನಗಳು ಮೂಡಿಬಂದಿವೆ ಎನ್ನುವುದಕ್ಕೆ ಭಾರತ–ಭಾರತಿಯ ಶೀರ್ಷಿಕೆಗಳ ಮಾಲೆಯೇ ಉಜ್ವಲ ಸಾಕ್ಷಿ. ಒಂದು ದೊಡ್ಡ ಆದರ್ಶದ ಬೆಳಕಿನಲ್ಲಿ ನಡೆದವರು, ತಮ್ಮ ಸುಖ–ಅಭ್ಯುದಯಗಳಿಗೇ ಜೋತುಬೀಳದೆ ಇತರರಿಗಾಗಿ ಬಾಳಿದವರು–ಇಂತ ಹವರೇ ಭಾರತದ ಭಾಗ್ಯವನ್ನು ರೂಪಿಸಿದವರು. ಈ ಸತ್ಯವನ್ನು ಎಳೆಯ ಹೃದಯ ಗಳಲ್ಲಿ ಸ್ಥಾಪಿಸುವುದಷ್ಟೆ ನಮ್ಮ ಗುರಿಯಾದುದರಿಂದಲೇ ಶೀರ್ಷಿಕೆಗಳ ಆಯ್ಕೆ ಯಲ್ಲಿ ನಾವು ಯಾವ ಒಂದು ಧರ್ಮ, ಜಾತಿ, ಪಂಥ, ಯುಗ, ರಾಜಕೀಯ ಪಕ್ಷದ ಸೆರೆಗೆ ಸಿಕ್ಕಲಿಲ್ಲ. ಎಲ್ಲ ಕಡೆಯಿಂದ ಬಂದ ಬೆಳಕು ಗಾಳಿಗಳಿಗೆ ಇಲ್ಲಿ ಕಿಟಕಿಗಳನ್ನು ತೆರೆದಿಟ್ಟಿದ್ದೇವೆ; ತನ್ನ ಹಿರಿಮೆಯ ಮುಸುಕನ್ನು ಹೊದ್ದು ತನ್ನ ಅಹಂಭಾವದ ಉಸಿರನ್ನೆ ಕುಡಿಯುತ್ತಿರುವ ಅನಾರೋಗ್ಯಕರ ಪ್ರವೃತ್ತಿಯನ್ನು ತೊಡೆದುಹಾಕಲು ಯತ್ನಿಸಿದ್ದೇವೆ.

ನಿರೂಪಣೆಯ ಭಾಗವೂ ನಮಗೆ ಸಾಕಷ್ಟು ಸಮಸ್ಯೆಗಳನ್ನು ಒಡ್ಡಿತು. ಪುಸ್ತಕವನ್ನು ಓದುತ್ತಿದ್ದಂತೆ ಕೃತಿನಾಯಕನ ಹಿರಿಮೆ ಸ್ಫುಟವಾಗುತ್ತ ಹೋಗಬೇಕು, ಮನ ಮೆಚ್ಚಬೇಕು; ಅವರು ಹಿರಿಯರು, ವೀರರು, ಅಮೋಘ ಕೆಲಸ ಮಾಡಿದರು, ಅದ್ಭುತ ಸಾಧನೆ ಅವರದು ಎಂದೆಲ್ಲ ನಮ್ಮ ವರ್ಣನೆ ಕಡಮೆಯಾಗಬೇಕು—ಎಂದು ನಮ್ಮ ಬಯಕೆ. ಅಲ್ಲದೆ ಕೃತಿನಾಯಕನ ಸಾಧನೆ ಮೂರ್ತವಾಗಿ ಸ್ಪಷ್ಟವಾಗಬೇಕು. 'ಈ ಕಾವ್ಯ ಅದ್ಭುತವಾಗಿದೆ, ಕವಿಯ ಭಾಷಾಪ್ರಭುತ್ವ ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತದೆ, ಇಲ್ಲಿ ಮಾನವೀಯ ಮೌಲ್ಯಗಳು ಪ್ರತಿಷ್ಠಾಪಿತವಾಗಿವೆ. ಕವಿ ಮಾನವ ಸ್ವಭಾವವನ್ನು ಚೆನ್ನಾಗಿ ಅರ್ಥಮಾಡಿಕೊಂಡು ನಾವು ಎಂದೂ ಮರೆಯಲಾರದಂತಹ ಪಾತ್ರಗಳನ್ನು ಕಡೆದು ನಿಲ್ಲಿಸಿದ್ದಾನೆ'—ಈ ಬಗೆಯ ವರ್ಣನೆ ಬೇಡ, ಕಾವ್ಯದ ಕೆಲವು ಘಟನೆಗಳನ್ನು ಆರಿಸಿ ಕವಿಯ ಪ್ರತಿಭೆಯನ್ನು, ಸಾಧನೆಯನ್ನು ಖಚಿತವಾಗಿ ವಿವರಿಸೋಣ ಎನ್ನುವುದು ನಮ್ಮ ನಿಲವು. 'ಅವನ ಆಡಳಿತದ ವೈಖರಿ ಅನುಪಮ. ಅವನು ಕೈಕೊಂಡ ಮಹತ್ಕಾರ್ಯಗಳು ಅಸಂಖ್ಯಾತ. ಚರಿತ್ರೆಯಲ್ಲಿ ಅವನ ಸ್ಥಾನ ಅಮರ' ಎಂದು ಹೇಳುವುದರ ಬದಲು ನಾಯಕನ ಆಡಳಿತದ ವೈಶಿಷ್ಟ್ಯವನ್ನು ಖಚಿತವಾಗಿ, ನಿದರ್ಶನಗಳೊಂದಿಗೆ ವಿವರಿಸಬೇಕು ಎಂದು ನಮ್ಮ ವಿನಂತಿ. ಎಳೆಯ ಮನಸ್ಸಿಗೆ ಅಮೂರ್ತವಾದದ್ದಕ್ಕಿಂತ ಮೂರ್ತವಾದದ್ದು ಹಿಡಿಯುತ್ತದೆ. ಭಾಷೆ ಸರಳವಾಗಿರಬೇಕು, ಖಚಿತವಾಗಿರಬೇಕು ಎಂದು ಲೇಖಕರನ್ನು ಪ್ರಾರ್ಥಿಸಿದೆವು.

ಇದನ್ನು ಯಾವಾಗಲೂ ಸಾಧಿಸುವುದು ಸಾಧ್ಯವಾಗಲಿಲ್ಲ ಎಂದು ಒಪ್ಪಿಕೊಳ್ಳಬೇಕು. ಒಂದು ಧರ್ಮದವರಿಗೆ ಮಾತ್ರ ಅರ್ಥವಾಗುವ ಶಬ್ದಗಳು, ಪಾರಿಭಾಷಿಕ ಶಬ್ದಗಳು ಇವನ್ನು ಸಾಧ್ಯವಾದ ಮಟ್ಟಿಗೂ ಬಳಸುವುದು ಬೇಡ; ಬಳಸಲೇಬೇಕಾದಾಗ ಸುಲಭವಾದ ಶಬ್ದಗಳಲ್ಲಿ ವಿವರಣೆಯನ್ನೂ ಕೊಡುವುದು ಅಗತ್ಯ ಎಂದು ನಮ್ಮ ಅಭಿಪ್ರಾಯ. ಮತ್ತೊಂದು ಅಂಶ ನಮ್ಮ ಗಮನಕ್ಕೆ ಬಂದದ್ದು—ಎಷ್ಟೋಬಾರಿ ವಾಕ್ಯಗಳು ಇಂಗ್ಲಿಷ್‌ನಿಂದ ಭಾಷಾಂತರವಾದಂತೆ ಕಾಣುತ್ತಿದ್ದುದು. ಪ್ರಾಯಶಃ ಮೂಲ ಪುಸ್ತಕ ಇಂಗ್ಲಿಷ್ ಭಾಷೆಯಲ್ಲಿದ್ದು ಅದನ್ನು ಓದಿದ ನೆನಪು ಲೇಖಕರ ಬರಹವನ್ನು ಪ್ರಭಾವಿಸಿರಬೇಕು. ಒಮ್ಮೆ 'ಅವನ ಮನಸ್ಸನ್ನು ಕಲಕಿದುದು ಅದು ಅದಾಗಿರಲಿಲ್ಲ' ಎಂಬ ವಾಕ್ಯಕ್ಕೆ ಅರ್ಥವೇನಿರಬಹುದೆಂದು ಹೊಳೆಯದೆ ಆಕಸ್ಮಾತ್ತಾಗಿ ಲೇಖಕರು ಸೂಚಿಸಿದ್ದ ಇಂಗ್ಲಿಷ್ ಪುಸ್ತಕವನ್ನು ಯಾವುದೋ ವಿವರಕ್ಕೆಂದು ಹುಡುಕುತ್ತಿದ್ದಾಗ ಹಸ್ತಪ್ರತಿಯಲ್ಲಿ ಆ ವಾಕ್ಯವಿದ್ದ ಸಂದರ್ಭದಲ್ಲಿಯೇ ಇಂಗ್ಲಿಷಿನಲ್ಲಿ "It was not that that upset him" ಎಂದು ಓದಿದ ನಂತರ ಅರ್ಥ ಸ್ಪಷ್ಟವಾಯಿತು. 'ಈ ನಿರ್ಧಾರ, ನಂತರದ ಘಟನೆಗಳಿಂದ ಸಮರ್ಥಿಸಲ್ಪಟ್ಟಿತು' ಎನ್ನುವುದೂ ಇಂಗ್ಲಿಷ್ ಜಾಯಮಾನದ ಕನ್ನಡ ವಾಕ್ಯ. ಎಳೆಯರಿಗಾಗಿ ಬರೆಯುವ ವಯಸ್ಕರ ಇನ್ನೊಂದು ಕಷ್ಟ ಎಂದರೆ ತಮ್ಮ ಪೀಳಿಗೆಯವರಿಗೆ ಸುಲಭವಾಗಿ ಅರ್ಥವಾಗುತ್ತಿದ್ದುದು ಮುಂದಿನ ಪೀಳಿಗೆಯ ಗಮನಕ್ಕೆ ಬಂದಿರುವುದಿಲ್ಲ ಎನ್ನುವುದು. ದಂಡಿಯಾತ್ರೆ, ಬಂಗಾಳ

ವಿಭಜನೆ, ಒಟ್ಟಿನ ಅಧಿಕಾರದಾನ, ದುಂಡುಮೇಜಿನ ಪರಿಷತ್ತು, ಎಂಟನೆಯ ಎಡ್ವರ್ಡರ ಸಿಂಹಾಸನ ತ್ಯಾಗ—ಇವೆಲ್ಲ ಈಗಿನ ಬಾಲಕ ಬಾಲಕಿಯರ ತಿಳಿವಳಿಕೆಯ ಪರಿಧಿಯಲ್ಲಿ ಬರುವುದಿಲ್ಲ. 'ಕ್ವಿಟ್ ಇಂಡಿಯ' ಚಳವಳಿ, ಜಾಲಿಯನ್‌ವಾಲಾಬಾಗ್ ಪ್ರಕರಣ, ರಾಜ್ಯಾಂಗ ಸಭೆ, ಶಿವಪುರ ಧ್ವಜ ಸತ್ಯಾಗ್ರಹ ಇಂತಹ ಪ್ರಸ್ತಾಪಗಳನ್ನು ವಿವರಿಸಬೇಕು. ಸಂಪಾದಕ ಮಂಡಳಿಯವರು ಈ ವಿವರಣೆಗಳನ್ನೆಲ್ಲ ಸೇರಿಸುತ್ತಿದ್ದೆವು.

ಭಾಷೆಯ ವಿಷಯದಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕಾಗುತ್ತದೆ. ಬಡತನದಲ್ಲಿ ಬೆಳೆದ ಹುಡುಗನ ವಿಷಯ ಹೇಳುತ್ತ, 'ಅವನು ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನಿತ್ತನು' ಎಂದು ಬರೆದಾಗ 'ತಿಲಾಂಜಲಿ' ಎಂಬ ಶಬ್ದ ಎಷ್ಟು ಜನ ಚಿಕ್ಕವಯಸ್ಸಿನ ಓದುಗರಿಗೆ ಅರ್ಥವಾಗುತ್ತದೆ ? ಅರ್ಥವಾದರೂ, ಈ ಸಂದರ್ಭದಲ್ಲಿ ಈ ಶಬ್ದದ ಬಳಕೆ ಉಚಿತವೆ ? ಹಾಗೆಯೇ, ಧೀರನಾದವನು ಸೋತು ಬದುಕಲು ಇಚ್ಛಿಸದೆ ಅಥವಾ ಅಪಮಾನ ಎದುರಿಸಲು ಬಯಸದೆ ಸಾವನ್ನೆ ಆರಿಸಿದಾಗ ಅವನು 'ಸಾವನ್ನಪ್ಪಿದನು' ಎಂಬ ಪ್ರಯೋಗ ಉಚಿತವಾದೀತು. ಆದರೆ ನಾಯಕನ ತಂದೆ, ನಾಯಕನಿಗೆ ಇನ್ನೂ ಎಳೆಯ ವಯಸ್ಸಾಗಿದ್ದಾಗ ಇಡೀ ಸಂಸಾರ ಕಷ್ಟಕ್ಕೆ ಸಿಕ್ಕಿಕೊಳ್ಳುವ ಸ್ಥಿತಿಯಲ್ಲಿ ತೀರಿಕೊಂಡ ಎಂದು ಹೇಳುವಾಗ ಅವನು 'ಸಾವನ್ನಪ್ಪಿದನು' ಎಂದು ಹೇಳುವುದು ಉಚಿತವೆ ? ಪ್ರಾಯಶಃ ಈ ಅಂಶಕ್ಕೆ ನಾವು ಕೊಟ್ಟಿರುವ ಗಮನವೂ ಸಾಲದೇನೊ ! ಅಂತೂ ಇದು ಒಂದು ಮುಖ್ಯವಾದ ವಿಷಯ.

ಪುಸ್ತಕದ ಹೊದಿಕೆಯ ಮೇಲೆ ನಾಯಕನ ಬಣ್ಣದ ಚಿತ್ರವಿರಬೇಕು, ಒಳಗಡೆ ಮೂರು ಚಿತ್ರಗಳಿರಬೇಕು. ಇವನ್ನು ಸಿದ್ಧಗೊಳಿಸುವುದರಲ್ಲಿಯೂ ಅನೇಕ ಅನುಭವಗಳಾದವು. ಹೊದಿಕೆಯ ಮೇಲಿನ ಚಿತ್ರಕ್ಕೆ ಆಧಾರವಾದ ಚಿತ್ರ ದೊರೆಯಬೇಕು. ಸುಶ್ರುತ, ದೀಪಂಕರ, ಪಂಪ, ಕಾಳಿದಾಸ, ಖಾರವೇಲ ಮೊದಲಾದವರ ಚಿತ್ರಗಳಿಗೆ ಆಧಾರವಿಲ್ಲ. ಕಲ್ಪನೆಯಿಂದ ಬರೆಯಬೇಕು. ಆ ಯುಗದ ಉಡುಪು, ಆಭರಣಗಳು, ಪದ್ಧತಿಗಳು ಇವುಗಳಿಗೆ ಅನುಗುಣವಾಗಿರಬೇಕು. ಹಲವು ಮತಗಳ, ಧರ್ಮಗಳ ಹಿರಿಯರ ಚಿತ್ರಗಳನ್ನು ಬರೆಯುವಾಗ ವಿವರಗಳು ತಪ್ಪಾಗಬಾರದು. ಇಂತಹ ಸಂದರ್ಭದಲ್ಲಿ ಆಯಾ ಕ್ಷೇತ್ರಗಳ ತಜ್ಞರ ನೆರವನ್ನು ಬೇಡಿದ್ದೇವೆ. ಚಿತ್ರ ಬರೆಯುವ ಸ್ನೇಹಿತರು ತಜ್ಞರನ್ನು ಕಂಡು ಸಲಹೆಗಳನ್ನು ಪಡೆದು ಕರಡುಚಿತ್ರ ತಯಾರಿಸಿ ಅವರಿಗೆ ತೋರಿಸಿ, ಅವರ ಒಪ್ಪಿಗೆ ಪಡೆದ ನಂತರ ಚಿತ್ರವನ್ನು ತಯಾರಿಸಿದ್ದಾರೆ. ಒಳಗಿನ ಚಿತ್ರಗಳನ್ನು ಬರೆಯುವಾಗಲೂ ಹತ್ತಾರು ವಿವರಗಳಿಗೆ ಗಮನ ಕೊಡಬೇಕು. ಒಂದು ಸಭೆಯಾದರೆ ಸಭೆ ಒಳಾಂಗಣದಲ್ಲಿ ನಡೆಯಿತೆ, ಹೊರಗಡೆಯೆ, ಸಭೆ ನಡೆವ ಕಾಲದಲ್ಲಿ ಭಾರತದಲ್ಲಿ ಧ್ವನಿವರ್ಧಕ ಬಳಕೆಯಲ್ಲಿತ್ತೆ, ಆ ಕಾಲದವರ ಉಡುಪುಗಳು ಎಂತಹವು, ಅರಮನೆಯಾದರೆ ಆಸ್ಥಾನದಲ್ಲಿ ಬಳಸುತ್ತಿದ್ದ ಪೋಷಾಕುಗಳು ಎಂತಹವು, ಗುರುಪೀಠವಾದರೆ ಅಲ್ಲಿನ ವಿವರಗಳು—ಹೀಗೆ ಗಮನ ಕೊಡಬೇಕಾಗುತ್ತದೆ. ಎಲ್ಲಿಯೂ ನಾವು

ಎಡವಿಲ್ಲ ಎಂದು ಹೇಳಲಾರೆ. ಈ ಚಿತ್ರಗಳನ್ನು ಬರೆಯುವಾಗಲೂ ತಜ್ಞರ ನೆರವು ಪಡೆದಿದ್ದೇವೆ.

ಹೀಗೆ ಈ ಮಾಲೆಯ ಪುಸ್ತಕಗಳನ್ನು ಸಿದ್ಧಗೊಳಿಸುವುದು ನಮಗೊಂದು ಶಿಕ್ಷಣವಾಯಿತು. ಮಕ್ಕಳ ಸಾಹಿತ್ಯದ ರಚನೆಗೆ ನಮ್ಮಲ್ಲಿ ಇನ್ನೂ ಎಷ್ಟು ಸಿದ್ಧತೆಯಾಗಬೇಕು ಎನ್ನುವುದು ಸ್ಪಷ್ಟವಾಯಿತು. ಕಿರಿಯ ಓದುಗರನ್ನು ವಯಸ್ಸಿಗನುಗುಣವಾಗಿ ವರ್ಗೀಕರಿಸಬೇಕು. ಪ್ರತಿ ವರ್ಗದ ಓದುಗರಿಗಾಗಿ ಬರೆಯುವಾಗ ಬಳಸಬಹುದಾದ ಶಬ್ದಗಳು ಮತ್ತು ವಾಕ್ಯಬಂಧಗಳು ಇವನ್ನು ವೈಜ್ಞಾನಿಕವಾಗಿ ಗುರುತಿಸಿ ಪಟ್ಟಿಮಾಡಬೇಕು. ಒಂದು ವಿಷಯದಲ್ಲಿ ಪ್ರಭುತ್ವ ಪಡೆದವರೆಲ್ಲ ಮಕ್ಕಳಿಗಾಗಿ ಬರೆಯಲಾರರು. ಇದಕ್ಕೆ ವಿಶೇಷ ಶಿಕ್ಷಣ ಪಡೆದವರ ತಂಡವೇ ಸೃಷ್ಟಿಯಾಗಬೇಕು. ಸಾಮಗ್ರಿಯನ್ನು ತಜ್ಞರಿಂದ ಪಡೆದು ಎಳೆಯರಿಗೆ ಸಿದ್ಧಮಾಡಿ ಉಣಬಡಿಸುವವರ ತಂಡವೇ ಅಗತ್ಯವಾಗಿದೆ. ಇದಾಗಬೇಕಾದರೆ, ಬಹು ಹೆಚ್ಚಿನ ಪ್ರಮಾಣದಲ್ಲಿ ಸಿಬ್ಬಂದಿ ಬೇಕು, ಹಣ ಬೇಕು.

ನಮಗಿದ್ದ ಮಿತಿಗಳಲ್ಲಿ–ಇವುಗಳಲ್ಲಿ ಪ್ರಧಾನ ಸಂಪಾದಕರ ಶಕ್ತಿಯ ಮಿತಿಯೂ ಸೇರಿದೆ–ಶ್ರದ್ಧೆಯಿಂದ ಕೆಲಸಮಾಡಿದ್ದೇವೆ ಎನ್ನುವ ಅರಿವು ಒಂದೇ ನಮಗೆ ತೃಪ್ತಿಯನ್ನು ಕೊಡುವುದು. ಹಲವು ರೀತಿಗಳಲ್ಲಿ ನಮಗೆ ಅತೃಪ್ತಿ ಇದ್ದೇ ಇದೆ. ಆದರೆ ಶ್ರಮಪಟ್ಟಿದ್ದೇವೆ. ಸಾಮಗ್ರಿ ಖಚಿತವಾಗಿರಬೇಕು, ಹೇಳುವುದಕ್ಕೆ ಆಧಾರ ಇರಬೇಕು ಎಂದು ಕನ್ನಡನಾಡಿನ ಒಳಗೆ, ಹೊರಗೆ ಇರುವ ತಜ್ಞರಿಂದ ನೆರವು ಪಡೆದಿದ್ದೇವೆ. ತಮಿಳುನಾಡು, ಆಂಧ್ರ, ಗುಜರಾತು, ಬಂಗಾಳ, ಉತ್ತರಪ್ರದೇಶ, ಮಹಾರಾಷ್ಟ್ರ ಎಲ್ಲ ಕಡೆಗಳಿಂದ ಸಾಮಗ್ರಿ ತರಿಸಿದ್ದೇವೆ. ವಿವರಗಳಿಗೆ ಬರೆದು ಉತ್ತರ ಪಡೆದಿದ್ದೇವೆ. ರಾಷ್ಟ್ರೋತ್ಥಾನ ಪರಿಷತ್ತಿನಲ್ಲಿ ಒಂದು ಪುಸ್ತಕಭಂಡಾರ ರಚಿಸಿದ್ದೇವೆ.

ಯೋಜನೆ ನಡೆದು ಬಂದ ದಾರಿಯನ್ನು ನೆನೆಸಿದಾಗ ಹಲವು ಕಷ್ಟದ ಅನುಭವಗಳು, ವಿಚಿತ್ರ ಅನುಭವಗಳು ನೆನಪಿಗೆ ಬರುತ್ತವೆ. ಕೆಲವರು ಯುವಕರು ಪ್ರಧಾನ ಸಂಪಾದಕರಿಗೆ ಪತ್ರ ಬರೆದರು. 'ಬರುವ ಉತ್ಥಾನದ್ವಾದಶಿಯ ದಿನದಿಂದ ನೀವು ಕ್ಷಮೆ ಬೇಡುವವರೆಗೆ ನಿಮ್ಮ ಮನೆ ಮುಂದೆ ಧರಣಿ ಮಾಡುತ್ತೇವೆ.' ಕಾರಣ ? ಅವರು ಬರೆದರು – 'ನೀವು ಹಿಂದೂಗಳಿಗೆ ಅಪಚಾರ ಮಾಡಿದ್ದೀರಿ. ಶ್ರೀಕೃಷ್ಣ ಪಾಂಡವರನ್ನು ಮೊದಲಿನಿಂದ ರಕ್ಷಿಸಿಕೊಂಡು ಬಂದ ಎಂದು ಎಲ್ಲ ಹಿಂದೂಗಳಿಗೂ ಗೊತ್ತು; ನಿಮ್ಮ ಒಂದು ಪುಸ್ತಕದಲ್ಲಿ ಶ್ರೀಕೃಷ್ಣ ಪಾಂಡವರನ್ನು ಮೊದಲ ಬಾರಿ ಕಂಡದ್ದು ದ್ರೌಪದಿಯ ಸ್ವಯಂವರದಲ್ಲಿ ಎಂದು ಬರೆದಿದ್ದೀರಿ. ಕ್ಷಮೆ ಬೇಡಬೇಕು.' ಪ್ರಧಾನ ಸಂಪಾದಕರು ಅವರಿಗೆ ಎ. ಆರ್. ಕೃಷ್ಣಶಾಸ್ತ್ರಿಗಳ 'ವಚನ ಭಾರತ'ದ ಆಧಾರ ಕೊಟ್ಟು ಪತ್ರ ಬರೆದರು. ಯುವಕರು "ನಿಮಗೆ ಕೃಷ್ಣಶಾಸ್ತ್ರಿಗಳೇ ಆಧಾರ

ಇರಬಹುದು,ನಾವು ಒಪ್ಪುವುದಿಲ್ಲ"ಎಂದರು.ಕಡೆಗೆ ಅವರಿಗೆ "ಶ್ರೀಕೃಷ್ಣ ಪಾಂಡವರನ್ನು ದ್ರೌಪದೀ ಸ್ವಯಂವರಕ್ಕೆಮೊದಲೇ ಕಂಡಿದ್ದ ಎಂದು ಹೇಳುವ ಯಾವ ಮಹಾಭಾರತದ ಪ್ರತಿಯನ್ನಾದರೂ ತನ್ನಿ" ಎಂದು ಹೇಳಬೇಕಾಯಿತು. ಸರ್ಕಾರ ಭಾರತ–ಭಾರತಿ ಪುಸ್ತಕಗಳ ಕೆಲವು ಸಾವಿರ ಪ್ರತಿಗಳನ್ನು ಕೊಳ್ಳುತ್ತದೆ. ನಮ್ಮ ಒಂದು ಪುಸ್ತಕ ಪ್ರಕಟ ವಾದ ನಂತರ, ಒಬ್ಬರು ಸರ್ಕಾರಕ್ಕೂ ರಾಷ್ಟ್ರೋತ್ಥಾನ ಪರಿಷತ್ತಿಗೂ ಎಚ್ಚರಿಕೆ ಪತ್ರ ಬರೆದರು: "ನಿಮ್ಮ ಪುಸ್ತಕದಲ್ಲಿ ನಮ್ಮ ಪೂರ್ವಿಕರ ವಿಷಯ ತಪ್ಪುಗಳಿವೆ. ಕೂಡಲೇ ಪುಸ್ತಕದ ಪ್ರತಿಗಳನ್ನು ಹಿಂತೆಗೆದುಕೊಳ್ಳಿ." ಸಂಪಾದಕ ಮಂಡಲಿಯವರಿಗೆ ಆತಂಕ. ಲೇಖಕರಿಗೆ ಬರೆದಾಗ, ಅವರು ಮೈಸೂರು ಗೆಜೆಟಿಯರ್, ಹಲವಾರು ಚರಿತ್ರೆಯ ಆಧಾರದ ಪುಸ್ತಕಗಳು ಇವುಗಳಿಂದ ಆಧಾರ ಸಾಮಗ್ರಿಯನ್ನು ಸಮೃದ್ಧವಾಗಿ ಒದಗಿ ಸಿದರು. ಪತ್ರ ಬರೆದವರು ತಮ್ಮ ಆಪಾದನೆಗೆ ಕೊಡುವ ಆಧಾರ– 'ನಮ್ಮ ಮನೆಯಲ್ಲಿ ನಮ್ಮ ವಂಶವನ್ನು ಕುರಿತು ಓಲೆಗರಿ ಪುಸ್ತಕವಿದೆ. ಅದರಲ್ಲಿರುವ ವಿವರಗಳಿಗೂ ನಿಮ್ಮ ಪುಸ್ತಕದಲ್ಲಿರುವ ವಿವರಗಳಿಗೂ ವ್ಯತ್ಯಾಸವಿದೆ. ನಮ್ಮ ಮನೆತನಕ್ಕೆ ಅಪಚಾರ ವಾಗಿದೆ.' ಅವರ ಮನೆಯಲ್ಲಿರುವ ಪುಸ್ತಕ ಪ್ರಕಟವಾಗಿಲ್ಲ. ಅದನ್ನು ನೋಡಿ ಹಿಂದಿರು ಗಿಸಬೇಕೆಂದರೆ ಅಥವಾ ಅವರ ಮನೆಯಲ್ಲಿ ನೋಡಬೇಕೆಂದರೆ ಅವರು ಅದನ್ನು ಯಾರಿಗೂ ತೋರಿಸಲು ಸಿದ್ಧವಿಲ್ಲ! ಮತ್ತೊಬ್ಬ ಲೇಖಕರು ಹಸ್ತಪ್ರತಿ ಕಳುಹಿಸಿದಾಗ ಅದನ್ನು ಓದುವಾಗ ಪ್ರಧಾನ ಸಂಪಾದಕರಿಗೆ ಹಲವು ಭಾಗಗಳನ್ನು ತದ್ವತ್ತಾಗಿ ಓದಿದ ನೆನಪು. ಹುಡುಕಿದಾಗ, ಭಾರತ–ಭಾರತಿ ಮಾಲೆಯಲ್ಲೆ ನಾಲ್ಕು ವರ್ಷಕ್ಕೆ ಹಿಂದೆ ಪ್ರಕಟವಾದ ಬೇರೊಬ್ಬ ಲೇಖಕರ ಪುಸ್ತಕದಿಂದ ಹನ್ನೆರಡು ಪುಟಗಳು ಅರ್ಧವಿರಾಮ ಪೂರ್ಣವಿರಾಮಗಳ ವ್ಯತ್ಯಾಸವೂ ಇಲ್ಲದೆ ಹೊಸ ಹಸ್ತಪ್ರತಿಯಲ್ಲಿ ಅವತರಿಸಿವೆ! ಲೇಖಕರಿಗೆ ಪತ್ರ ಬರೆದದ್ದಾಯಿತು. ಉತ್ತರ: "ನಿಜ, ನಿಮಗೆ ತಿಳಿಸಬೇಕೆಂದಿದ್ದೆ, ಮರೆತುಹೋಯಿತು."

ರಾಷ್ಟ್ರೋತ್ಥಾನಕ್ಕೆ ಸರ್ಕಾರ ಬೀಗಮುದ್ರೆ ಹಾಕಿದ್ದ ಕಷ್ಟದ ದಿನಗಳು. ಒಬ್ಬ ಲೇಖಕರು ಹಸ್ತಪ್ರತಿ ಕೊಟ್ಟಿದ್ದರು, ಇನ್ನೂ ಅದು ಪ್ರಕಟವಾಗಿರಲಿಲ್ಲ. ಕಟ್ಟಡ ಸರ್ಕಾರದ ವಶವಾಯಿತು. ಲೇಖಕರು ಪ್ರಧಾನ ಸಂಪಾದಕರಿಗೆ ಕಾಗದ ಬರೆದರು, ಹಸ್ತಪ್ರತಿ ಬೇಕು ಎಂದು. ಇದ್ದ ಸಂಗತಿ ತಿಳಿಸಿ ಪ್ರಧಾನ ಸಂಪಾದಕರು ಉತ್ತರ ಬರೆದರು. ಒಂದು ರಾತ್ರಿ ಹತ್ತುಗಂಟೆಗೆ ಲೇಖಕರು ಪ್ರಧಾನ ಸಂಪಾದಕರ ಮನೆಗೆ ಬಂದರು, ಹಸ್ತಪ್ರತಿ ಕೊಡುವವರೆಗೆ ನಾನು ಕದಲುವುದಿಲ್ಲ ಎಂದರು, ರೇಗಾಡಿದರು, ಕೂಗಾಡಿದರು.

ಆದರೆ ಇಂತಹ ಅನುಭವಗಳು ಕೆಲವೇ. ಇವನ್ನು ಮೆಟ್ಟಿ ನಿಂತು ಮನಸ್ಸನ್ನು ತುಂಬುವ ನೆನಪುಗಳು; ಹೇಳಿದ ದಿನಕ್ಕೆಸರಿಯಾಗಿ ಹಸ್ತಪ್ರತಿ ತಲಪಿಸಿದ ಲೇಖಕರದು, ಒಂದು ದಿನ ತಡವಾಗುತ್ತದೆ ಎಂದು ಕಂಡಾಗ ಹಾಗೆಂದು ಕಾಗದ ಬರೆದು ತಿಳಿಸಿದವ ರದು, ಈ ಮಾಲೆಗೊಂದು ಪುಟ್ಟ ಪುಸ್ತಕ ಬರೆಯಲು ದೆಹಲಿ,ಲಕ್ನೊ,ವಾರಣಾಸಿ ಮೊದ

ಲಾದ ಸ್ಥಳಗಳಿಂದ ಆಧಾರಗ್ರಂಥಗಳನ್ನು ಕೊಂಡು ಹಸ್ತಪ್ರತಿ ಬರೆದ ಲೇಖಕರದು, ನಮಗೆ ಆಗಲೇ ಬೇರೆಯವರು ಬರೆದುಕೊಟ್ಟ ಹಸ್ತಪ್ರತಿಯಲ್ಲಿ ಸಾಮಗ್ರಿ ಸಾಲದೆ ಹೋದಾಗ ಹಲವು ಪುಟಗಳನ್ನು ಸಂತೋಷದಿಂದ ಬರೆದುಕೊಟ್ಟು 'ಸೇರಿಸಿ, ನನ್ನ ಹೆಸರನ್ನೇನೂ ಹೇಳಬೇಡಿ' ಎಂದ ವಿದ್ವಾಂಸರದು, 'ನೋಡಿ, ಈ ಶೀರ್ಷಿಕೆ ನಿಮ್ಮ ಮಾಲೆಗೆ ಸೇರಬೇಕಲ್ಲವೇ ? ಈ ಆಧಾರಗ್ರಂಥಗಳನ್ನು ನೋಡಿ ತೀರ್ಮಾನಿಸಿ' ಎಂದು ಮನೆಗೇ ಆಧಾರ ಗ್ರಂಥಗಳನ್ನು ತಂದುಕೊಟ್ಟು ಮತ್ತೆ ತಾವೇ ಬಂದು ತೆಗೆದುಕೊಂಡು ಹೋಗಿ, ಇಂತಹವರಿಂದ ಬರೆಸಬಹುದು ಎಂದು ಸೂಚನೆ ಕೊಟ್ಟ ಅಭಿಮಾನಿಗಳದು, ಕಷ್ಟ ಪರಿಸ್ಥಿತಿಯಲ್ಲಿ ನಮಗೆ ಆಗಲೇ ಕೊಟ್ಟಿದ್ದ ಹಸ್ತಪ್ರತಿಗಳನ್ನು ಪ್ರಕಟಿಸಲು ಆಗದಿದ್ದಾಗ, ಮತ್ತೆ ಪ್ರಕಟಿಸುವ ದಿನ ಬರುವುದೇ ಇಲ್ಲವೇನೊ ಎನ್ನಿಸುತ್ತಿದ್ದಾಗ, 'ಚಿಂತೆ ಪಡಬೇಡಿ, ಆ ದಿನ ಬರುತ್ತದೆ' ಎಂದು ಸಮಾಧಾನ ಹೇಳಿದ ಲೇಖಕರದು– ಒಂದೇ, ಎರಡೇ ಈ ಸಂತೋಷದ ನೆನಪುಗಳು !

ಯೋಜನೆ ಮುಗಿಯುತ್ತ ಬಂದಿರುವಾಗ ಸಂಪಾದಕ ಮಂಡಲಿಯವರಿಗೆ ಸಂತೋಷ, ವಿಷಾದ. ಜೊತೆಗೆ, ಈ ಯೋಜನೆ ಪರಿಪೂರ್ಣವಾಗಿ ಕಾರ್ಯಗತ ವಾಯಿತು ಎನ್ನಲಾಗದಿದ್ದರೂ ಈ ಪ್ರಮಾಣದಲ್ಲಿಯಾದರೂ ಕಾರ್ಯಗತವಾಯಿತಲ್ಲ ಎನ್ನುವ ಸಮಾಧಾನ. ೫೧೦ ಪುಸ್ತಕಗಳು ಪ್ರಕಟವಾಗಿವೆ. ರಾಷ್ಟ್ರಜೀವನಕ್ಕೆ ಸತ್ವ, ಬೆಳಕುಗಳನ್ನು ಕೊಟ್ಟ ಮಹಾಚೇತನಗಳ ಸಮ್ಮೇಳನವೇ ಕಣ್ಣಮುಂದಿದೆ. ಅನೇಕರ ವಿಷಯ ಪುಸ್ತಕ ಪ್ರಕಟವಾಗಿರುವುದು ಭಾರತದಲ್ಲೇ ಮೊದಲಬಾರಿಗೆ ಎಂದು ಕಾಣುತ್ತದೆ. ಅಶ್ಫಾಕ್ ಉಲ್ಲಾ, ಖಾರವೇಲ, ಗಾಮ, ಕುದ್ಮುಲ್ ರಂಗರಾವ್, ನಾನಿಬಾಲಾ ದೇವಿ, ಭಿಕ್ಷು ಉತ್ತಮ, ದೀಪಂಕರ, ಸುಶ್ರುತ ಮೊದಲಾದವರನ್ನು ಕುರಿತು ಯಾವ ಭಾರತೀಯ ಭಾಷೆಯಲ್ಲಾದರೂ ಪುಸ್ತಕ ಪ್ರಕಟವಾಗಿದೆಯೇ ಎನ್ನುವುದು ಅನುಮಾನ. ಜನರಲ್ ತಿಮ್ಮಯ್ಯ, ರಾಮಪ್ರಸಾದ ಬಿಸ್ಮಿಲ್, ಮೇಡಂ ಕಾಮಾ, ಸಿ.ಕೆ. ನಾಯುಡು, ಬೀರ್‌ಬಲ್ ಸಾಹನಿ, ಸೂರ್ಯಸೇನ್, ಹೋಮಿ ಭಾಭಾ, ಎಸ್.ಆರ್. ರಂಗನಾಥನ್, ಕಮಲನಯನ ಬಜಾಜ್, ದ್ವಾರಕನಾಥ್ ಕೊಟ್ನೀಸ್, ಅಬ್ದುಲ್ ಕರೀಂಖಾನ್, ಮಹಮ್ಮದ್ ನಿಸ್ಸಾರ್, ಧ್ಯಾನಚಂದ್, ತಾಳ್ಳಪಾಕ ಅನ್ನಮಾಚಾರ್ಯ ಮೊದಲಾದವರನ್ನು ಕುರಿತು ಕನ್ನಡದಲ್ಲಿ ಪ್ರಾಯಶಃ ಈವರೆಗೆ ಪುಸ್ತಕ ಪ್ರಕಟವಾಗಿಲ್ಲ.

ಶ್ರೀನಿವಾಸರು, ಬೇಂದ್ರೆಯವರಿಂದ ಪ್ರಾರಂಭಿಸಿ ಅನೇಕ ಮಂದಿ ಹಿರಿಯ ಸಾಹಿತಿಗಳು ಈ ಮಾಲೆಗೆ ಪುಸ್ತಕಗಳನ್ನು ಬರೆದುಕೊಟ್ಟು ಆಶೀರ್ವದಿಸಿದ್ದಾರೆ. ಈ ಮಾಲೆಗೆ ಬರೆದವರಲ್ಲಿ ಹಲವರು ಪುಸ್ತಕ ಬರೆದದ್ದು ಇದೇ ಮೊದಲು.

ಇಷ್ಟು ಸಾಧನೆಯಾದರೂ ಎಟುಕಿದ್ದು ಹೇಗೆ ?

ಲೇಖಕರು, ಚಿತ್ರಗಳನ್ನು ಬರೆದ ಕಲಾವಿದರು ಮತ್ತು ವಿದ್ವಾಂಸರ ಸಹಕಾರ ದಿಂದ.

ಎರಡನೆಯದಾಗಿ, ಸಂಪಾದಕ ಮಂಡಲಿ ಒಂದು ಕ್ರಮವನ್ನು ಕಟ್ಟುನಿಟ್ಟಾಗಿ ಅನುಸರಿಸಿದ್ದರಿಂದ.

ಮಾಲೆಯ ಹೊಸವರ್ಷ ನವೆಂಬರಿನಲ್ಲಿ ಪ್ರಾರಂಭವಾಗುವುದಕ್ಕೆ ನಾಲ್ಕೈದು ತಿಂಗಳ ಮೊದಲೇ ಅಗತ್ಯವಾದ ಶೀರ್ಷಿಕೆಗಳಿಗಿಂತ ಕೆಲವು ಹೆಚ್ಚಾಗಿಯೇ ಇರುವಂತೆ ಆಯ್ಕೆ. ಲೇಖಕರ ನಿರ್ಧಾರ. ಅವರಿಗೆಲ್ಲ ಪ್ರಾರ್ಥನಾಪತ್ರ. ಪ್ರಧಾನ ಸಂಪಾದಕರಿಗೆ ನೆರವಾಗುವ ಗೆಳೆಯರಿಂದ ಕಾಲಕಾಲಕ್ಕೆ ಅಗತ್ಯ ಕಂಡಂತೆ ಲೇಖಕರಿಗೆ ನೆನಪಿನ ಪತ್ರ ಕಳುಹಿಸುವುದು.

ವಾರಕ್ಕೊಮ್ಮೆ ಸಂಪಾದಕ ಮಂಡಳಿಯ ಸಭೆ. ಬಂದಿರುವ ಹಸ್ತಪ್ರತಿಗಳು, ಬರಬೇಕಾದ ಹಸ್ತಪ್ರತಿಗಳು, ಅಚ್ಚಿನ ಕೆಲಸದ ಪ್ರಗತಿ ಎಲ್ಲ ಪರಿಶೀಲನೆ. ಸಿದ್ಧವಾದ ಚಿತ್ರಗಳನ್ನು ಆಧಾರಚಿತ್ರಗಳ ನೆರವಿನಿಂದ ಪರಿಶೀಲಿಸುವುದು. ಯಾವುದಾದರೂ ಹಸ್ತಪ್ರತಿಗಳ ವಿಷಯದಲ್ಲಿ ತೀರ್ಮಾನವಾಗಬೇಕಾಗಿದ್ದರೆ ಚರ್ಚೆ, ನಿರ್ಧಾರ.

ಹಸ್ತಪ್ರತಿ ಬರುತ್ತಲೇ ಪದಗಳ ಸಂಖ್ಯೆಯ ಲೆಕ್ಕಾಚಾರ, ಅನಂತರ ಎಲ್ಲ ವಿವರಗಳನ್ನು–ಹೆಸರುಗಳು, ವರ್ಷಗಳು, ಘಟನೆಗಳು ಎಲ್ಲವನ್ನು–ಆಧಾರ ಗ್ರಂಥಗಳ ನೆರವಿನಿಂದ ಸರಿನೋಡುವುದು, ವ್ಯತ್ಯಾಸಗಳಿದ್ದರೆ ಗುರುತು ಹಾಕಿ ಪ್ರಧಾನ ಸಂಪಾದಕರ ಗಮನಕ್ಕೆ ತರುವುದು – ಈ ಕೆಲಸವನ್ನು ಶ್ರೀ ಮಧುಸೂದನ, ಶ್ರೀ ಸೋಮನಾಥ ನಾಯಕ್, ಶ್ರೀ ವೆಂಕಟೇಶಮೂರ್ತಿ, ಶ್ರೀ ನಟರಾಜ್ ಮೊದಲಾದ ಗೆಳೆಯರು ಬಹು ಶ್ರದ್ಧೆಯಿಂದ ನಿರ್ವಹಿಸಿದ್ದಾರೆ. ಶ್ರೀ ತಿರುನಾರಾಯಣ ಐಯ್ಯಂಗಾರ್ಯರಂತೂ ಈ ಬಗೆಯ ಕೆಲಸವನ್ನು ಅನೇಕ ವರ್ಷಗಳ ಕಾಲ ನಡೆಸಿದ್ದಾರೆ. ಈ ಗೆಳೆಯರು ಓದಿದ ನಂತರ ಹಸ್ತಪ್ರತಿ ಪ್ರಧಾನ ಸಂಪಾದಕರ ಕೈಗೆ. ಅದನ್ನು ಓದಿ, ಅಗತ್ಯವಾದ ಗಾತ್ರಕ್ಕೆ ಸರಿಪಡಿಸಿ, ಉಪಶೀರ್ಷಿಕೆಗಳನ್ನು ಕೊಟ್ಟು, ಇಡೀ ಪುಸ್ತಕದ ಸ್ವರೂಪ–ಸಾರ್ಥಕ್ಯಗಳ ಕಡೆ ಗಮನ ಹರಿಸಬೇಕಾದವರು ಅವರು. ಚಿತ್ರಗಳನ್ನು ಸೂಚಿಸುವವರೂ ಅವರೇ. ಮತ್ತೆ ಅಗತ್ಯವಾದರೆ ಗೆಳೆಯರ ನೆರವು. ಅಗತ್ಯವಾದ ಪುಸ್ತಕಗಳನ್ನೂ ವಿವರಗಳನ್ನೂ ಒದಗಿಸುವ ಉಪಕಾರಿಗಳು ಅವರು. ಅವಶ್ಯಕತೆ ಬಿದ್ದಾಗ ಬೆಂಗಳೂರಿನ ಹಲವಾರು ಗ್ರಂಥಭಂಡಾರಗಳಿಗೆ, ತಜ್ಞರ ಮನೆಗಳಿಗೆ ಅಲೆದು ಪ್ರಧಾನ ಸಂಪಾದಕರು ಬಯಸುವ ಪುಸ್ತಕಗಳನ್ನು ತಂದುಕೊಟ್ಟು ಅವರ ಕೆಲಸವನ್ನು ಹಗುರಗೊಳಿಸುವವರೂ ಅವರು. ಇದಾದ ನಂತರ ಅಗತ್ಯ ಕಂಡರೆ ಹಸ್ತಪ್ರತಿ ಸಂಪಾದಕ ಮಂಡಳಿಯ ಮುಂದೆ ಹೋಗುವುದು. ಕೆಲವು ಸಂದರ್ಭಗಳಲ್ಲಿ ಇತರ ಸದಸ್ಯರು ಒಮ್ಮೆ ಸಂಪೂರ್ಣವಾಗಿ ಓದಿದನಂತರ ಮುಂದಿನ ಸಭೆಯಲ್ಲಿ ನಿರ್ಧಾರ. ಜೊತೆಗೆ, ಪ್ರತಿ ಸಭೆಯಲ್ಲಿ ಆಗತಾನೆ ಪ್ರಕಟವಾದ ಪುಸ್ತಕಗಳನ್ನು ಕುರಿತು ಚರ್ಚೆ, ಅವನ್ನು ಕುರಿತು ಪ್ರಶಂಸಿಸಿ, ಆಕ್ಷೇಪಿಸಿ ಬಂದ ಪತ್ರಗಳ ಪರಿಶೀಲನೆ, ಅಗತ್ಯವಾದಾಗ ಉತ್ತರದ ನಿರ್ಧಾರ. 'ಈ ಶೀರ್ಷಿಕೆಗಳನ್ನು ಸೇರಿಸಿ' ಎಂದು ಬಂದ ಸಲಹೆಗಳ ಚರ್ಚೆ.

ಅವಶ್ಯವಾದಾಗ, 'ದಯೆಯಿಟ್ಟು ಈ ಶೀರ್ಷಿಕೆಯನ್ನು ಕುರಿತು ಟಿಪ್ಪಣಿ ಕಳುಹಿಸಿ' ಎಂದು ಸಲಹೆ ನೀಡಿದವರಿಗೆ ವಿನಂತಿ, ಬಂದ ಉತ್ತರದ ಪರಿಶೀಲನೆ, ನಿರ್ಧಾರ. ಕೆಲಸವಷ್ಟೂ ಇಡೀ ಸಂಪಾದಕ ಮಂಡಲಿಯಿಂದ, ಜೊತೆಯ ಕಾರ್ಯಕರ್ತರಿಂದ ಒಂದು ತಂಡವಾಗಿ ಸ್ನೇಹದಿಂದ, ವಿಚಾರವಿನಿಮಯದಿಂದ ನಡೆಯುವುದು. ಇದರಿಂದಲೇ ಇಷ್ಟು ಪ್ರಮಾಣದಲ್ಲಿ ಇಷ್ಟಾದರೂ ಸಮರ್ಪಕವಾಗಿ ಕೆಲಸ ನಡೆದದ್ದು.

ಇನ್ನೊಂದು ಮಾತನ್ನು ಸಂತೋಷದಿಂದ ಹೇಳಬೇಕು. ಹಲವು ಹಸ್ತಪ್ರತಿಗಳನ್ನು ಓದುವುದೇ ಹರ್ಷಕೊಡುವ ಅನುಭವ. ವಿಷಯಸಮೃದ್ಧಿ, ಅಚ್ಚುಕಟ್ಟಾಗಿ ಅಳವಡಿಸಿರುವುದು, ಖಚಿತತೆ, ನಿರೂಪಣೆಯ ಸೊಗಸು, ಭಾಷೆಯ ಸರಳತೆ ಸುಭಗತೆ– ಎಲ್ಲ ಅವನ್ನು ಮಾದರಿ ಪುಸ್ತಕಗಳನ್ನಾಗಿ ಮಾಡುವಂತಹವು. ಭಾರತ–ಭಾರತಿ ಸಂಪದ ಪ್ರಾರಂಭವಾದಾಗ ಪ್ರಧಾನ ಸಂಪಾದಕರಿಗೇ ತಿಳಿಯದಿದ್ದ ಎಷ್ಟೋ ವಿಷಯಗಳನ್ನು ಈ ಪುಸ್ತಕಗಳು ಅವರಿಗೆ ತಿಳಿಸಿಕೊಟ್ಟಿವೆ. ಮನುಷ್ಯ ಎಷ್ಟು ಎತ್ತರ ಏರಬಲ್ಲ ಎನ್ನುವುದನ್ನು ಈ ಪುಸ್ತಕಗಳು ಬಿತ್ತರಿಸಿದ ನಾಯಕರ ಜೀವನ–ಸಾಧನೆಗಳಿಂದ ಕಾಣುವಂತಾಗಿದೆ. ಮನುಷ್ಯ ಎಷ್ಟು ವಿಶ್ವಾಸ ತೋರಿಸಬಲ್ಲ, ಸ್ನೇಹಮಯನಾಗಿರಬಲ್ಲ ಎನ್ನುವುದನ್ನು ಈ ಲೇಖಕರು ಮತ್ತು ಜೊತೆಯ ಕಾರ್ಯಕರ್ತರು ಪ್ರಧಾನ ಸಂಪಾದಕರನ್ನು ನಡೆಸಿಕೊಂಡ ರೀತಿಯಿಂದ ಅನುಭವಿಸಿ ಸಂತೋಷಿಸುವಂತಾಗಿದೆ.

# ನಿರ್ವಹಣೆ - ಕಥೆ

* ಎಂ. ಐ. ತಿರುನಾರಾಯಣ ಐಯ್ಯಂಗಾರ್

## ಅಂಕುರಾರ್ಪಣ – ನಾಮಕರಣ

೨೭ ಜುಲೈ ೧೯೭೧.

ಭಾರತದ ಇತಿಹಾಸದಲ್ಲಿ, ಅದರಲ್ಲೂ ಕರ್ನಾಟಕದ ಚರಿತ್ರೆಯಲ್ಲಿ ಇಂದು ಸುದಿನ. ಪ್ರಧಾನಕಾರ್ಯದರ್ಶಿ ಶ್ರೀ ಮಧ್ವರಾಯರಿಗೆ ಏನಾದರೊಂದು ಹೊಳೆದರೆ ಸಾಕು, ಅದಕ್ಕೆ ಒಂದು ರೂಪ ಸಿದ್ಧವಾದಂತೆ. ಬೃಹದ್ ಯೋಜನೆಗಳ "ಶಿಲ್ಪಿ" ಇವರು. ತಮ್ಮ ಯೋಚನಾಲಹರಿಯನ್ನು ಕ್ರೋಡೀಕರಿಸಿದರು ; ಮಹಾಯಜ್ಞದ ಅಧ್ವರ್ಯುವಾದರು. ವೇದಪೂರ್ವದ ಕಾಲದಿಂದ ಹಿಡಿದು ಮೊನ್ನೆಮೊನ್ನೆಯವರೆಗೆ ಭಾರತದ ಮಣ್ಣಿನಲ್ಲಿ ಹುಟ್ಟಿ ಬೆಳೆದು ತಮ್ಮದೆಲ್ಲವನ್ನೂ ನೀಡಿ ಆಗಿಹೋದ ಮಹಾಪುರುಷರ ಜೀವನವನ್ನು ನಮ್ಮ ಇಂದಿನ ಮಕ್ಕಳಿಗೆ–ಮುಂದಿನ ಪೀಳಿಗೆಗೆ ಪುಟ್ಟ ಪುಟ್ಟ ಪುಸ್ತಕಗಳಲ್ಲಿ ನೀಡುವ ಭವ್ಯ ಸಂಕಲ್ಪ ಆಯಿತು.

ವೇದಗಳು, ರಾಮಾಯಣ, ಮಹಾಭಾರತ, ಭಾಗವತ, ಹದಿನೆಂಟು ಪುರಾಣಗಳು, ಇತಿಹಾಸ, ವಿಜ್ಞಾನ, ಕಾವ್ಯ, ಕಲೆ ಮುಂತಾದ ರಂಗಗಳಲ್ಲಿ ಆಗಿಹೋದ ಮಹಾಪುರುಷರ ಜೀವನವನ್ನು ಮಕ್ಕಳಿಗೆ ಕೊಡಬೇಕೆಂದು ನಿಶ್ಚಯಿಸಿ, ಮಹಾಪುರುಷರ, ಪ್ರಾತಃಸ್ಮರಣೀಯರ ಹೆಸರುಗಳನ್ನು ಪಟ್ಟಿಮಾಡುತ್ತಾ ಹೋದೆನು. ಪಟ್ಟಿ ಬೆಳೆಯುತ್ತಾ ಹೋಯಿತು. ಭಾರತದಲ್ಲಿ ಉದಿಸಿದ ಮಹಾಪುರುಷರೇನು ಒಬ್ಬಿಬ್ಬರೇ! ತಾಯಿ ಭಾರತಿಯ ಗರ್ಭದಲ್ಲಿ ಉದಿಸಿದ ಒಬ್ಬೊಬ್ಬರೂ ದಿವ್ಯಚೇತನ-ಸ್ಫೂರ್ತಿಚೇತನ. ನಮ್ಮ ತಾಯಿ ಎಷ್ಟಾದರೂ ರತ್ನಗರ್ಭಾ ವಸುಂಧರಾ ಅಲ್ಲವೆ ?

ಯೋಚನೆ ಬೆಳೆದಂತೆಲ್ಲಾ ಯೋಜನೆ ಗರಿಗೆದರಿತು. ಋಷಿಗಳು, ಮುನಿಗಳು, ಆಚಾರ್ಯರು, ಬಾಲಕರು, ಪುರಾಣಪುರುಷರು, ವಿಜ್ಞಾನಿಗಳು, ಸಾಧು-ಸಂತರು, ಕಲಾವಿದರು, ಕ್ರಾಂತಿಕಾರಿಗಳು, ಸ್ವಾತಂತ್ರ್ಯಯೋಧರು, ದಾರ್ಶನಿಕರು, ಕ್ರೀಡಾಪಟುಗಳು, ಸಾಹಿತಿಗಳು, ಸಂಗೀತಗಾರರು, ಮಹಾಮಾತೆಯರು, ರಾಜಕಾರಣಿಗಳು, ಆಧುನಿಕ ಮಹಾಪುರುಷರು – ಹೀಗೆ ಯೋಜನೆ ರೂಪುಗೊಳ್ಳಲಾರಂಭಿಸಿತು. ಇವರೆಲ್ಲರನ್ನೂ ತನ್ನ ಗರ್ಭದಲ್ಲಿ ಅಡಗಿಸಿಟ್ಟುಕೊಳ್ಳುವುದಕ್ಕೆ ಒಂದು ಹೆಸರು ಬೇಡವೇ ?

ಹೆಸರು ಚಿಕ್ಕಚೊಕ್ಕದಾಗಿರಬೇಕು; ಮಕ್ಕಳ ಮನಸ್ಸಿನಲ್ಲಿ ನಿಲ್ಲಬೇಕು, ನಾಲಿಗೆಯಲ್ಲಿ ಆಡಬೇಕು. ಎಷ್ಟೆಲ್ಲ ಹೆಸರುಗಳಿವೆ ! ಏನೆಂದು ನಾಮಕರಣ ಮಾಡುವುದು ?

**ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಮ್ ।**
**ವರ್ಷಂ ತತ್ ಭಾರತಂ ನಾಮ ಭಾರತೀ ಯತ್ರ ಸಂತತಿಃ ॥**

ಸಿಂಹದ ಮರಿಯ ಜೊತೆಯಲ್ಲಿ ಆಟವಾಡುತ್ತಿದ್ದ ವೀರಬಾಲಕ ; ಶೌರ್ಯದ ಮತ್ತೊಂದು ಹೆಸರು–ಭರತ ; ಶ್ರೀರಾಮಚಂದ್ರ ಹದಿನಾಲ್ಕು ವರ್ಷ ವನವಾಸದಲ್ಲಿದ್ದಾಗ, ರಾಮನ ಪಾದುಕೆಗಳನ್ನೇ ರಾಜನ ಸಂಕೇತವಾಗಿಟ್ಟುಕೊಂಡು, ತಾನೂ ವನವಾಸಿಯಂತೆ ಜೀವನ ನಡೆಸಿದ ಶ್ರೀರಾಮಚಂದ್ರನ ಸೋದರ, ತ್ಯಾಗಕ್ಕೆ ಮತ್ತೊಂದು ಹೆಸರು–ಭರತ ; ಮಹೀರಾಜ್ಯಮನಿತ್ತು ಕರ್ಮಾರಿವಿಧ್ವಂಸಿಯಾದ ಪುರುಸೂನು ಬಾಹುಬಲಿಯ ಅಣ್ಣ–ಭರತ. ತ್ಯಾಗ, ಶೌರ್ಯ, ಪ್ರೇಮ–ಮೂರೂ ಮುಪ್ಪುರಿಗೊಂಡು ಈ ಮೂವರು ಭರತರಿಂದಾಗಿ ಹಿಮಾಲಯದಿಂದ ಹಿಡಿದು ದಕ್ಷಿಣದ ಕಡಲವರೆಗೆ ಭಾರತವಾಯಿತು. ಬ್ರಹ್ಮನ ರಾಣಿ, ವಾಗ್ದೇವಿ, ಆಚಾರ್ಯ ಶಂಕರರಿಂದ ಪೂಜಿಸಲ್ಪಟ್ಟ ಭಾರತಿ–ಈ ಭಾರತದ ತಾಯಿ. ನಮ್ಮೆಲ್ಲರ ಸ್ಫೂರ್ತಿದಾಯಿ–ಈ ಭಾರತ – ಈ ಭಾರತಿ.

'ಭಾರತ–ಭಾರತಿ' ಮಕ್ಕಳ ಜ್ಞಾನಯಜ್ಞಕ್ಕೆ ನಾಮಕರಣವಾಯಿತು. ಕನ್ನಡ ನಾಡಿನ ಉದ್ದಗಲಕ್ಕೂ ಮನೆಮನೆಯ ಮಕ್ಕಳೆಲ್ಲರ ಬಾಯಿಯಲ್ಲಿ ಕೇಳಿಬಂದ ಹೆಸರು 'ಭಾರತ-ಭಾರತಿ.' ಎಂಟು ವರ್ಷಗಳಲ್ಲಿ ವಾಮನ, ತ್ರಿವಿಕ್ರಮವಾಯಿತು.

೧೯ ಮಾರ್ಚ್ ೧೯೭೨.

ಭಾರತ-ಭಾರತಿ ಯೋಜನೆಯ ಕರಡು ಸಿದ್ಧವಾಯಿತು. ರಂಗುರಂಗಿನ ಭಾರತದ ನಕ್ಷೆಯಲ್ಲಿ ಮಹಾಪುರುಷರ ಚಿತ್ರಗಳಿಂದ ಕೂಡಿದ ಆಕರ್ಷಕ ಕರಪತ್ರ ಪ್ರಕಟವಾಯಿತು. ಯೋಜನೆಯ ವಿವರ ಕಂಡು ಕೆಲವರು ಹುಬ್ಬೇರಿಸಿದರು; ಮತ್ತೆ ಕೆಲವರು ಸಂತೋಷಪಟ್ಟರು.

ಭಾರತ-ಭಾರತಿ ಬೃಹದ್ ಯೋಜನೆಯ ಪೂರ್ಣ ವಿವರವನ್ನು ೧೯೭೨ರ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಪತ್ರಿಕಾಕರ್ತರ ಸಭೆಯಲ್ಲಿ ಶ್ರೀ ಮಧ್ವರಾವ್ ಅವರು ಪ್ರಕಟಿಸಿದರು. ಕರ್ನಾಟಕದ ಎಲ್ಲಾ ಪತ್ರಿಕೆಗಳು "ಶಹಬಾಸ್" ಎಂದವು. ಸಂಪಾದಕೀಯ ಬರೆದವು.

ಈ ಯೋಜನೆಗೆ ಒಬ್ಬ ಸಮರ್ಥ ಸಂಪಾದಕರು ಬೇಕು. ಎಲ್ಲಿ ? ಎಲ್ಲಿ ? ಎಲ್ಲಿ ? ಹುಡುಕುತ್ತಾ ಹೋದಂತೆಲ್ಲ ಕೆಲಸ ಕಷ್ಟವೇನೋ ಎನಿಸುವಂತಾಯಿತು. ಆದರೂ ಸಿಕ್ಕರು; ಸಂಪಾದಕ ಯಾಜಮಾನ್ಯವನ್ನು ಒಪ್ಪಿಕೊಂಡರು, ಶ್ರೀ ಎಲ್.ಎಸ್. ಶೇಷಗಿರಿರಾಯರು. ಕನ್ನಡ ಸಾಹಿತ್ಯದಲ್ಲಿ ಗಣ್ಯ ವಿಮರ್ಶಕರು. ವಿದ್ವತ್ತು-ವಿನಯ ಎರಡೂ ಅಪಾರವಾಗಿರುವ ಇವರು ಭಾರತ-ಭಾರತಿಯ ಪ್ರಧಾನ ಸಂಪಾದಕರಾದರು. ಎಂಟು ವರ್ಷಗಳ ಕಾಲ ಅವಿಚ್ಛಿನ್ನವಾಗಿ, ನಿರಂತರವಾಗಿ ಯಾವ ಎಡರು-ತೊಡರುಗಳು ಬಂದರೂ, ಜಟಿಲ ಸಮಸ್ಯೆಗಳು ಎದುರಾದರೂ, ಕ್ಲಿಷ್ಟ ಪರಿಸ್ಥಿತಿಗಳು ಅಡ್ಡನಿಂತರೂ ನಿರಂತರ ಪ್ರವಾಹದಂತೆ ಪ್ರೀತಿಯ-ಕರ್ತವ್ಯದ ತೊರೆಯನ್ನು ಹರಿಸಿದರು ಶ್ರೀ ಶೇಷಗಿರಿರಾಯರು.

## ರಮ್ಯ ಯೋಜನೆ– ಬೃಹತ್ ಕಲ್ಪನೆ

ಚಿಂತನ-ಮಂಥನವಾಯಿತು ; ಶ್ರೀ ಮಧ್ವರಾಯರು ಪೂರ್ಣ ವಿವರವನ್ನು ತಮ್ಮ ಸಹಕಾರಿಗಳಿಗೆ ಮನವರಿಕೆ ಮಾಡಿಕೊಟ್ಟರು. ಯೋಚನೆ-ಯೋಜನೆಯಾಗಿ ರೂಪತಾಳಿತು. ಬೃಹದ್ ಯೋಜನೆಗೊಂದು ನೆಲೆಕಟ್ಟು ಬೇಕು ; ವ್ಯವಸ್ಥಿತ ಆರ್ಥಿಕ ಸಂಪನ್ಮೂಲ ಬೇಕು. ಎಲ್ಲಕ್ಕಿಂತ ಮಿಗಿಲಾಗಿ ಲೆಕ್ಕಾಚಾರ ಬೇಕು. ಭಾರತ-ಭಾರತಿ ಯೋಜನೆಯಲ್ಲಿ ಪ್ರಕಟಿಸಬೇಕಾದ ಪುಸ್ತಕಗಳು, ಅವುಗಳ ಬೆಲೆ, ಯೋಜನೆಗೆ ಬೇಕಾದ ಹಣ ಎಲ್ಲವೂ ವ್ಯವಸ್ಥಿತ ರೀತಿಯಲ್ಲಿ ಸಾಗಬೇಕು. ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಮೈ. ಚ. ಜಯದೇವ್ ಅವರು ಒಂದು ಚೊಕ್ಕ ಯೋಜನೆಯ 'ನೀಲಿ ನಕಾಶೆ' ತಯಾರಿಸಿದರು. ಪುಸ್ತಕಗಳಿಗೆ ಬೇಕಾಗುವ ಕಾಗದ, ರಟ್ಟು ಮತ್ತು ಮುದ್ರಣ ಯಂತ್ರಗಳು ಮುಂತಾದವುಗಳ ಬಗ್ಗೆ ಪ್ರಯತ್ನ ಪ್ರಾರಂಭಿಸಿದರು. ಮುಂದೆ ಭಾರತ-ಭಾರತಿಗೆ ಇವರ ದಕ್ಷ ಆಡಳಿತದ ರಕ್ಷೆ ದೊರೆಯಿತು.

## 'ನಿತ್ಯೋತ್ಸವ ತಾಯಿ, ನಿನಗೆ ನಿತ್ಯೋತ್ಸವ'

ಸಹಸ್ರಾರು ಶೀರ್ಷಿಕೆಗಳಲ್ಲಿ ಭಾರತ-ಭಾರತಿ ಯೋಜನೆಯಲ್ಲಿ ಐದು ವರ್ಷಗಳಲ್ಲಿ ಐದುನೂರ ಹತ್ತು ಪುಸ್ತಕಗಳನ್ನು ಭಾರತಜನನಿಯ ತನುಜಾತೆಯಾದ ಕರ್ನಾಟಕ ಮಾತೆಯ ಸಹಸ್ರಾರು ಪುಟಾಣಿಗಳಿಗೆ ನೀಡಬೇಕೆಂದು ವ್ಯವಸ್ಥೆಯಾಯಿತು. ಎಲ್ಲಿಂದ ಆರಂಭಿಸುವುದು ? ಯಾವುದನ್ನು ಮೊದಲು ಪ್ರಕಟಿಸುವುದು ? ಯೋಚಿಸಿ, ಯೋಚಿಸಿ, ಒಂದು ನಿರ್ಧಾರಕ್ಕೆ ಬಂದದ್ದಾಯಿತು. ಮೊದಲನೆಯ ಪುಸ್ತಕ 'ವಾಲ್ಮೀಕಿ' ! ಆದರ್ಶ ಪುತ್ರ, ಆದರ್ಶ ತಂದೆ, ಆದರ್ಶ ರಾಜ, ಆದರ್ಶ ಶತ್ರು, ಆದರ್ಶ ಸೋದರ, ಆದರ್ಶ ಪತಿ–ಎಲ್ಲದರಲ್ಲಿಯೂ ಆದರ್ಶನಾದ ಶ್ರೀರಾಮನ ಚರಿತೆಯನ್ನು ಭಾರತಕ್ಕೆ, ಭಾರತದ ಮೂಲಕ ಜಗತ್ತಿಗೆ ನೀಡಿದ ಆದಿಕವಿ, ವಾಲ್ಮೀಕಿ. ಕವಿ, ಇತಿಹಾಸಕಾರ ವಾಲ್ಮೀಕಿ–ಆ ಮಹರ್ಷಿಯೇ ನಮ್ಮ ಯೋಜನೆಯ ಮೊದಲಿಗ.

ಭಾರತದ ಎಲ್ಲ ರಂಗದಲ್ಲಿಯೂ ಕ್ರಾಂತಿಯಾಗಬೇಕು, 'ಸಮಗ್ರಕ್ರಾಂತಿ'–ಎಂದು ಹೋರಾಡಿದ ಜೆ. ಪಿ. ಸಮಾಜವನ್ನು ಋಜುಮಾರ್ಗದಲ್ಲಿ ಕೊಂಡೊಯ್ಯುವುದಕ್ಕಾಗಿ ಕಡೆಯುಸಿರಿನವರೆಗೆ ಹೋರಾಡಿದ ತ್ಯಾಗಮೂರ್ತಿ. ಲೋಕನಾಯಕ ಜೆ. ಪಿ.–ಅವರೇ ಈ ಭಾರತ-ಭಾರತಿ ಶೀರ್ಷಿಕೆಗಳಲ್ಲಿ ಕೊನೆಯವರು.

ಮೊದಲ ವರ್ಷ ೬೦ ಪುಸ್ತಕಗಳು ; ಎರಡನೆಯ ವರ್ಷ ೯೦ ಪುಸ್ತಕಗಳು; ಮೂರು, ನಾಲ್ಕು ಮತ್ತು ಐದನೆಯ ವರ್ಷ – ಪ್ರತಿ ವರ್ಷ ೧೨೦ ಪುಸ್ತಕಗಳು –ಈ ರೀತಿಯಲ್ಲಿ ಪ್ರಕಟಿಸಬೇಕೆಂದು ನಿಶ್ಚಯವಾಯಿತು. ಈ ಐದು ವರ್ಷಗಳಲ್ಲಿ ಪ್ರಕಟಿಸಬೇಕಾದ ಪುಸ್ತಕಗಳ ಪಟ್ಟಿ, ಪ್ರಕಟಣೆಯ ದಿನಾಂಕ, ಓದುಗರಿಗೆ ತಲಪಬೇಕಾದ ದಿನಾಂಕ, ಲೇಖಕರಿಂದ ಹಸ್ತಪ್ರತಿ ಬರಬೇಕಾದ ದಿನಾಂಕ, ಲೇಖಕರಿಗೆ

ಸಲ್ಲಬೇಕಾದ ಗೌರವಧನ, ಪುಸ್ತಕಗಳು ನಿಶ್ಚಿತ ದಿವಸ ತಲಪುವಂತೆ ವ್ಯವಸ್ಥೆ, ರಕ್ಷಾ ಪುಟದ ಚಿತ್ರ ರಚನೆಯ ಸಿದ್ಧತೆ – ಹೀಗೆ ಎಲ್ಲವನ್ನೂ ಮೊದಲೇ ನಿಶ್ಚಯಿಸಿ, ಪ್ರತಿ ಕಂತಿನಲ್ಲೂ ವೈವಿಧ್ಯಪೂರ್ಣ ಹತ್ತು ಪುಸ್ತಕಗಳ ಪ್ರಕಟಣೆ ನಿರ್ಧರಿಸಿದ್ದು, ವ್ಯವಸ್ಥೆಯ ವೈಶಿಷ್ಟ್ಯಗಳಲ್ಲೊಂದು.

೧೯೭೨, ಭಾರತ ಸ್ವಾತಂತ್ರ್ಯದ ಬೆಳ್ಳಿಯ ಹಬ್ಬ. ಅದರೊಂದಿಗೆ ಮಿಳಿತವಾದ ಜಾಗತಿಕ ಪುಸ್ತಕ ವರ್ಷ. ಭಾರತದ ಮಹಾಪುರುಷರ ಜೀವನ-ಸಾಧನೆಗಳನ್ನು ದೀಪಾವಳಿಯಂದು ಮುಂದಿನ ಪೀಳಿಗೆಗೆ ಭಾರತ-ಭಾರತಿಯ ಮೂಲಕ ಕೊಂಡೊಯ್ಯುವ 'ಯಜ್ಞ' ಆರಂಭವಾಯಿತು.

## ಸರಸ್ವತಿಯ ಉತ್ಸವಕ್ಕೆ ಲಕ್ಷ್ಮಿಯ ಕೃಪೆ

ಲಕ್ಷ್ಮಿ ಚಂಚಲೆ; ಅದರಲ್ಲೂ ಸರಸ್ವತಿ ಇರುವೆಡೆ ನಿಲ್ಲುವುದಿಲ್ಲ–ಎಂಬುದು ಪ್ರತೀತಿ. ಈ ಜ್ಞಾನಯಜ್ಞಕ್ಕೆ ಬೇಕಾದ್ದು 'ದ್ರವ್ಯಯಜ್ಞ'. ಯೋಚನೆ–ಯೋಜನೆ ಕಲ್ಪನೆ ಕನಸುಗಳಲ್ಲಿಯೇ ಮುರಿದುಬಿದ್ದೀತೇ – ಎಂಬ ಸಂದೇಹ. ಆದರೂ ಕನ್ನಡದ ಕಂದಮ್ಮಗಳ ಮನಸ್ಸನ್ನು, ಬದುಕನ್ನು ರೂಪಿಸುವ ಈ ಬೃಹದ್ ಯೋಜನೆ ಕೇವಲ ಕನಸಾಗಿ ಉಳಿಯುವುದಕ್ಕೆ ಬಿಡಬಾರದು. ಈ ಬೃಹದ್ ಯೋಜನೆಗೆ ಮುಖ್ಯ ಅಪಾರ ಹಣ – ಲಕ್ಷಾಂತರ ರೂಪಾಯಿಗಳ ಬಂಡವಾಳ. ಎಲ್ಲಿಂದ ತರುವುದು ? ಶ್ರೀ ಮಧ್ವರಾಯರಿಗೆ ಒಂದು ಯೋಜನೆ ಹೊಳೆಯಿತು.

"ಕನ್ನಡ ಸಾಹಿತ್ಯ ಸೇವೆಗೆ ನಿಮ್ಮ ಹಣ ನಮ್ಮಲ್ಲಿ ಐದು ವರ್ಷಗಳ ಠೇವಣಿ ಆಗಿ ಇಡಿ. ನಿಯಮಿತವಾಗಿ ಶೇ. 6¼% ರಂತೆ ಬಡ್ಡಿ, ಜೊತೆಗೆ ಭಾರತ-ಭಾರತಿ ಪುಸ್ತಕಗಳನ್ನು ಉಚಿತವಾಗಿ ಕಳುಹಿಸುತ್ತೇವೆ" ಎಂದು ಕರ್ನಾಟಕದ ಜನತೆಯನ್ನು ಪ್ರಾರ್ಥಿಸಿದೆವು.

ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ್ರೀ ನಂ. ಮಧ್ವರಾವ್, ಪರಿಷತ್ತಿನ ಪ್ರತಿನಿಧಿ ಶ್ರೀ ರಾಜಗೋಪಾಲ್ ಅವರು ಕರ್ನಾಟಕದ ಉದ್ದಗಲಕ್ಕೂ ಪ್ರವಾಸ ಮಾಡಿದರು, ನೂರಾರು ಮಂದಿಯನ್ನು ಸಂಪರ್ಕಮಾಡಿದರು. ಲಕ್ಷಾಂತರ ರೂಪಾಯಿಗಳ ಮೊತ್ತದ ಠೇವಣಿ ಸಂಗ್ರಹ ಕಾರ್ಯ ಪ್ರಾರಂಭವಾಯಿತು. ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆ, ಬೆಂಗಳೂರಿನ ನಟರಾಜನ್ ಮುಂತಾದವರಿಂದ ಮೊದಲುಗೊಂಡು – ಹೆಚ್ಚಿನ ಮೊತ್ತದ ಠೇವಣಿಗಳಿಂದ ಹಿಡಿದು ಚಿಕ್ಕಪುಟ್ಟ ಠೇವಣಿಗಳವರೆಗೆ ಶ್ರೀ ಮಧ್ವರಾವ್, ಶ್ರೀ ಅರಕಲಿ ನಾರಾಯಣ್, ಶ್ರೀ ಜಯದೇವ್, ಶ್ರೀ ರಾಜಗೋಪಾಲ್ ತಂದರು.

ಕರ್ನಾಟಕದ ಮೂಲೆ ಮೂಲೆಗಳಿಂದ ಕನಕಧಾರೆಯಾಯಿತು; ಸರಸ್ವತಿಗೆ 'ಶ್ರೀ'ರಕ್ಷೆ ದೊರೆಯಿತು. ಕರ್ನಾಟಕದ ಜನಕೋಟಿಯ ಸದ್ಭಾವನೆ, ಸಹಕಾರ, ಆದರ, ಪ್ರೀತಿ-ವಾತ್ಸಲ್ಯಗಳೇ ನಮ್ಮ ಯೋಜನೆಗೆ ನೈತಿಕ ಬೆಂಬಲವಾಯಿತು.

ಶ್ರೀಸಾಮಾನ್ಯರೆಂದೆನ್ನಿಸಿಕೊಂಡ ಮಹಾಜನತೆಯಿಂದ ಠೇವಣಿ ದೊರಕಿತು; ಭಾರತ-ಭಾರತಿ ಬೆಳೆಯುವುದಕ್ಕೆ ಇಂಬು ದೊರಕಿತು; ನಮಗೆ ಧೈರ್ಯಸ್ಥೈರ್ಯ ಮೂಡಿತು. ಯೋಜನೆಯ ನಿಯಮದಂತೆ ಭಾರತ-ಭಾರತಿಯೂ ಅವರೆಲ್ಲರ ಕೃತಜ್ಞತೆಯ ಕುರುಹಾಗಿ ಅವರ ಮನೆ ಹೊಕ್ಕಿತು. ಅವರಿಟ್ಟಿದ್ದ ಠೇವಣಿಗೆ ಬಡ್ಡಿ ಹಣವೂ ದೊರಕಿತು. ತಮಗಾಗಿ, ತಮ್ಮಿಂದ ತಮ್ಮ ಮಕ್ಕಳ ಭವಿಷ್ಯತ್ತಿಗಾಗಿ ಪ್ರೀತಿಯಿಂದ, ಔದಾರ್ಯದಿಂದ, ವಾತ್ಸಲ್ಯದಿಂದ ನೀಡಿದ ಹಣ ಸಾರ್ಥಕ್ಯ ಪಡೆಯಿತು ಭಾರತ-ಭಾರತಿಯಲ್ಲಿ. ಹೀಗೆ ಸಾರ್ವಜನಿಕರಿಂದ ಸಂಗ್ರಹವಾದ ಠೇವಣಿ ಒಟ್ಟು ಮೊತ್ತ ಸುಮಾರು 7¼ ಲಕ್ಷ ರೂಪಾಯಿಗಳು.

ರಾಷ್ಟ್ರೋತ್ಥಾನ ಪರಿಷತ್ತಿನ ಪ್ರತಿನಿಧಿ ಶ್ರೀ ಕೊ. ರಾ. ರಾಜಗೋಪಾಲ್ ಅವರು ಭಾರತ-ಭಾರತಿಗೆ ಠೇವಣಿ ಸಂಗ್ರಹ, ಪುಸ್ತಕ ಪ್ರಚಾರ, ಪ್ರದರ್ಶನ, ಮಾರಾಟ ಮುಂತಾದುವೆಲ್ಲದರಲ್ಲಿ ಕರ್ನಾಟಕದ ಮೂಲೆಮೂಲೆಗೆ ನಾಲ್ಕಾರುಬಾರಿ ಪ್ರವಾಸಮಾಡಿ ಕನ್ನಡ ಜನ-ಮನವನ್ನು ಭಾರತ-ಭಾರತಿಯತ್ತ ತಿರುಗಿಸಿ ಶ್ರೀಮಂತಗೊಳಿಸಿದ್ದಾರೆ. ಇವರ ನಿರಂತರ ಪ್ರವಾಸದಿಂದ ಭಾರತ-ಭಾರತಿಗೆ ಅನೇಕ ಗಣ್ಯ ವ್ಯಕ್ತಿಗಳ, ಸಂಘ ಸಂಸ್ಥೆಗಳ ಸಹವಾಸ ಲಾಭ ದೊರಕಿತು. ಕರ್ನಾಟಕದ ಹೊರಗೂ ನಲಿಯಿತು. ಮುಂಬಯಿ, ಹೈದರಾಬಾದ್ ಮುಂತಾದ ಕಡೆ ವಿಜೃಂಭಿಸಿತು.

## ಸಂಪಾದಕೀಯ ಕಾರ್ಯ

ಸಮರ್ಥ ಪ್ರಧಾನ ಸಂಪಾದಕರ ಮಾರ್ಗದರ್ಶನ, ಸ್ಫೂರ್ತಿ-ಉತ್ಸಾಹ ತುಂಬುವ ವಾತಾವರಣದಲ್ಲಿ ಸಂಪಾದಕೀಯ ಕಾರ್ಯದ ಪ್ರಾರಂಭ. ಕರ್ನಾಟಕದ ಹಿರಿಯ-ಕಿರಿಯ ಹೆಸರಾಂತ, ಉದಯೋನ್ಮುಖ ಲೇಖಕರ ವಿಳಾಸದ ಸಂಗ್ರಹ. ಅವರವರ ಅಭಿರುಚಿಗೆ ತಕ್ಕಂತೆ "ನೀವು ಇಂತಹ ಪುಸ್ತಕ ಬರೆದು ಕೊಡಿ" ಎಂದು ನಮ್ಮಿಂದ ಪ್ರಾರ್ಥನೆ. ಅವರಿಂದ ಉತ್ತರ.

ಮುದ್ರಣಕ್ಕೆ ಅನುಕೂಲವಾಗುವಂತೆ ನಾವೇ ಲೇಖಕರಿಗೆ ಗೆರೆ ಹಾಕಿದ ಕಾಗದ ಕಳುಹಿಸುವುದು ; ಲೇಖಕರಿಗೆ ಬೇಕಾದ ಆಧಾರ ಗ್ರಂಥಗಳನ್ನು ತರಿಸಿಕೊಡುವುದು, ಕಾಲಕಾಲಕ್ಕೆ ಸ್ಮರಣ ಪತ್ರ, ವೈಯುಕ್ತಿಕ ಭೇಟಿ, ನಮ್ಮ 'ಸಂಸಾರ ತಾಪತ್ರಯ' ಅವರೊಡನೆ ವರದಿ – ಹೀಗೆ ಹತ್ತಾರು ವಿಧದ ಕಾರ್ಯದ ಮುನ್ನಡೆ.

ಭಾರತ-ಭಾರತಿಯಲ್ಲಿ 'ಇಂತಹ ಪುಸ್ತಕ ಇಂತಹ ದಿನಾಂಕವೇ' ಪ್ರಕಟವಾಗಬೇಕೆಂದು ನಿಶ್ಚಯವಾಗುತ್ತಿತ್ತು. ಆದರೆ ಅನೇಕ ಸಂದರ್ಭಗಳಲ್ಲಿ ಲೇಖಕರಿಂದ ಹಸ್ತಪ್ರತಿ ಬರುವುದು ವಿಳಂಬವಾಗುತ್ತಿತ್ತು. ಲೇಖಕರ ಮನೆಗೇ ನಮ್ಮ ಧಾಳಿ. ಒಮ್ಮೆ ಹೆಸರಾಂತ ಲೇಖಕರೊಬ್ಬರಿಂದ ಹಸ್ತಪ್ರತಿ ಬರಬೇಕಾಗಿತ್ತು. ಹತ್ತಾರು ಬಾರಿ ಅವರನ್ನು ಕಂಡು ಕೇಳಿದ್ದಾಯಿತು. "ನಿಶ್ಚಿತ ದಿನಾಂಕಕ್ಕೆ ಹಸ್ತಪ್ರತಿ ಕೊಡು

ತ್ತೇನೆ. ರಕ್ಷಾಪುಟ ಮುದ್ರಿಸಿಬಿಡಿ" ಎಂದರು. ಅದರಂತೆಯೇ ರಕ್ಷಾಪುಟ ಮುದ್ರಿತ ವಾಯಿತು. ಆ ಕಂತಿನಲ್ಲಿ ಪ್ರಕಟವಾಗಬೇಕಾಗಿದ್ದ ಉಳಿದ ಒಂಬತ್ತು ಪುಸ್ತಕಗಳೂ ಸಿದ್ಧವಾದವು. ಪ್ರಕಟಣೆಯ ದಿನಾಂಕ ಹತ್ತಿರ ಬಂತು. ಆ ಲೇಖಕರಿಂದ ಹಸ್ತಪ್ರತಿ ಬರಲೇ ಇಲ್ಲ. ಏನು ಮಾಡುವುದು? ಚಿಂತೆ ಶುರುವಾಯಿತು. ಅವರನ್ನು ಕಂಡು ಪರಿಸ್ಥಿತಿ ವಿವರಿಸಿದ್ದಾಯಿತು. ಆದರೆ "ಈಗ ಸದ್ಯಕ್ಕೆ ಹಸ್ತಪ್ರತಿ ಬರೆಯುವ ಸ್ಥಿತಿಯೇ ಇಲ್ಲ" ಎಂದು ಕೈಯಾಡಿಸಿಬಿಟ್ಟರು. ಈಗ ಬೇರೆ ಶೀರ್ಷಿಕೆ ಸೇರಿಸುವಂತಿಲ್ಲ. ಕೊನೆಗೆ ಲೇಖಕರ ಮುಂದೆ ಕುಳಿತು ಹಠ ಮಾಡಿದ್ದಾಯಿತು. ನಮ್ಮ ಕಷ್ಟ-ಸಮಸ್ಯೆ ಅಪರಿಗರಿವಾಯಿತು. ಅಲ್ಲೇ ಕುಳಿತು ಎರಡು-ಎರಡು ಪುಟದಷ್ಟು ಹಸ್ತಪ್ರತಿ ಬರೆಸಿ ತಂದು ನಿಶ್ಚಿತ ದಿನಾಂಕದಂದೇ ಪ್ರಕಟಿಸಿದೆವು. ಇನ್ನು ಕೆಲವರು ಹಿರಿಯ ಲೇಖಕರೇ ಖುದ್ದಾಗಿ ನಮ್ಮ ಕಾರ್ಯಾಲಯಕ್ಕೆ ಬಂದು "ನೋಡಿ, ನೀವು ಇಷ್ಟು ಅಚ್ಚುಕಟ್ಟಾಗಿ ನಿಶ್ಚಿತ ದಿನಾಂಕದಂದೇ ಪುಸ್ತಕ ಪ್ರಕಟಿಸುತ್ತಿದ್ದೀರಿ. ನಮ್ಮಿಂದ ನಿಮ್ಮ ಯೋಜನೆಗೆ ತೊಂದರೆ ಆಗಬಾರದು ಎಂದು ಹಸ್ತಪ್ರತಿ ತಂದಿದ್ದೇವೆ" ಎಂದು ಹೇಳುತ್ತಿದ್ದ ಸಂದರ್ಭಗಳೂ ಉಂಟು. ಹೀಗೆ ಬರೆದರೆ ಒಂದೊಂದು ಪುಸ್ತಕಕ್ಕೂ ಒಂದೊಂದು ಕಥೆ. ಒಂದೊಂದರಲ್ಲೂ ಹೊಸ ಹೊಸ ಅನುಭವ. ಆದರೆ ಎಲ್ಲಾ ಇಲ್ಲಿ ಅಪ್ರಕೃತ. ಕೆಲವೊಂದು ಸವಿ ನೆನಪು; ಮತ್ತೆ ಕೆಲವು ಕಹಿ. ನೆನಪಿನ ಬುತ್ತಿ ಬಿಚ್ಚುತ್ತಾ ಹೋದರೆ ಮುಗಿಯದು.

ಲೇಖಕರಿಂದ ಹಸ್ತಪ್ರತಿ ನಮಗೆ ಬಂದನಂತರ ಸಂಪಾದಕೀಯ ವಿಭಾಗ ಹಸ್ತಪ್ರತಿಯ ಪದಗಳನ್ನು ಎಣಿಸುವ ಕಾರ್ಯ ಮಾಡುತ್ತದೆ. ಭಾರತ-ಭಾರತಿಯ ಒಂದು ಪುಸ್ತಕದಲ್ಲಿ ೨೯೦೦-೩೧೦೦ ಪದಗಳು ಅಡಕವಾಗುತ್ತವೆ. ಹಸ್ತಪ್ರತಿಯಲ್ಲಿ ೨೯೦೦ ಪದಗಳಿಗಿಂತ ಕಮ್ಮಿ ಇದ್ದರೆ ಮತ್ತೆ ಲೇಖಕರಿಗೆ ಕಳುಹಿಸಿ ಮತ್ತಷ್ಟು ಸಾಮಗ್ರಿ ಸೇರಿಸಿ ಕಳುಹಿಸುವಂತೆ ಕೇಳಬೇಕಾಗುತ್ತಿತ್ತು.

ಲೇಖಕರು ಸೂಚಿಸಿರುವ ಆಧಾರಗ್ರಂಥಗಳನ್ನೆಲ್ಲಾ ತರುವುದು, ಜೊತೆಗೆ ಆಯಾ ಪುಸ್ತಕಕ್ಕೆ ಸಂಬಂಧಿಸಿದ ಬೇರೆಲ್ಲಾ ಪುಸ್ತಕಗಳನ್ನೂ ತರುವುದು. ಹಸ್ತಪ್ರತಿಯನ್ನು ಸಮಗ್ರವಾಗಿ ಓದಿ ಸಂದೇಹ ಬಂದ ಕಡೆ ಗುರುತು ಹಾಕುವುದು. ಹಸ್ತಪ್ರತಿಯಲ್ಲಿ ಬರುವ ಎಲ್ಲಾ ದಿನಾಂಕ, ಹೆಸರುಗಳು, ಊರುಗಳು, ಘಟನೆಗಳು, ಅವು ನಡೆದ ಸ್ಥಳ, ಹೀಗೆ ಹತ್ತಾರು ಮಾಹಿತಿಗಳನ್ನು ಬರೆದಿಟ್ಟು, ಇವೆಲ್ಲವನ್ನೂ ಮೂಲ ಗ್ರಂಥದೊಡನೆ ತಾಳೆ ನೋಡುವುದು. ಯೋಜನೆಯಲ್ಲಿ ಪ್ರಕಟವಾಗುವ ಎಲ್ಲಾ ಪುಸ್ತಕಗಳಲ್ಲೂ ಒಂದೇ ರೀತಿಯ ಹೆಸರು-ಊರು-ದಿನಾಂಕ ಇತ್ಯಾದಿ ನಮೂದಾಗಬೇಕು. ಪುಟ್ಟ ಪುಸ್ತಕವಾದರೂ ಮಕ್ಕಳಿಗೆ ಅಧಿಕೃತ-ಸ್ಪಷ್ಟ ಸಂಗತಿ ತಿಳಿಸಬೇಕು. ಇದರಿಂದಾಗಿ ೪೮ ಪುಟದ ಪುಸ್ತಕವಾದರೂ ಆ ಮಹಾಪುರುಷರ ಬಗ್ಗೆ ಪ್ರಕಟವಾಗಿರುವ ನೂರಾರು ಪುಟದ ಪುಸ್ತಕ ತರಬೇಕಾಯಿತು. ಈಗ ಸಾವಿರಾರು ಪುಸ್ತಕಗಳ ಒಂದು ಗ್ರಂಥಾಲಯ ಭಾರತ-ಭಾರತಿಯ ಕೊಡುಗೆ.

ಅಧಿಕೃತ ನಿರೂಪಣೆ ಭಾರತ-ಭಾರತಿಯ ವೈಶಿಷ್ಟ್ಯ. ಮಾಹಿತಿಗಳಲ್ಲಿ ಸಂದೇಹ-ವ್ಯತ್ಯಾಸ ಬಂದರೆ ನೇರವಾಗಿ ಲೇಖಕರಿಗೆ ಅಥವಾ ಆಯಾಯಾ ವ್ಯಕ್ತಿಗಳ ವಿಷಯ ಬಲ್ಲವರಿಗೆ ಬರೆದು ವಿವರಣೆ ಕೇಳುವುದು ಸಾಮಾನ್ಯ. ಉದಾಹರಣೆಗೆ ಶ್ರೀಮತಿ ಕಮಲಾ ನೆಹರೂ ಅವರ ಕುರಿತು ಭಾರತ-ಭಾರತಿಯಲ್ಲಿ ಪುಸ್ತಕ ಪ್ರಕಟಿಸುವ ನಿಶ್ಚಯವಾಗಿ ಹಸ್ತಪ್ರತಿಯೂ ಬಂತು. ಪರಿಶೀಲನೆಯ ಕಾರ್ಯ ಮುಗಿದು ಮುದ್ರಣಕ್ಕೂ ಪ್ರಾರಂಭವಾಯಿತು. ಆಗ ಕಮಲಾ ನೆಹರೂ ಅವರ ತಂದೆಯ ಹೆಸರಿನ ಬಗ್ಗೆ ಸಂದೇಹ ಬಂತು. ಹತ್ತಾರು ಪುಸ್ತಕಗಳನ್ನು ಪರಿಶೀಲಿಸಿದಾಗ ನಾಲ್ಕೈದು ರೀತಿಯ ಹೆಸರುಗಳು. ಭಾರತದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಗೇ ತಂತಿ ಕಳುಹಿಸಿದೆವು. ಪ್ರಧಾನಿ ಕಛೇರಿಯಿಂದ ತಂತಿ ಉತ್ತರ ಬಂತು. ಸಮಯದ ಅಭಾವದಿಂದ ಮುದ್ರಣ ಪ್ರಾರಂಭವಾಗಿತ್ತು. ತಂತಿ ಬರುವ ಹೊತ್ತಿಗೆ ೩೦೦೦ ಪ್ರತಿಗಳು ಮುದ್ರಣವಾಗಿದ್ದವು. ಅವುಗಳನ್ನೆಲ್ಲ ಬದಿಗೆ ಸರಿಸಿ ಹೆಸರನ್ನು ಸರಿಪಡಿಸಿ ಮುದ್ರಣ ಮುಂದುವರಿಯಿತು.

## ಗುಹೆಯ ಕತ್ತಲಿನಿಂದ ಪುಸ್ತಕದ ಬೆಳಕಿಗೆ!

ಖಾರವೇಲ ಸುಮಾರು ೨,೩೦೦ ವರ್ಷಗಳ ಹಿಂದೆ ಆಳಿ ಬಾಳಿದ ಕಳಿಂಗ ಚಕ್ರವರ್ತಿ. ಮಹಾ ಪರಾಕ್ರಮಿ. ಆತನ ಬಗ್ಗೆ ಐತಿಹಾಸಿಕ ಸಾಮಗ್ರಿ ಉಪಲಬ್ಧವಿರುವುದು ಕಡಿಮೆ. ಭಾರತ–ಭಾರತಿಯಲ್ಲಿ ಈ ಮಹಾಪುರುಷ ಬೆಳಕಿಗೆ ಬಂದಿದ್ದಾನೆ. ಇರುವ ಐತಿಹಾಸಿಕ ಸಾಮಗ್ರಿಯನ್ನೇ ಕ್ರೋಡೀಕರಿಸಲು ಲೇಖಕರು, ಸಂಪಾದಕರು ಬಹಳ ಶ್ರಮಿಸಿದರು. ಭುವನೇಶ್ವರದ ಬಳಿಯ 'ಹಾಥಿಗುಂಫಾ' ಗುಹೆಯಲ್ಲಿ ಖಾರವೇಲ ಬರೆಸಿದ ಶಿಲಾಲೇಖವಿದೆ. ಭಾರತ–ಭಾರತಿಯ ಲೇಖಕರು ಆ ಶಿಲಾಲೇಖದ ಪ್ರತಿಯನ್ನು ಪರಿಶೀಲಿಸಿ ಖಚಿತ ಸಾಮಗ್ರಿ ಸಂಗ್ರಹಿಸಿದರು. ಜೊತೆಗೆ ಕಟಕ್‌ನ ಸಮಾಚಾರ ಸಂಸ್ಥೆಯ ಸಂಪಾದಕರೊಬ್ಬರಿಂದಲೂ ಆಧಾರ ಸಾಮಗ್ರಿಯನ್ನು ತರಿಸಲಾಯಿತು. ಯಾವುದೇ ಉತ್ಪ್ರೇಕ್ಷೆ, ಕಟ್ಟುಕಥೆಗೆ ಅವಕಾಶವಿಲ್ಲದಂತೆ ಇತಿಹಾಸಪುರುಷನೊಬ್ಬನ ಜೀವನ ಮೂಡಿಬಂದಿತು.

ಭಾರತ-ಭಾರತಿ ಪುಸ್ತಕಗಳು ಪುಟ್ಟವಿರಬಹುದು. ಆದರೆ ವಿಷಯದ ನಿಖರತೆಯ ಬಗ್ಗೆ ತೆಗೆದುಕೊಳ್ಳುತ್ತಿದ್ದ ಶ್ರಮ ಮಾತ್ರ ಅಗಾಧ.

## ವೈವಿಧ್ಯಮಯ ಶೀರ್ಷಿಕೆ

ಹತ್ತು ಪುಸ್ತಕಗಳು ಒಂದು ಕಂತಿನಲ್ಲಿ ಬಿಡುಗಡೆ. ಇವರಲ್ಲಿ ಸಾಮಾನ್ಯವಾಗಿ ಒಬ್ಬೊಬ್ಬ ಪುರಾಣಪುರುಷ, ಋಷಿ, ವಿಜ್ಞಾನಿ, ವೀರಬಾಲಕ, ಕ್ರಾಂತಿಕಾರಿ, ಆಧುನಿಕ

ಮಹಾಪುರುಷ, ಸಾಹಿತಿ, ಕಲಾವಿದ, ಕ್ರೀಡಾಪಟು, ಸಾಧು ಸಂತ – ಹೀಗೆ ಪ್ರತಿಯೊಂದು ಕ್ಷೇತ್ರ ಪ್ರಾತಿನಿಧ್ಯ ಬರುವಂತೆ ೧೦ ಪುಸ್ತಕಗಳ ಮಾಲೆ ಕಟ್ಟಬೇಕಾಗಿತ್ತು. ಜೊತೆಗೆ ಕನ್ನಡ ನಾಡಿನ ಮಹಾಪುರುಷರೊಬ್ಬರೂ ಸೇರುವಂತಾಗಬೇಕು. ಈ ರೀತಿಯ ವೈವಿಧ್ಯ ಮಾಲೆಯ ೫೧ ಕಂತಿನಲ್ಲೂ ಕಾಣಬಹುದು.

೧-೪-೧೯೭೨.

ಭಾರತ-ಭಾರತಿಯ ಮೊದಲ ಸಂಪಾದಕೀಯ ಸಭೆ. ಶ್ರಿ ಎಲ್. ಎಸ್. ಶೇಷಗಿರಿರಾಯರ ನಿವಾಸ. ಶ್ರೀ ನಂ. ಮಧ್ವರಾವ್, ಶ್ರೀ ವ್ಯೆ. ಚ. ಜಯದೇವ್ ಮತ್ತು ನಾನೂ ಸಂಪಾದಕೀಯ ಸಭೆಯಲ್ಲಿ ಉಪಸ್ಥಿತರಿದ್ದೆವು. ಸಂಪಾದಕೀಯದ ಕಾರ್ಯವಿಧಾನಗಳು, ಯೋಜನೆಯ ಪೂರ್ಣ ಅವಧಿಯ ನೀತಿ-ನಿಯಮಗಳ ಬಗ್ಗೆ ನಿಶ್ಚಯಗಳು.

ವಾರಕ್ಕೊಮ್ಮೆ ನಿಶ್ಚಿತ ದಿನಾಂಕ-ಸಮಯದಲ್ಲಿ ಸಂಪಾದಕೀಯದ ಸಭೆ. ಲೇಖಕರಿಂದ ಬಂದ ಪತ್ರ–ಹಸ್ತಪ್ರತಿ ಪರಿಶೀಲನೆ, ಚಿತ್ರಗಳ ಪರಿಶೀಲನೆ, ಆಯಾಯಾ ವಾರದಲ್ಲಿ ನಡೆದ ಕಾರ್ಯದ ಅವಲೋಕನ, ಮುಂದಿನ ಕಾರ್ಯಗಳ ಪಟ್ಟಿ, ಮುಂದೆ ಮುಂದೆ ಪ್ರಕಟವಾಗಬೇಕಾಗಿರುವ ಪುಸ್ತಕಗಳ ನಿಶ್ಚಯ, ಮುದ್ರಣಕ್ಕೆ ಸಿದ್ಧವಾಗಿರುವ ಪುಸ್ತಕಗಳ ನಿಶ್ಚಯ, ಮುದ್ರಣಕ್ಕೆ ಸಿದ್ಧವಾಗಿರುವ ಹಸ್ತಪ್ರತಿಗಳ ಬಗ್ಗೆ ವಿವರವಾದ ಚರ್ಚೆ.

ವರ್ಷಕ್ಕೊಮ್ಮೆ ಪ್ರಕಟವಾಗಬೇಕಾದ ಪುಸ್ತಕಗಳ ನಿಶ್ಚಯ ಅಷ್ಟು ಸುಲಭದ ಕೆಲಸವಲ್ಲ. ಜೊತೆಗೆ ಆಯಾಯಾ ಶೀರ್ಷಿಕೆ ಬರೆಯಬಲ್ಲಂತಹ ನಿಷ್ಣಾತ ಲೇಖಕರ ಆಯ್ಕೆ. ಒಂದಕ್ಕಿಂತ ಇನ್ನೊಂದು ಕಷ್ಟದಾಯಕ. ಅದಕ್ಕೆ ತುಂಬಾ ಸಮಯ, ಪ್ರಶಾಂತ ಪರಿಸರ ಬೇಕು. ವರ್ಷದ ಪ್ರಾರಂಭದಲ್ಲಿ ಒಂದು ದಿನ ಪೂರ್ತಿ ಪ್ರತ್ಯೇಕ ಈ ಕಾರ್ಯಕ್ಕೆ ಮೀಸಲು – ಒಮ್ಮೆ ನಂದಿ ಬೆಟ್ಟದಲ್ಲಿ, ಮತ್ತೊಮ್ಮೆ ಚನ್ನಪಟ್ಟಣದ ಸಮೀಪದ ಮಾರುತಿ ಸೇವಾ ಟ್ರಸ್ಟ್ – ಹೀಗೆ ವಿವಿಧ ಕಡೆ ಸೇರಿದ್ದೇವೆ.

ಭಾರತ–ಭಾರತಿ ಯೋಜನೆಯ ಪ್ರಾರಂಭದಿಂದ ಕೊನೆಯವರೆಗೆ ಅಧಿಕೃತವಾಗಿ ಸೇರಿದ ಸಂಪಾದಕೀಯ ಸಭೆಗಳ ಸಂಖ್ಯೆ ೩೫೫.

## ಮುದ್ದಾದ ಮಗು

ಸೈಜ್ ೪ ಅಂಗುಲ × ೫ ಅಂಗುಲ. ಕೈಗೊಪ್ಪುವ ಆಕಾರ, ೪೮ ಪುಟಗಳ ಹಿತ-ಮಿತ ಗಾತ್ರ, ಸಂದರ್ಭಕ್ಕೊಪ್ಪುವ ೩ ರೇಖಾಚಿತ್ರ, ಮಧ್ಯೆ ಉಪಶೀರ್ಷಿಕೆ, ಖ್ಯಾತ ಕಲಾವಿದರ ಕುಂಚದಿಂದ ಹೊರಬಂದ ಮೋಹಕ ಚಿತ್ರ, ಬಣ್ಣಬಣ್ಣದ ಅಂದ ಮುದ್ರಣ, ಥಳ ಥಳಿಸುವ ವಾರ್ನಿಷ್‌ನಿಂದ ಭಾರತ-ಭಾರತಿ ಬೆಡಗಿನಿಂದ ಹೊರಬಂತು. ನಮ್ಮ ಸುಂದರ ಕನಸು ನನಸಾಯಿತು, ಭವ್ಯ ಕಲ್ಪನೆ ಸಾಕಾರರೂಪ ಹೊಂದಿತು. ರಂಗು ರಂಗಿನ ರಕ್ಷಾಪುಟದ ಮುದ್ರಣವಾಗಬೇಕಲ್ಲ? ಕಣ್ಣಿಗೆ ಆನಂದ ಕೊಡುವಂತಿರಬೇಕು,

ಮನಸ್ಸಿಗೆ ತೃಪ್ತಿ ಸಿಕ್ಕಬೇಕು. ಈ ಜವಾಬ್ದಾರಿಯನ್ನು ಪೂರ್ಣ ನಿರ್ವಹಿಸಿದರು ಶ್ರೀ ಜಗದೀಶಪ್ರಸಾದ್ ಪೋದ್ದಾರ್, ಶ್ರೀ ಶಂಕರ ಪೋದ್ದಾರ್, ಮತ್ತು ಶ್ರೀ ಕೈಲಾಶ್ ಪೋದ್ದಾರ್. ೫೧೧ ಪುಸ್ತಕಗಳ ರಕ್ಷಾಪತ್ರ ಒಂದೇ ಕಡೆ ಮುದ್ರಣ ವಾಯಿತು. ಶ್ರೀ ಪೋದ್ದಾರ್ ಪರಿವಾರ ತುಂಬಾ ಉತ್ಸಾಹಿಗಳು, ಸಾಹಸಿಗಳು. ಏನು ಬಂದರೂ ಎದುರಿಸುವ ಧೈರ್ಯ–ಸ್ಥೈರ್ಯ. ಕಷ್ಟಕಾಲದಲ್ಲೂ ನಮ್ಮೊಡನಿದ್ದು ಈ ಯಾತ್ರೆಯಲ್ಲಿ ಜೊತೆಜೊತೆಗೆ ಬಂದಿದ್ದಾರೆ. ಇವರನ್ನೂ ಮತ್ತು ಮೈಟಿಕ್ ಪ್ರೆಸ್ಸಿನ ಕೆಲಸಗಾರರನ್ನೂ ಕೃತಜ್ಞತಾಭಾವದಿಂದ ನೆನೆಯಬೇಕು.

## ಮುದ್ರಣರಂಗ ಸಜ್ಜಾಯಿತು

ರಾಷ್ಟ್ರೋತ್ಥಾನ ಮುದ್ರಣಾಲಯ ರಾಷ್ಟ್ರೋತ್ಥಾನ ಸಾಹಿತ್ಯವನ್ನೂ ಉತ್ಥಾನ ಮಾಸಪತ್ರಿಕೆಯನ್ನೂ ಮುದ್ರಿಸುವ ಸ್ಥಾನ. ಶ್ರೀ ರಾಘವೇಂದ್ರ ಇದರ ವ್ಯವಸ್ಥಾಪಕರು. ಭಾರತ-ಭಾರತಿ ಪುಸ್ತಕಗಳ ಮುದ್ರಣದ ಭಾರ ಇವರ ಮೇಲೆ. ಶ್ರದ್ಧೆಯ ಸೇವೆ ಇವರದು. ಮುದ್ರಣ ಕಾರ್ಯದ ಪೂರ್ತಿ ಉಸ್ತುವಾರಿ. ಕಾಲಕ್ಕೆ ಸರಿಯಾಗಿ ಮುದ್ರಣ ಕಾರ್ಯ ಮುಕ್ತಾಯ.

ಈ ಯೋಜನೆಗೆ ನಮ್ಮಲ್ಲಿದ್ದ ಮುದ್ರಣ ಯಂತ್ರ, ಅಚ್ಚುಮೊಳೆ ಇತ್ಯಾದಿ ಸಾಮಗ್ರಿ ಏನೇನೂ ಸಾಲದು. ಲಕ್ಷಾಂತರ ಪ್ರತಿಗಳ ಮುದ್ರಣಕ್ಕೆ ಸ್ವಯಂಚಾಲಿತ ಮುದ್ರಣಯಂತ್ರಗಳು ಮತ್ತು ಇನ್ನಿತರ ಆವಶ್ಯಕ ಯಂತ್ರಗಳನ್ನು ಕೊಂಡುಕೊಳ್ಳಲಾಯಿತು. ಸಿಂಡಿಕೇಟ್ ಬ್ಯಾಂಕಿನ ಚಾಮರಾಜಪೇಟೆ ಶಾಖೆ ಆರ್ಥಿಕ ನೆರವು ನೀಡಿತು. ಆಕರ್ಷಕ ಅಚ್ಚುಮೊಳೆ ವಿಶೇಷವಾಗಿ ತಯಾರಾಯಿತು. ಭಾರತದ ಮಹಾಪುರುಷರ ಸ್ವಾಗತಕ್ಕೆ ಮುದ್ರಣಾಲಯ ಸಾಲಂಕೃತ ಸೊಬಗಿನೊಡನೆ ಎದ್ದು ನಿಂತಿತು. ಸ್ಥಳ ವಿಸ್ತರಿಸಿ ಕೆಲಸಗಾರರು ಜಾಸ್ತಿಯಾದರು.

೨೧–೮–೧೯೭೭.

ಭಾರತ-ಭಾರತಿಯ ಮೊದಲ ಹಸ್ತಪ್ರತಿ 'ವಾಲ್ಮೀಕಿ' ಮುದ್ರಣಾಲಯಕ್ಕೆ ಪ್ರವೇಶವಾಯಿತು. ಚೊಚ್ಚಲ ಕೃತಿ ಹೇಗೆ ? ಎಂತು ? ಎಂದು ಎಲ್ಲರಿಗೂ ಕಾತರ. ೩೦ ಗ್ಯಾಲಿಗಳಲ್ಲಿ ಹೊರಬಂದಿದ್ದು ಚಿಂತೆ. ಹಸ್ತಪ್ರತಿ ಮತ್ತು ಗ್ಯಾಲಿ ಪ್ರಧಾನ ಸಂಪಾದಕರ ಕೈಸೇರಿತು. ಪ್ರತಿ ಪುಸ್ತಕವೂ ೪೮ ಪುಟಕ್ಕೆ ಸೀಮಿತವಿರಬೇಕು. ಗ್ಯಾಲಿಗೆ 'ಕತ್ತರಿ ಪ್ರಯೋಗ' ಆಗಿ ಒಂದು ರೂಪ ಬಂತು. ಎಷ್ಟು ಪದಗಳಿರಬೇಕು, ಎಷ್ಟು ಉಪ-ಶೀರ್ಷಿಕೆ, ರೇಖಾಚಿತ್ರ ಎಲ್ಲಿ, ಹೇಗೆ ಬರಬೇಕು ? ಒಂದು ಪುಸ್ತಕ ಮುದ್ರಣಕ್ಕೆ ಎಷ್ಟು ಸಮಯ ಬೇಕು, ಹೇಗೆ ಮುದ್ರಿಸಬೇಕು ?– ಹೀಗೆ ಹತ್ತಾರು ಮಾಹಿತಿಯನ್ನು ಅನುಭವ ಒದಗಿಸಿತು. ವಿಧಿ–ನಿಯಮಗಳ ಚೌಕಟ್ಟು ಕಟ್ಟಾಯಿತು. ಈ ವರ್ಷ ೬೦ ಪುಸ್ತಕ. ಭಾರತ-ಭಾರತಿಯ ವರ್ಷಾರಂಭ, ಬೆಳಕಿನ ಹಬ್ಬ ದೀಪಾವಳಿಯಂದು.

೧೯೭೪ ನೇ ಇಸವಿ ಬಂತು ! ತಿಂಗಳಿಗೆ ೧೦ ಪುಸ್ತಕ ಸಿದ್ಧವಾಗಬೇಕು. ಒಂದೊಂದು ೨೦,೦೦೦ ಪ್ರತಿ ಮುದ್ರಣ. ಅಂದರೆ ೧೫ ದಿವಸ ಮುಂಚೆ ಮುದ್ರಣಾಲಯದಿಂದ ಹೊರಡಬೇಕು. ನಂತರ ಪ್ರತಿ ಪುಸ್ತಕವೂ ಮುದ್ರಣ ದೃಷ್ಟಿಯಿಂದ ತಪಾಸಣೆ ನಡೆಯಬೇಕು. ಇಂದೊಂದು ಸತ್ವಪರೀಕ್ಷೆಯ ಕಾಲ.

ದುರ್ಭಿಕ್ಷದಲ್ಲಿ ಅಧಿಕಮಾಸ ಆಗ ! ಕಾಗದ ಕ್ಷಾಮ, ವಿದ್ಯುತ್ ಕಡಿತ, ಇದರ ಮಧ್ಯೆ ಆಗಾಗ್ಗೆ ಕೆಲಸಗಾರರ ಗೈರುಹಾಜರಿ. ಸಮಸ್ಯೆ ನೂರಾರು ; ಕಷ್ಟ ಹಲವಾರು. ಆಗ ಕೆಲ ಸಂದರ್ಭಗಳಲ್ಲಿ ಪ್ರೆಸ್ ಇಡೀ ದಿವಸ ಜಾಗರಣೆ, ಸದಾ ಮುದ್ರಣ ಯಂತ್ರಗಳ ಶಬ್ದ, ಹುರುಪು-ಉತ್ಸಾಹದಿಂದ ಕೆಲಸಗಾರರ ಓಡಾಟ. ಒಂದೆಡೆ ಕಾಗದದ ಮೇರು ; ಮತ್ತೊಂದೆಡೆ ಮುದ್ರಿಸಿದ ಪುಸ್ತಕಗಳ ರಾಶಿ, ಹೀಗೆ ಎಲ್ಲೆಲ್ಲೂ ತನ್ಮಯತೆಯ ಭಾವದಿಂದ ಕಾರ್ಯದ ಮುನ್ನಡೆ. ಸಾಧನೆ-ಸಿದ್ಧಿಗಳ ಸಮಭಾವ. ಕಾರ್ಮಿಕರು ಹಗಲು ರಾತ್ರಿಯನ್ನು ಒಂದೇ ಮಾಡಿ ಮೈಮರೆತು ದುಡಿದರು. ಮಾತಿನಂತೆ ನಡೆದರು. ನಿಂತಲ್ಲೇ ಮಲಗಿದರು. ಸಮಯ ಉಳಿಸಲು ಕೆಲಸದ ಜಾಗಕ್ಕೆ ಕಾಫಿ-ತಿಂಡಿ-ಊಟ ಸಿದ್ಧ. ಕಾರ್ಮಿಕ-ಮಾಲಿಕ ಭಾವನೆ ನಮ್ಮಲ್ಲಿ ಎಂದೂ ಇಲ್ಲವಲ್ಲ !

ಯೋಜನೆಯಂತೆ ನಾಡಿನ ಮೂಲೆ-ಮೂಲೆಗೆ ಪ್ರಕಟಣೆಗೆ ಮುಂಚೆಯೇ ಪುಸ್ತಕಗಳ ರವಾನೆ. ಪ್ರಕಟಣೆಯಂದು ಎಲ್ಲರ ಕೈಯಲ್ಲೂ ಭಾರತ-ಭಾರತಿ. ಇದೊಂದು 'ಜಾದೂ' ಎಂದರು ಕೆಲವರು. ಮತ್ತೆ ಕೆಲವರು 'ದೊಡ್ಡ ಸಾಧನೆ' ಎಂದರು. ನಮಗಂತೂ ಧನ್ಯತೆಯ ಭಾವ. ಹಗಲಿರುಳೆನ್ನದೆ ಬೆವರು ಸುರಿಸಿ ಕೆಲಸ ಮಾಡಿದ ಮುದ್ರಣಾಲಯದ ನೌಕರರು ವಂದನೀಯರು. ಕೋಟಿಗಟ್ಟಲೆ ಪ್ರತಿ ಮುದ್ರಿಸಿದ ಮುದ್ರಣಯಂತ್ರಗಳೂ ಸಹ ಕೃತಜ್ಞತೆಗೆ ಪಾತ್ರವಲ್ಲವೇ?

## ಸುಂದರ ಮೈಕಟ್ಟು

ಪುಸ್ತಕ ಮುದ್ರಣವಾಯಿತು. ಅದಕ್ಕೊಂದು ಸುಂದರ ಮೈಕಟ್ಟು ಬೇಕು. ಲಕ್ಷಗಟ್ಟಲೆ ಪ್ರತಿಗಳ ಜೋಡಣೆ, ಮಧ್ಯೆ ಪಿನ್ ಹಾಕುವುದು – ಹೀಗೆ ನಾಲ್ಕಾರು ಸಂಸ್ಕಾರವಾಗಬೇಕು. ಆಗಲೇ ಅದಕ್ಕೊಂದು ರೂಪು. ಈ ಕೆಲಸದ ಜವಾಬ್ದಾರಿ ಸಹೋದರರಾದ ಶ್ರೀ ರಂಗಸ್ವಾಮಿ ಮತ್ತು ಶ್ರೀ ನಾರಾಯಣ ಅವರದಾಯಿತು. ಹೆಗಲಿಗೆ ಹೆಗಲು ಕೊಡುವ ಸ್ವಭಾವ ಇವರದು. ಕಷ್ಟದ ಸಮಯದಲ್ಲಿ ಜೊತೆಗೆ ನಿಂತರು. ನಿಷ್ಠೆ–ನಂಬಿಕೆಯ ಸೇವೆ ಇವರದು. ಇವರಿಗೂ, ಇತರ ಇವರ ಸಹಕಾರಿಗಳಿಗೂ ತುಂಬುಹೃದಯದ ಕೃತಜ್ಞತೆಗಳು ಸಲ್ಲುತ್ತವೆ.

## ಹೊರಗೆ ನಿರಂತರ ಮಳೆ–ಒಳಗೆ ಪ್ರೀತಿಯ ಹೊಳೆ

೧೯೭೭ರ ನವೆಂಬರ್ ೫. ಸಂತಸದ ದೀಪಾವಳಿ ಹಬ್ಬ. ಎಲ್ಲೆಲ್ಲೂ ಕತ್ತಲು ಸೀಳಿ ಬೆಳಕು. ಕನ್ನಡ ವಾಗ್ದೇವಿಯ ಕೊರಳ ಹಾರಕ್ಕೆ ಹೊಸದೊಂದು ರತ್ನದ ಕೊಡುಗೆ !

ಕರ್ನಾಟಕದ ರಾಜಧಾನಿ ಬೆಂಗಳೂರಿನ ಪುರಭವನದಲ್ಲಿ ಅಪೂರ್ವ ಜನಸಂದಣಿ. ತುಂಬುಹೃದಯದವರಿಂದ ತುಂಬಿದ ವೇದಿಕೆ. ಹೊರಗೆ ಬಿಡುವಿಲ್ಲದೆ ಸುರಿದ ಮಳೆಯಲ್ಲೂ ಎಡೆಯಿಲ್ಲದೆ ಕಿಕ್ಕಿರಿದ ಸಭೆ. 'ಧೋ' ಎಂಬ ಮಳೆಯ ಹೊನಲನ್ನು ಮೀರಿಸುವಂತೆ ಒಳಗೆ ಉತ್ಸಾಹದ ಮಹಾಪೂರ. ಸಂದರ್ಭ – ಕಿರಿಯರಿಗಾಗಿ ಹಿರಿಯರು ಬರೆದ ನಾಡಿನ ಮಹಾಚೇತನಗಳ ಕಿರುಪರಿಚಯದ ಕಥೆ ಭಾರತ-ಭಾರತಿಯ ಹತ್ತು ಚೊಚ್ಚಲ ಕೃತಿಗಳ ಆವಿಷ್ಕರಣ. ಐನೂರ ಹತ್ತು ಪುಸ್ತಕಗಳ ಪ್ರಕಟಣೆಯ ಮೊದಲ ಮಜಲು. ಹೆಗ್ಗುರಿಯ ಸಾಧನೆಗೆ ಅತ್ಯುತ್ಸಾಹಭರಿತ ಸಹಕಾರ. ಇದರಿಂದ ಸಾಫಲ್ಯದಿಂದ ಮುನ್ನಡೆಯುವ ಪ್ರತಿಜ್ಞೆ. ಹಿರಿಯರು ಹರಸಿ ಹಾರೈಸಿದರು. ಪುಟಾಣಿ ಮಕ್ಕಳಿಗೆ ಮುದ್ದಾದ ಮಗು ಭಾರತ-ಭಾರತಿ ಕೈಗೆ ಸಿಕ್ಕಿತು, ಕಿಸೆಗೆ ಸೇರಿತು. ಬಿಡುಗಡೆಯಂದೇ ಒಂದೂವರೆ ಲಕ್ಷ ಪ್ರತಿ ಮಾರಾಟವಾಗಿ ಕನ್ನಡ ಸಾಹಿತ್ಯದಲ್ಲಿ ವಿಕ್ರಮ ಸ್ಥಾಪಿಸಿತು ಭಾರತ-ಭಾರತಿ.

ಕನ್ನಡನಾಡಿನ ಉದ್ದಗಲಕ್ಕೂ ಏಕಕಾಲದಲ್ಲಿ ವಿಜೃಂಭಣೆಯಿಂದ ಭಾರತ-ಭಾರತಿಯ ಮೊದಲ ಹತ್ತು ಪುಸ್ತಕಗಳ ಪ್ರಕಟಣೆ. ಸುಪ್ರಸಿದ್ಧ ಸಾಹಿತಿಗಳು, ಹೆಸರಾಂತ ಲೇಖಕರು, ಗಣ್ಯವ್ಯಕ್ತಿಗಳು ಸಮಾರಂಭದಲ್ಲಿ ಪಾಲ್ಗೊಂಡರು. ಭಾರತ-ಭಾರತಿಯ ಹವೆ ನಾಡಿನ ಎಲ್ಲಾ ಕಡೆ ಬೀಸತೊಡಗಿತು. ರಂಗುರಂಗಿನ ಜಾಹಿರಾತು. ಬಸ್ಸುಗಳಲ್ಲಿ, ಕಾರುಗಳಲ್ಲಿ, ಬೀದಿ ಬೀದಿಗಳಲ್ಲಿ ಭಾರತ-ಭಾರತಿಯ ಪೋಸ್ಟರುಗಳು.

ಭಾರತ-ಭಾರತಿಯ ಮಂಜುಳನಾದ ಆಕಾಶವಾಣಿಯಿಂದ ಎಲ್ಲರೂ ಕೇಳಿದರು. ಕನ್ನಡ ಪ್ರಕಾಶನ ಪ್ರಪಂಚದಲ್ಲಿ ಇದೊಂದು ದಾಖಲೆ. ವೈವಿಧ್ಯಮಯ ಜಾಹಿರಾತು, ವರ್ಣಮಯ ಮುದ್ರಣ, ಕಾವ್ಯಮಯ ಭಾಷೆ ಎಲ್ಲರ ಮನ ಸೂರೆಗೊಂಡಿತು. ಕನ್ನಡದ ಜನಕ್ಕೆ ಹೆಮ್ಮೆಯ ವಿಷಯವಾಯಿತು ಭಾರತ-ಭಾರತಿ.

"ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ, ನಾವಿದ್ದೇವೆ" ಎಂದು ಕನ್ನಡದ ಜನ ನಮ್ಮನ್ನು ನಡೆಸಿದರು.

# ಬೆಳಕಿನ ಹಬ್ಬದಂದು ಬಂದ ಬಂಧುಬಾಂಧವರು —ಕರ್ನಾಟಕದಾದ್ಯಂತ

[ಸಮಾರಂಭಕ್ಕೆ ಬಂದು ಹರಸಿದವರು, ನಿಂತು ನೆರವೇರಿಸಿದವರು]

ಬೆಂಗಳೂರು

ಶ್ರೀ ಟಿ. ಕೆ. ತುಕೋಳ್ ಬೆಂ.ವಿ.ವಿ. ಉಪಕುಲಪತಿ (ಅಧ್ಯಕ್ಷತೆ)
ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಕರ್ನಾಟಕ ವಿಧಾನಸಭಾ ಅಧ್ಯಕ್ಷೆ (ಬಿಡುಗಡೆ)
ಶ್ರೀ ಜಿ. ನಾರಾಯಣ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು (ಮುಖ್ಯ ಅತಿಥಿ)
ಶ್ರೀಮತಿ ವಾಣಿ ಖ್ಯಾತ ಸಾಹಿತಿ (ಪುಸ್ತಕಗಳನ್ನು ಕುರಿತು)
ಶ್ರೀ ಹೊ. ನಾಗರಾಜ್ (ಸಂಯೋಜಕ)

ಮೈಸೂರು

ಪ್ರೊ॥ ದೇ. ಜವರೇಗೌಡ ಮೈ.ವಿ.ವಿ. ಉಪಕುಲಪತಿ (ಅಧ್ಯಕ್ಷತೆ)
ಡಾ॥ ಕೆ. ವಿ. ಪುಟ್ಟಪ್ಪ ರಾಷ್ಟ್ರಕವಿ 'ಕುವೆಂಪು' (ಬಿಡುಗಡೆ)
ಶ್ರೀ ಎಂ. ಗೋವಿಂದರಾವ್ ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷರು (ಸ್ವಾಗತ)
ಶ್ರೀ ನಂ. ವೆಂಕೋಬರಾವ್ ಕಾಲೇಜು ಅಧ್ಯಾಪಕರು (ಯೋಜನೆ ಕುರಿತು)
ಡಾ॥ ಟಿ. ಕೃಷ್ಣಮೂರ್ತಿ (ಸಂಯೋಜಕ)

ಮಂಡ್ಯ

ಪ್ರೊ॥ ಎಸ್. ರಾಮೇಗೌಡ ಪಿ. ಇ. ಎಸ್. ಎಂಜಿನಿಯರಿಂಗ್ ಕಾಲೇಜ್ (ಅಧ್ಯಕ್ಷತೆ)
ಪ್ರೊ॥ ಎಸ್. ಟಿ. ನಾಗರಾಜ್ ಪಿ. ಇ. ಎಸ್. ಎಂಜಿನಿಯರಿಂಗ್ ಕಾಲೇಜ್ (ಬಿಡುಗಡೆ)
ಶ್ರೀ ಶಂಕರರಾವ್ ಜಾಧವ್ (ಸಂಯೋಜಕ)

ಮಡಿಕೇರಿ

ಶ್ರೀ ಬಿ. ಎನ್. ಶೇಷಾದ್ರಿ ಜಿಲ್ಲಾ ವರಮಾನ ತೆರಿಗೆ ಅಧಿಕಾರಿ (ಅಧ್ಯಕ್ಷತೆ)
ಶ್ರೀ ಶಿವರಾಮು ಸಾಹಿತಿ (ಮುಖ್ಯ ಅತಿಥಿ)
ಹತ್ತು ಬಾಲಕ–ಬಾಲಕಿಯರು (ಬಿಡುಗಡೆ)
ಶ್ರೀ ಸಿ. ವಿ. ಸದಾಶಿವ (ಸಂಯೋಜಕ)

ಮಂಗಳೂರು

ಪದ್ಮಭೂಷಣ ಡಾ॥ ಶಿವರಾಮ ಕಾರಂತ ಖ್ಯಾತ ಹಿರಿಯ ಸಾಹಿತಿ (ಅಧ್ಯಕ್ಷತೆ)
ಪದ್ಮಶ್ರೀ ಡಾ॥ ಟಿ. ಎಂ. ಎ. ಪೈ ಉದ್ಯಮಿ–ಶಿಕ್ಷಣತಜ್ಞರು (ಬಿಡುಗಡೆ)
ಶ್ರೀಮತಿ ಪದ್ಮಾ ಶಣೈ ಲೇಖಕಿ (ಪುಸ್ತಕಗಳನ್ನು ಕುರಿತು)
ಶ್ರೀ ಯು. ರಾಜಾರಾಮ ಮಲ್ಯ ಕೈಗಾರಿಕೋದ್ಯಮಿ (ಯೋಜನೆ ಕುರಿತು)
ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ (ಸಂಯೋಜಕ)

ಹಾಸನ

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹಿರಿಯ ಸಾಹಿತಿ (ಅಧ್ಯಕ್ಷತೆ)
ಶ್ರೀ 'ಎಚ್ಚೆಸ್ಕೆ' ಖ್ಯಾತ ಲೇಖಕರು (ಬಿಡುಗಡೆ)
ಶ್ರೀ ಚ. ವಾಸುದೇವ್ (ಯೋಜನೆ ಕುರಿತು)
ಶ್ರೀ ಬಿ. ಆರ್. ಕೃಷ್ಣಮೂರ್ತಿ (ಸಂಯೋಜಕ)

ಚಿಕ್ಕಮಗಳೂರು

ಶ್ರೀ ಎಸ್. ನಾಗೇಶಪ್ಪ ಪ್ರಿನ್ಸಿಪಾಲ್, ಡಿಎಸಿಜಿ ಪಾಲಿಟೆಕ್ನಿಕ್ (ಅಧ್ಯಕ್ಷತೆ)
ಶ್ರೀ ಎಂ. ಮಹೇಶನ್ ಅಸಿಸ್ಟೆಂಟ್ ಕಮಿಷನರ್ (ಬಿಡುಗಡೆ)
ಶ್ರೀ ಎಸ್. ರಾಮಚಂದ್ರರಾಯರು ಪುರಸಭಾಧ್ಯಕ್ಷರು (ಮುಖ್ಯ ಅತಿಥಿ)
ಶ್ರೀಮತಿ ಆರ್ಯಾಂಬ ಪಟ್ಟಾಭಿ ಖ್ಯಾತ ಲೇಖಿಕಿ (ಮುಖ್ಯ ಭಾಷಣಕಾರರು)
ಶ್ರೀ ಶೃ. ಕೃ. ಶಂಕರನಾರಾಯಣ ಔಷಧಿ ವ್ಯಾಪಾರಿಗಳು (ಯೋಜನೆ ಕುರಿತು)
ಶ್ರೀ ಕ. ರಾ. ಶತ್ರುಘ್ನ (ಸಂಯೋಜಕ)

ಶಿವಮೊಗ್ಗ

ಶ್ರೀ ಕೆ. ವಿ. ಇರ್ನಿರಾಯು ಜಿಲ್ಲಾಧಿಕಾರಿ (ಅಧ್ಯಕ್ಷತೆ)
ಶ್ರೀ ಹೆಚ್. ಎಸ್. ನಾರಾಯಣ ಭಟ್ ಪ್ರಿನ್ಸಿಪಾಲ್, ಡಿವಿಎಸ್ ಕಾಲೇಜ್ (ಬಿಡುಗಡೆ)
ಶ್ರೀ ಎ. ಎಸ್. ವೇಣುಗೋಪಾಲರಾವ್ ಕಾಲೇಜು ಅಧ್ಯಾಪಕರು (ಪುಸ್ತಕಗಳನ್ನು ಕುರಿತು)
ಶ್ರೀ ರಾ. ಶೇಷಾದ್ರಿ (ಸಂಯೋಜಕ)

ಕಾರವಾರ

ಶ್ರೀ ಪುರುಷೋತ್ತಮ ಬಾಂದೇಕರ ಮು. ಉ. ಹಿಂದೂ ಪ್ರೌಢಶಾಲೆ (ಅಧ್ಯಕ್ಷತೆ)
ಶ್ರೀ ವಿ. ಬಿ. ದೇಸಾಯಿ ಕಾಲೇಜ್ ಆಫ್ ಎಜುಕೇಷನ್ (ಬಿಡುಗಡೆ)
ಶ್ರೀ ಸದಾನಂದ ತಾಮುಸೇ (ಸಂಯೋಜಕ)

ಧಾರವಾಡ

ಪ್ರೊ॥ ಎಸ್. ಎಂ. ವೃಷಭೇಂದ್ರಸ್ವಾಮಿ
ನಿರ್ದೇಶಕರು, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿ. ವಿ. (ಅಧ್ಯಕ್ಷತೆ)
ಶ್ರೀಮತಿ ಶಾಂತಾದೇವಿ ಕಣವಿ ಖ್ಯಾತ ಕತೆಗಾರ್ತಿ (ಮುಖ್ಯ ಅತಿಥಿ)
ಶ್ರೀ ಮಹಾಬಲರಾವ್ ಜೋಶಿ (ಯೋಜನೆ ಕುರಿತು)
ಹತ್ತು ಬಾಲಕ-ಬಾಲಕಿಯರು (ಬಿಡುಗಡೆ)
ಶ್ರೀ ರಮೇಶ ಪ್ರಭು (ಸಂಯೋಜಕ)

ಬೆಳಗಾಂ

ನಾಗನೂರು ಮಠದ ಪೂಜ್ಯ ಶ್ರೀ ಮ. ನಿ. ಪ್ರ. ಪ್ರಭುಸ್ವಾಮಿಗಳು (ಆಶೀರ್ವಚನ)
ಶ್ರೀ ಕೆ. ಆರ್. ರಾಮಚಂದ್ರನ್ ಡಿವಿಜನಲ್ ಕಮಿಷನರ್ (ಅಧ್ಯಕ್ಷತೆ)
ಶ್ರೀ ಬಿ. ರುದ್ರಪ್ಪ ಪ್ರಿನ್ಸಿಪಾಲ್, ಲಿಂಗರಾಜ ಕಾಲೇಜ್ (ಬಿಡುಗಡೆ)
ಶ್ರೀ ವಿಠ್ಠಲ ಅಡಕೆ (ಸಂಯೋಜಕ)

ಬಿಜಾಪುರ

ಶ್ರೀ ಸಂಗಮನಾಥ ಹಂಡಿ ಅಧ್ಯಕ್ಷರು, ಜಿಲ್ಲಾ ಸಾಹಿತ್ಯ ಪರಿಷತ್ (ಅಧ್ಯಕ್ಷತೆ)
ಶ್ರೀ 'ಸಿಸು' ಸಂಗಮೇಶ ಸಂಪಾದಕರು, ಭಾರತಿ ಸಾಹಿತ್ಯ ಭಂಡಾರ (ಬಿಡುಗಡೆ)
ಶ್ರೀ ಶ್ರೀಕಾಂತ ಕಾಮತ್ ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್ (ಯೋಜನೆ ಕುರಿತು)
ಶ್ರೀ ಭೀಮಣ್ಣ ಕೋಮಳ್ಳಿ (ಸಂಯೋಜಕ)

ಬೀದರ್

ಶ್ರೀ ಬಿ. ಟಿ. ಸಾಸನೂರ ಪ್ರಿನ್ಸಿಪಾಲ್, ಬಿ. ವಿ. ಭೂಮರೆಡ್ಡಿ ಕಾಲೇಜ್ (ಅಧ್ಯಕ್ಷತೆ)

ಶ್ರೀ ಮಾಣಿಕರಾವ ಧನಶ್ರೀ ಪ್ರಿನ್ಸಿಪಾಲ್, ಜೂನಿಯರ್ ಕಾಲೇಜ್ (ಬಿಡುಗಡೆ)
ಶ್ರೀ ರಾಮಶಾಸ್ತ್ರಿ ಪ್ರಾಧ್ಯಾಪಕರು (ಯೋಜನೆ ಕುರಿತು)
ಶ್ರೀ ಹನುಮಮಂತಪ್ಪ ಪಾಟೀಲ್ (ಸಂಯೋಜಕ)

ಗುಲ್ಬರ್ಗ

ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿ ಲೇಖಕಿ (ಅಧ್ಯಕ್ಷತೆ)
ಶ್ರೀ ಶಾಂತಯ್ಯ ಕೆಂಪಯ್ಯಮಠ ಪ್ರಿನ್ಸಿಪಾಲ್, ಬಿ.ಇಡಿ. ಕಾಲೇಜ್ (ಬಿಡುಗಡೆ)
ಶ್ರೀ ಪಿ. ಎಂ. ಗಲಗಲಿ ಕಾಲೇಜ್ ಅಧ್ಯಾಪಕರು (ಯೋಜನೆ ಕುರಿತು)
ಶ್ರೀ ಗೋಪಾಲರಾವ ಹೇಜೀಬ (ಸಂಯೋಜಕ)

ರಾಯಚೂರು

ಶ್ರೀ ವಿ. ರಾಜಣ್ಣ ನಗರಸಭೆ ಅಧ್ಯಕ್ಷರು (ಅಧ್ಯಕ್ಷತೆ)
ಶ್ರೀ ವೈ. ಎಂ. ಸಿ. ಶರ್ಮಾ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು (ಬಿಡುಗಡೆ)
ಶ್ರೀಮತಿ ಗೌರು ಭಟ್ ಕಾಲೇಜು ಅಧ್ಯಾಪಕರು (ಪುಸ್ತಕ ಕುರಿತು)
ಶ್ರೀ ನಾರಾಯಣರಾವ್ ತಾಳಿಕೋಟೆ ವಕೀಲರು (ಯೋಜನೆ ಕುರಿತು)
ಶ್ರೀ ವೈ. ಶ್ರೀನಿವಾಸ ಶೆಟ್ಟಿ (ಸಂಯೋಜಕ)

ಬಳ್ಳಾರಿ

ಶ್ರೀಮತಿ ಸರ್ವಮಂಗಳಮ್ಮ ಹೆಸರಾಂತ ಲೇಖಕಿ (ಅಧ್ಯಕ್ಷತೆ)
ಶ್ರೀಮತಿ ವೇದಾವತಿ ರಾಮಚಂದ್ರರಾವ್ ಮಹಿಳಾ ಮುಂದಾಳು (ಬಿಡುಗಡೆ)
ಶ್ರೀ ಶಾ. ದ್ವಾರಕನಾಥ್ ಮತ್ತು ಶ್ರೀ ಎ.ಆರ್. ಗೋವಿಂದ ಶೆಟ್ಟಿ (ಸಂಯೋಜಕರು)

ಚಿತ್ರದುರ್ಗ

ಶ್ರೀ ಎಚ್.ಸಿ. ಬಸವರಾಜ ಅರಸ್ ಜಿಲ್ಲಾ ಆಹಾರ ಖಾತೆ ಅಧಿಕಾರಿ (ಅಧ್ಯಕ್ಷತೆ)
ಹತ್ತು ಮಕ್ಕಳಿಂದ (ಬಿಡುಗಡೆ)
ಶ್ರೀ ಎನ್. ವಿ. ಕೃಷ್ಣನ್ (ಸಂಯೋಜಕ)

ತುಮಕೂರು

ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು ಶ್ರೀ ಸಿದ್ಧಗಂಗಾ ಮಠ (ಬಿಡುಗಡೆ)
ಡಾ॥ ಸಿ. ಜಯರಾಂ (ಅಧ್ಯಕ್ಷತೆ)
ಶ್ರೀ ಡಿ. ಪೊನ್ನುರಂಗಂ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು (ಮಕ್ಕಳಿಗೆ ಪುಸ್ತಕ ವಿತರಣೆ)
ಶ್ರೀ ವಿ. ಚಿಕ್ಕವೀರಯ್ಯ ಪುರಸಭಾಧ್ಯಕ್ಷರು (ಮುಖ್ಯ ಅತಿಥಿ)
ಶ್ರೀ ವೀರಭದ್ರಯ್ಯ ಕಾಲೇಜು ಅಧ್ಯಾಪಕರು (ಯೋಜನೆ ಕುರಿತು)
ಶ್ರೀ ಟಿ. ಎಲ್. ಶ್ರೀನಿವಾಸ ಶೆಟ್ಟಿ (ಸಂಯೋಜಕ)

ಕೋಲಾರ

ಶ್ರೀ ಕೆ. ರಾಮಕೃಷ್ಣ ಉಡುಪ ಪ್ರಿನ್ಸಿಪಾಲ್, ಸರ್ಕಾರಿ ಕಾಲೇಜು (ಅಧ್ಯಕ್ಷತೆ)
ಶ್ರೀಮತಿ ಎಚ್. ಎಸ್. ಪಾರ್ವತಿ ಪ್ರಸಿದ್ಧ ಲೇಖಕಿ (ಬಿಡುಗಡೆ)
ಶ್ರೀ ಕೆ. ಪಿ. ಪಾಂಡೆ ಅಸಿಸ್ಟೆಂಟ್ ಕಮಿಷನರ್ (ಮುಖ್ಯ ಅತಿಥಿ)
ಶ್ರೀ ಪಾರ್ಥಸಾರಥಿ (ಸಂಯೋಜಕ)

ಚನ್ನಪಟ್ಟಣ

ಶ್ರೀ ಎ. ಗೋಪಣ್ಣ ತಾ. ಅ. ಮಂಡಳಿ ಮಾಜಿ ಅಧ್ಯಕ್ಷರು (ಅಧ್ಯಕ್ಷತೆ)
ಶ್ರೀ ಜಿ. ಸಿದ್ದವೀರಪ್ಪ ಪ್ರಿನ್ಸಿಪಾಲ್, ಪಾಲಿಟೆಕ್ನಿಕ್ (ಬಿಡುಗಡೆ)
ಡಾ|| ಎ. ನಾಗರಾಜ್ ವೈದ್ಯರು (ಪುಸ್ತಕಗಳನ್ನು ಕುರಿತು)
ಶ್ರೀ ಸಿ. ಬಿ. ನಾಗರಾಜಯ್ಯ (ಸಂಯೋಜಕ)

ಭದ್ರಾವತಿ

ಶ್ರೀ ಸಿ. ಆರ್. ಜಯರಾಮ ರೆಡ್ಡಿ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ವೈಸ್ ಛೇರ್‌ಮನ್, ಮೈಸೂರು ಪೇಪರ್ ಮಿಲ್ಸ್ (ಅಧ್ಯಕ್ಷತೆ)
ಶ್ರೀ ಎಸ್. ಪಂಚಾಕ್ಷರಿ ಪ್ರಿನ್ಸಿಪಾಲ್, ಕಮಲಾ ನೆಹರು ಕಾಲೇಜು (ಬಿಡುಗಡೆ)
ಶ್ರೀ ಎಚ್. ಸೇತೂರಾಂ (ಸಂಯೋಜಕ)

ಸಾಗರ

ಶ್ರೀ ಕೆ. ವಿ. ಸುಬ್ಬಣ್ಣ ಸಂಚಾಲಕ, ಅಕ್ಷರ ಪ್ರಕಾಶನ (ಅಧ್ಯಕ್ಷತೆ)
ಶ್ರೀ ಎನ್. ವಿ. ಆರಾಧ್ಯ ಅಸಿಸ್ಟೆಂಟ್ ಎಜುಕೇಷನಲ್ ಆಫೀಸರ್ (ಬಿಡುಗಡೆ)
ಶ್ರೀ ಶ್ರೀನಿವಾಸ ಉಡುಪ ಸಾಹಿತಿ (ಮುಖ್ಯ ಭಾಷಣ)
ಶ್ರೀ ಅನಂತಕೃಷ್ಣಮೂರ್ತಿ (ಯೋಜನೆ ಕುರಿತು)
ಶ್ರೀ ಸುರೇಶ ಮಹೇಂದ್ರಕರ್ (ಸಂಯೋಜಕ)

ಶಿರಸಿ

ಶ್ರೀ ವಿಘ್ನೇಶ್ವರಶರ್ಮಾ ತದ್ದಲಸೆ ಖ್ಯಾತ ಸಾಹಿತಿ (ಅಧ್ಯಕ್ಷತೆ)
ಶ್ರೀ ವೀರಭದ್ರಪ್ಪಾ ಬಸಪ್ಪಾ ಶಿವನಂಚಿ ಸಾರ್ವಜನಿಕ ಮುಖಂಡರು (ಬಿಡುಗಡೆ)
ಶ್ರೀ ಕಮಲಾಕರ ಭಟ್ಟ (ಸಂಯೋಜಕ)

ಹುಬ್ಬಳ್ಳಿ

ಮೂರುಸಾವಿರ ಮಠದ ಶ್ರೀ ಗಂಗಾಧರ ರಾಜಯೋಗೀಂದ್ರಸ್ವಾಮಿಗಳು (ಬಿಡುಗಡೆ)
ಡಾ || ರಂಗನಾಥ ದಿವಾಕರ್ ಹಿರಿಯ ಪತ್ರಿಕೋದ್ಯಮಿ (ಅಧ್ಯಕ್ಷತೆ)
ಶ್ರೀ ಹೊ. ವೆ. ಶೇಷಾದ್ರಿ, ಚಿಂತಕರು-ಲೇಖಕರು (ಮುಖ್ಯ ಅತಿಥಿ)
ಶ್ರೀಮತಿ ಶಾಂತಾದೇವಿ ಮಾಳವಾಡ ಲೇಖಕಿ (ಪುಸ್ತಕಗಳನ್ನು ಕುರಿತು)
ಶ್ರೀ ನಾರಾಯಣರಾವ್ ವೈದ್ಯ (ಯೋಜನೆ ಕುರಿತು)
ಶ್ರೀ ಶಿ. ಮ. ಸವಣೂರು (ಸಂಯೋಜಕ)

ಗದಗ

ಶ್ರೀ ಎನ್. ಎಸ್. ಸಂಗೊಳ್ಳಿ, ಪ್ರಿನ್ಸಿಪಲ್ ಮ್ಯಾಜಿಸ್ಟ್ರೇಟ್ (ಅಧ್ಯಕ್ಷ)
ಪಂ|| ಜಿ. ಬಿ. ಜೋಷಿ ಊರ ಹಿರಿಯರು (ಉದ್ಘಾಟನೆ)
ಶ್ರೀ ಎಂ. ಆರ್. ಬುರ್ಲಿ ಕಾಲೇಜು ಅಧ್ಯಾಪಕರು (ಪುಸ್ತಕಗಳನ್ನು ಕುರಿತು)
ಶ್ರೀಮತಿ ಲೀಲಾವತಿ ದೂದಿಹಳ್ಳಿ ಅಧ್ಯಾಪಕರು (ಶಿಶುಸಾಹಿತ್ಯ ಕುರಿತು)
ಶ್ರೀ ವೀರಪ್ಪ ಕೌತಾಳ ಸಂಪಾದಕರು 'ನೇಗಿಲಯೋಗಿ' (ಯೋಜನೆ ಕುರಿತು)
ಹತ್ತು ಬಾಲಕ-ಬಾಲಕಿಯರು (ಬಿಡುಗಡೆ)
ಶ್ರೀ ಗುರುನಾಥ ಬಾಳೀಹಳ್ಳಿ (ಸಂಯೋಜಕ)

**ಗೋಕಾಕ**

ಶ್ರೀ ಎಸ್. ಪಿ. ಹೆಗ್ಗಣ್ಣನವರ ಪುರಸಭೆಯ ಅಧ್ಯಕ್ಷರು (ಅಧ್ಯಕ್ಷತೆ)
ಶ್ರೀ ಕೃಷ್ಣಮೂರ್ತಿ ಪುರಾಣಿಕ್ ಖ್ಯಾತ ಕಾದಂಬರಿಕಾರರು (ಬಿಡುಗಡೆ)
ಪ್ರೊ॥ ಜಿ. ಜಿ. ಜೋಷಿ (ಭಾರತ-ಭಾರತಿ ಯೋಜನೆ ಕುರಿತು)
ಶ್ರೀ ಆರ್. ಡಿ. ಮಜಲೀಕರ್ (ಸಂಯೋಜಕ)

**ಬಾಗಲಕೋಟೆ**

ಶ್ರೀ ಎಲ್. ಜಿ. ಹಿರೇಮಠ ಪ್ರಿನ್ಸಿಪಾಲ್ ಬಸವೇಶ್ವರ ಆರ್ಟ್ಸ್ ಕಾಲೇಜ್ (ಅಧ್ಯಕ್ಷತೆ)
ಶ್ರೀ ದು. ನಿಂ. ಬೆಳಗಲಿ ಪ್ರಸಿದ್ಧ ಸಾಹಿತಿ (ಮುಖ್ಯ ಅತಿಥಿ)
ಶ್ರೀ ಎಚ್. ಜಿ. ಮೃತ್ಯುಂಜಯ ಪ್ರಾಧ್ಯಾಪಕರು (ಪುಸ್ತಕಗಳನ್ನು ಕುರಿತು)
ಶ್ರೀ ಜ್ಯೋತಿ ಪ್ರಕಾಶ ಸಾಳುಂಕೆ (ಯೋಜನೆ ಕುರಿತು)
ಶ್ರೀ ರಂಗನಾಥ ಶಿಂಧೆ (ಸಂಯೋಜಕ)

**ಹರಿಹರ**

ಶ್ರೀ ತಿ. ತಾ. ಶರ್ಮಾ ಸುಪರಿಚಿತ ಹಿರಿಯರು (ಅಧ್ಯಕ್ಷತೆ)
ಶ್ರೀ ಸಿ. ಬಿ. ಚಂದ್ರಶೇಖರ್ ಲೇಖಕರು (ಬಿಡುಗಡೆ)
ಶ್ರೀಮತಿ ಟಿ. ಸುನಂದಮ್ಮ ಖ್ಯಾತ ಹಾಸ್ಯ ಲೇಖಿಕಿ (ಪುಸ್ತಕಗಳನ್ನು ಕುರಿತು)
ಶ್ರೀ ಬಾಬು ಕೃಷ್ಣಮೂರ್ತಿ ಲೇಖಕರು (ಭಾರತ-ಭಾರತಿ ಯೋಜನೆ ಕುರಿತು)
ಶ್ರೀ ಎಸ್. ಶಿವರಾಮು (ಸಂಯೋಜಕ) ಶ್ರೀ ಕೆ. ಸಂಜೀವಣ್ಣ (ನಿರ್ದೇಶಕರು)

**ಚಿಕ್ಕಬಳ್ಳಾಪುರ**

ಶ್ರೀ ಸಿ. ವಿ. ವೆಂಕಟರಾಯಪ್ಪ ವಿಧಾನಸಭಾ ಸದಸ್ಯರು, ಪುರಸಭಾಧ್ಯಕ್ಷರು (ಅಧ್ಯಕ್ಷತೆ)
ಶ್ರೀ ಎಚ್. ಲಕ್ಷ್ಮೀನರಸಿಂಹಯ್ಯ ಪುರಸಭಾ ಮುಖ್ಯಾಧಿಕಾರಿ (ಬಿಡುಗಡೆ)
ಶ್ರೀಮತಿ ವೈ. ಸರೋಜಮ್ಮ ಪುರಸಭಾ ಸದಸ್ಯೆ (ಮುಖ್ಯ ಅತಿಥಿ)
ಶ್ರೀ ಎಸ್. ಎಲ್. ಸೀತಾರಾಮರಾವ್ ಕಾಲೇಜ್ ಪ್ರಿನ್ಸಿಪಾಲ್ (ಪುಸ್ತಕ ಕುರಿತು)
ಶ್ರೀ ಮು. ಶಾಂ. ಶಿವಶಂಕರ್ (ಸಂಯೋಜಕ)

**ದಾವಣಗೆರೆ**

ಪೂಜ್ಯ ಶ್ರೀ ತರಳಬಾಳು ಜಗದ್ಗುರುಗಳು (ಅನುಗ್ರಹ ಭಾಷಣ)
ಶ್ರೀ ಪಿ. ಎಸ್. ಮುಲ್ಲಾರಿರಾವ್ ಜಿಲ್ಲಾ ವಿದ್ಯಾಧಿಕಾರಿಗಳು (ಅಧ್ಯಕ್ಷತೆ)
ಶ್ರೀ ಪಿ. ಜಿ. ಬಿದರಿಮಠ್ ಪ್ರೌಢಶಾಲಾ ಮುಖ್ಯೋಪಾಧ್ಯಾಯರು (ಬಿಡುಗಡೆ)
ಶ್ರೀ ಬಿ. ರಂಗನಾಥ್ ಪ್ರೌಢಶಾಲಾ ಶಿಕ್ಷಕರು (ಯೋಜನೆ ಕುರಿತು)
ಶ್ರೀ ಎಂ. ಎ. ಬಾರೆಂಗಳ (ಸಂಯೋಜಕ)

**ಹೊಳೆಹೊನ್ನೂರು**

ಡಾ॥ ಕೆ. ಎಸ್. ಆಚಾರ್ ತರುಣ ವೈದ್ಯರು (ಅಧ್ಯಕ್ಷತೆ)
ಶ್ರೀ ಖಜಾನೆ ಕೃಷ್ಣಮೂರ್ತಿ ಕಾಲೇಜು ಅಧ್ಯಾಪಕರು (ಬಿಡುಗಡೆ)
ಶ್ರೀ ನವನೀತ ಕಾರ್ಯದರ್ಶಿ 'ತರುಣಭಾರತಿ' (ಯೋಜನೆ ಕುರಿತು)



೩]

ಮೂಡಿಗೆರೆ 

ಶ್ರೀ ಬಿ. ಸೀತಾರಾಮಯ್ಯ ಕಾಲೇಜ್ ಪ್ರಿನ್ಸಿಪಾಲ್ (ಅಧ್ಯಕ್ಷತೆ)
ಶ್ರೀ ಎಂ. ಹುಚ್ಚೇಗೌಡರು ಮಾಜಿ ಸಂಸತ್ ಸದಸ್ಯರು (ಬಿಡುಗಡೆ)
ಶ್ರೀ ಎಸ್. ವಿ. ಮಲ್ಲಿಕಾರ್ಜುನ ಭಟ್ (ಪುಸ್ತಕಗಳನ್ನು ಕುರಿತು)
ಶ್ರೀ ಉಳ್ಳಾಲ ದಯಾನಂದ ನಾಯಕ್ (ಯೋಜನೆ ಕುರಿತು)

## ಮುಂಬಯಿಗೆ ಸೀಮೋಲ್ಲಂಘನ

ನವೆಂಬರ್ ೧೭, ೧೯೭೩.

ಭಾರತ-ಭಾರತಿ ಕನ್ನಡದ ಗಡಿ ದಾಟಿ ಮುಂಬಯಿಗೆ ಪ್ರವೇಶಿಸಿತು.

ನವೆಂಬರ್ ೧೮ರಂದು ಮಾತುಂಗದ ಪೋದ್ದಾರ್ ಕಾಲೇಜಿನಲ್ಲಿ ಉದ್ಘಾಟನಾ ಸಮಾರಂಭ. ಮುಂಬಯಿ ರಾಮಕೃಷ್ಣಾಶ್ರಮದ ಸ್ವಾಮಿ ಗೌತಮಾನಂದಜಿ ಅವರು ಇಂಗ್ಲಿಷ್ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಮುಂಬಯಿ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥ ಡಾ|| ಸಿ. ಎಂ. ಕುಲಕರ್ಣಿ ಕನ್ನಡ ಪುಸ್ತಕಗಳ ಬಿಡುಗಡೆ ಮಾಡಿದರು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ್ರೀ ನಂ. ಮಧ್ವರಾವ್, ಪ್ರಧಾನ ವ್ಯವಸ್ಥಾಪಕ ಶ್ರೀ ವೈ. ಚ. ಜಯದೇವ್, ಪ್ರತಿನಿಧಿ ಶ್ರೀ ಕೊ. ರಾ. ರಾಜಗೋಪಾಲ್ ಸಮಾರಂಭದಲ್ಲಿ ಭಾಗವಹಿಸಿ ಯೋಜನೆಯ ವಿವರಗಳನ್ನು ನೀಡಿದರು. ಅಂದೇ ಸಂಜೆ ಕಾರ್ಯಕ್ರಮ ಪೂರ್ತಿ ಮುಂಬಯಿ ದೂರದರ್ಶನದಲ್ಲಿ ಪ್ರಸಾರವಾಯಿತು. ಮುಂಬಯಿಯ ಪ್ರಮುಖ ಕೈಗಾರಿಕೋದ್ಯಮಿ ಇಂಜಿನಿಯರ್ ಮತ್ತು ಕನ್ನಡದ ಹಿರಿಯ ಉತ್ಸಾಹಿ ಕಾರ್ಯಕರ್ತ ಶ್ರೀ ಟಿ. ಎಸ್. ಚಂಪಕನಾಥ್ ಸಮಾರಂಭ ಯಶಸ್ವಿಯಾಗಲು ಶ್ರಮಿಸಿದರು.

## ಪತ್ರಿಕೆಗಳಲ್ಲಿ ಅಗ್ರಲೇಖನಗಳು

[ರಾಷ್ಟ್ರೋತ್ಥಾನ ಪರಿಷತ್ತು ಭಾರತ-ಭಾರತಿ ಪುಸ್ತಕ ಸಂಪದವನ್ನು ಆರಂಭಿಸಿದ ಸಂದರ್ಭದಲ್ಲಿ, ಅದನ್ನು ಪ್ರಶಂಸಿಸಿ ರಾಜ್ಯದ ಅನೇಕ ಮುಖ್ಯ ಪತ್ರಿಕೆಗಳು ಸಂಪಾದಕೀಯ ಲೇಖನಗಳನ್ನು ಪ್ರಕಟಿಸಿದವು. ಆ ಪೈಕಿ ಕೆಲವದರಿಂದ ಉದ್ಧೃತಗಳನ್ನು ಶೀರ್ಷಿಕೆಗಳ ಸಹಿತ ಇಲ್ಲಿ ಕೊಡಲಾಗಿದೆ.]

### ಪುಸ್ತಕ ಪ್ರಪಂಚ

"...ರಾಷ್ಟ್ರೋತ್ಥಾನ ಸಾಹಿತ್ಯದವರು ಐದು ವರ್ಷಗಳಲ್ಲಿ ಭಾರತದ ಪರಂಪರೆಯನ್ನು ಮಕ್ಕಳಿಗೆ ಪರಿಚಯ ಮಾಡಿಕೊಡುವ ಐನೂರ ಹತ್ತು ಪುಸ್ತಕಗಳ ಯೋಜನೆಯನ್ನು ಹತ್ತು ಪುಸ್ತಕಗಳ ಮೊದಲ ಕಂತಿನಿಂದ ಅದ್ದೂರಿಯಾಗಿ ಆರಂಭಿಸಿದ್ದಾರೆ. ....ಹಾಗೆಯೇ ವಿಶ್ವದ ಶ್ರೇಷ್ಠ ಕೃತಿಗಳ – ಸಾಹಿತ್ಯ ಮಾತ್ರವಲ್ಲ, ಎಲ್ಲ ಬಗೆಯ

ಕೃತಿಗಳ ಕನ್ನಡೀಕರಣ ಆಗಬೇಕು. ಅದಕ್ಕೊ ದೊಡ್ಡದೊಂದು ಪ್ರಯತ್ನ ಅವಶ್ಯ ..."

—'ಕನ್ನಡ ಪ್ರಭ' ಬೆಂಗಳೂರು : ೭-೧೧-೧೯೭೨

**ನೂತನ ಅಧ್ಯಾಯ**

"....ರಾಷ್ಟ್ರೋತ್ಥಾನ ಪರಿಷತ್ತಿನವರು ಮೊನ್ನೆ ಉದ್ಘಾಟಿಸಿದ ಯೋಜನೆಯಿಂದ ಕನ್ನಡ ಪುಸ್ತಕ ಪ್ರಕಾಶನ ಮತ್ತು ಪ್ರಸಾರದಲ್ಲಿ ಒಂದು ಹೊಸ ದಾಖಲೆಯನ್ನೇ ಸ್ಥಾಪಿಸಿದ್ದಾರೆ.... ಪ್ರತಿಯೊಂದರ ಇಪ್ಪತ್ತು ಸಾವಿರ ಪ್ರತಿಗಳನ್ನು ಅಚ್ಚುಹಾಕಲಾಗಿದೆ. ಅವುಗಳಲ್ಲಿ ಮುಕ್ಕಾಲು ಪಾಲು ಪೇಟೆಗೆ ಬರುವ ಮೊದಲೇ ಮಾರಾಟವಾಗಿವೆ. ಕನ್ನಡ ಪುಸ್ತಕ ಪ್ರಕಾಶಕರೇ ಆಗಲಿ ಮಾರಾಟಗಾರರೇ ಆಗಲಿ ಕನಸನ್ನೂ ಕಾಣದಂಥ ಅದ್ಭುತವಿದು. ....ಕನ್ನಡ ಪುಸ್ತಕ ಪ್ರಸಾರ ಕ್ಷೇತ್ರದಲ್ಲಿ ಉದ್ಘಾಟಿತವಾದ ಈ ನೂತನ ಅಧ್ಯಾಯ ಇನ್ನೂ ಹೆಚ್ಚಿನ ಉಜ್ವಲ ಅಧ್ಯಾಯಗಳ ಪೀಠಿಕೆಯಾಗಲಿ."

—'ಸಂಯುಕ್ತ ಕರ್ನಾಟಕ' ಬೆಂಗಳೂರು : ೭-೧೧-೧೯೭೨

**ಶಿಶು ಸಾಹಿತ್ಯ**

"....'ರಾಷ್ಟ್ರೋತ್ಥಾನ'ದವರ ಯತ್ನ ನಿಜಕ್ಕೂ ಅಭಿನಂದನೀಯ.... ಈ ಕಾಲ, ಪರಿಸರದಲ್ಲಿ ಇಂತಹ ಸಾಹಿತ್ಯ ತೀರ ಅಗತ್ಯ.

"ಬಾಲ್ಯದಿಂದಲೇ ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಬೆಳಸಿ, ಮುಂದೆ ಉನ್ನತ ಧ್ಯೇಯ ಆದರ್ಶಗಳನ್ನಿರಿಸಿಕೊಂಡು ತಮ್ಮ ಬಾಳನ್ನು ರೂಪಿಸಿಕೊಳ್ಳಲು ಅವರಿಗೆ ಈ ಸಾಹಿತ್ಯ ತುಂಬ ನೆರವಾದೀತು.

"........ಯುವಜನ ಅಶಾಂತಿ, ವಿದ್ಯಾರ್ಥಿಗೊಂದಲ, ಕರ್ತವ್ಯಪ್ರಜ್ಞೆಯ ಲೋಪ, ಹಿಪ್ಪಿವಾದದತ್ತ ಹಂತಹಂತವಾಗಿ ಬೆಳೆಯುತ್ತಿರುವ ಎಳೆಯರ ಒಲವು—ಇವುಗಳನ್ನು ಸಾಕಷ್ಟು ತಗ್ಗಿಸಲು, ಒಂದು ನಿಟ್ಟಿನಲ್ಲಿ ಪರಿಹಾರ ಒದಗಿಸಲು ಇಂತಹ ಸಾಹಿತ್ಯ ಮಾರ್ಗದರ್ಶಿಯಾದೀತು." —'ಉದಯವಾಣಿ' ಮಣಿಪಾಲ : ೮-೧೧-೧೯೭೨

**ಕಿಶೋರ ಸಾಹಿತ್ಯ**

"....ಮುಖಪುಟದಲ್ಲಿ ಮಹಾಪುರುಷರ ಮೋಹಕವಾದ ಭಾವಚಿತ್ರ, ಒಳಗಡೆ ಸುಂದರ, ತಿಳಿ ಶೈಲಿಯಲ್ಲಿ ಅವರ ಉಪಯುಕ್ತ ಗುಣಾಂಶಗಳನ್ನು ಮನದಟ್ಟು ಮಾಡುವ ಜೀವನಸಾರ ನಿರೂಪಣೆ—ಇವು ಈ ಚಿಕ್ಕ ಪುಸ್ತಕಗಳ ವೈಶಿಷ್ಟ್ಯ. 'ನಾಳಿನ ಜನಾಂಗ'ವನ್ನು ರೂಪಿಸುವ ಹೊಣೆ ಹೊತ್ತಿರುವ ಇಂದಿನ ಜನಾಂಗದ ಸದಸ್ಯರು, ಸರಕಾರ ಮತ್ತು ಸಾಹಿತಿಗಳ ಈ ಪರಿಶ್ರಮಕ್ಕೆ ಅಗತ್ಯವಾದ ಪ್ರೋತ್ಸಾಹ, ನೆರವು ನೀಡಿ ಅದನ್ನು ಸಾರ್ಥಕಗೊಳಿಸಲೆಂದು ಹಾರೈಸುತ್ತೇವೆ."

—'ವಿಕ್ರಮ' ಬೆಂಗಳೂರು : ೧೦-೧೧-೧೯೭೨

 ಮಹಾನ್ ಯೋಜನೆ

"...ರಾಷ್ಟ್ರೋತ್ಥಾನ ಪರಿಷತ್ತು ಹಲವಾರು ಸಾಹಸದ ಪುಸ್ತಕ ಪ್ರಕಟನೆಯ ಕಾರ್ಯಕ್ರಮಗಳನ್ನು ಪೂರೈಸಿದ್ದು, ಅದರಲ್ಲಿ ಇತ್ತೀಚೆಗೆ ಕೈಗೊಂಡಿರುವ ಭಾರತ-ಭಾರತಿ ಪುಸ್ತಕ ಸಂಪದ ಯೋಜನೆಯು ಕನ್ನಡ ಪುಸ್ತಕ ಪ್ರಕಟನಾ ಪ್ರಪಂಚದಲ್ಲಿಯೇ ಮಹಾನ್ ಯೋಜನೆಯಾಗಿರುವುದು........ಕಾಲಮಾನ ಪರಿಸ್ಥಿತಿಗೆ ಅನುಗುಣವಾಗಿ ರಾಷ್ಟ್ರೋತ್ಥಾನ ಪರಿಷತ್ತಿನವರು ಮುದ್ದಾದ ಮಾಟದಲ್ಲಿ ಅಂದವಾಗಿ ಪುಸ್ತಕಗಳನ್ನು ಹೊರತಂದು ಜನಮನವನ್ನು ಆಕರ್ಷಿಸಿರುವರೆಂಬುದಕ್ಕೆ ಪ್ರಕಟನೆಗಿಂತಲೂ ಮೊದಲೇ ಮಾರಾಟವಾಗಿರುವ ಪುಸ್ತಕಗಳ ಅಂಕಿ ಅಂಶಗಳೇ ಸಾಕ್ಷಿಯಾಗಿವೆ."

—'ನಾಗರಿಕ' ಗದಗ : ೯-೧೧-೧೯೭೩

ಮಕ್ಕಳ ಮನಸ್ಸನ್ನು ಶ್ರೀಮಂತಗೊಳಿಸುವ ಸಾಹಿತ್ಯ

"....ಕನ್ನಡ ನಾಡಿನ ಎಳೆಯ ಮಕ್ಕಳಲ್ಲಿ ಕ್ಷಾತ್ರ ತೇಜಸ್ಸನ್ನು ತುಂಬಲು, ಸೃಜನಾತ್ಮಕ ಶಕ್ತಿಯ ವಿಕಾಸ ಮಾಡಲು ಭಾರತ-ಭಾರತಿ ಪುಸ್ತಕ ಸಂಪದ ಪ್ರಕಟನೆಯು ಅತ್ಯಂತ ಶ್ಲಾಘನೀಯವಾಗಿದೆ. ಪ್ರತಿಯೊಂದು ಕುಟುಂಬದ ಪಾಲಕರು ತಮ್ಮ ಮಕ್ಕಳು ಭಾರತ-ಭಾರತಿ ಪುಸ್ತಕ ಸಂಪದದ ಪ್ರಕಟನೆಗಳನ್ನು ಓದುವಂತೆ ಗಮನ ಕೊಟ್ಟರೆ ನಿಶ್ಚಿತವಾಗಿಯೂ ಆ ಮಕ್ಕಳು ಮನೆಯ ಕೀರ್ತಿ ಗೌರವಗಳಿಗೆ ಪೋಷಕರಾಗಿ ಬೆಳೆಯುವರೆಂಬುದರಲ್ಲಿ ಎಷ್ಟೂ ಸಂಶಯವಿಲ್ಲ."

—'ನೇಗಿಲಯೋಗಿ' ಗದಗ : ೧೩-೧೧-೧೯೭೩

## ಹಂಬಲ–ಬೆಂಬಲ

**[ಭಾರತ-ಭಾರತಿ ಪುಸ್ತಕ ಸಂಪದ ಯೋಜನೆಯ ಶುಭಾರಂಭದ ಉತ್ಸವಕ್ಕೆ ಆಗಮಿಸಿದ ಪೂಜ್ಯರು, ಸಾಹಿತಿಗಳು, ಶಿಕ್ಷಣವೇತ್ತರು, ಸಾರ್ವಜನಿಕ ಮುಖಂಡರು, ಹಿರಿಯರು, ಅಭಿಮಾನಿಗಳು ನೀಡಿದ ಹರಕೆ, ಮಾರ್ಗದರ್ಶನ, ಮೆಚ್ಚಿಕೆ, ಪ್ರೋತ್ಸಾಹ]**

**ಶ್ರೀ ಟಿ. ಕೆ. ತುಕೋಳ್,** ಐ. ಎ. ಎ. ಉಪಕುಲಪತಿಗಳು (ಬೆಂಗಳೂರು ಸಮಾರಂಭದಲ್ಲಿ)

ನವಪೀಳಿಗೆಯಲ್ಲಿ 'ಭಾರತ-ಭಾರತಿ'ಯು ಹೊಸ ಚೈತನ್ಯ ಪ್ರಜ್ಞೆಗಳನ್ನು ಮೂಡಿಸಲಿ. ಪುಸ್ತಕಗಳು ತುಂಬ ಆಕರ್ಷಕವಾಗಿದ್ದು ಮಕ್ಕಳಲ್ಲಿ ಉತ್ತಮ ವಿಚಾರಗಳನ್ನು ಪ್ರೇರಿಸಲು ಸಹಾಯಕವಾಗಿವೆ.

ಶ್ರೀ ಜಿ. ನಾರಾಯಣ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು (ಬೆಂಗಳೂರು ಸಮಾರಂಭದಲ್ಲಿ)
ಮಕ್ಕಳ ನೆರವಿಗೆ ನಮ್ಮ ದೇಶದ ಪುಣ್ಯಪುರುಷರ ಚರಿತ್ರೆಯ ಅಭ್ಯಾಸವೊಂದೇ ಉಳಿದಿರುವ ಮಾರ್ಗ. ಇಂದಿನ ಶೈಕ್ಷಣಿಕ ತಳಪಾಯವನ್ನು ಸರಿಪಡಿಸಲು ಭಾರತ-ಭಾರತಿ ಪುಸ್ತಕಗಳ ಪ್ರಚಾರ, ಅದಕ್ಕೆ ಸರಕಾರದ ನೆರವೂ ಅಗತ್ಯ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ, ಕರ್ನಾಟಕ ವಿಧಾನಸಭಾ ಅಧ್ಯಕ್ಷೆ (ಬೆಂಗಳೂರು ಸಮಾರಂಭದಲ್ಲಿ)
ಹಣತೆಯಿಂದ ಹಣತೆ ಹಚ್ಚುವಂತೆ ಭಾರತ-ಭಾರತಿಯ ದೀಪ ಮನೆಯಿಂದ ಮನೆಗೆ ಬೆಳಗಿ ಈ ಯೋಜನೆ ಯಶಸ್ವಿಯಾಗಲಿ.

ಶ್ರೀಮತಿ 'ವಾಣಿ', ಖ್ಯಾತ ಸಾಹಿತಿ (ಬೆಂಗಳೂರು ಸಮಾರಂಭದಲ್ಲಿ)
'ಭಾರತ-ಭಾರತಿ' ಪುಸ್ತಕಗಳು ಮಕ್ಕಳಿಗೆ ದೊಡ್ಡ ವರದಾನವಾಗಿವೆ. ಮುದ್ರಣ, ಕಾಗದ, ಒಳತಿರುಳು ಎಲ್ಲಾ ಸೊಗಸಾಗಿವೆ.

ಡಾ॥ ಕೆ. ವಿ. ಪುಟ್ಟಪ್ಪನವರು, ರಾಷ್ಟ್ರಕವಿ 'ಕುವೆಂಪು' (ಮೈಸೂರು ಸಮಾರಂಭದಲ್ಲಿ)
ಮಕ್ಕಳಿಗೆ ವಿಚಾರಶಕ್ತಿ, ವೈಜ್ಞಾನಿಕ ದೃಷ್ಟಿ ಕೊಡಬೇಕು. ವಿಚಾರಶಕ್ತಿ ಉದ್ದೀಪನಗೊಳಿಸಿದಲ್ಲಿ, ವ್ಯಕ್ತಿ ಅವಿವೇಕಿಯಾಗಲಾರ, ವಿವೇಕಿ ಆಗಿಯೇ ಆಗುವನು. ಭರತಖಂಡದ ಸಾವಿರಾರು ಮಹಾಪುರುಷರಿಂದ ಸ್ಫೂರ್ತಿ ಪಡೆದು ನಮ್ಮ ಎಳೆಯ ಜನಾಂಗ ಬೆಳೆದು ನಾಡನ್ನು ಮೇಲಕ್ಕೆತ್ತಬೇಕು, ಅದರ ಕೀರ್ತಿ ಜಗದ್ವಿಖ್ಯಾತವಾಗಬೇಕು—ಎಂಬ ಉದ್ದೇಶ 'ಭಾರತ-ಭಾರತಿ' ಪುಸ್ತಕ ಸಂಪದದಲ್ಲಿದೆ.

ಪ್ರೊ॥ ದೇ. ಜವರೇಗೌಡರು, ಮೈ. ವಿ. ವಿ. ಉಪಕುಲಪತಿ (ಮೈಸೂರು ಸಮಾರಂಭದಲ್ಲಿ)
ರಾಷ್ಟ್ರೋತ್ಥಾನ ಪರಿಷತ್ತು ಆರಂಭವಾಗಿ ಕೆಲವೇ ವರ್ಷಗಳಲ್ಲಿ ಉತ್ತಮ ಪುಸ್ತಕಗಳನ್ನು ಹೊರತಂದಿದೆ. ಅನೇಕ ಸಾಹಸ ಕಾರ್ಯ ಕೈಗೊಂಡಿದೆ. ವಿದ್ಯುತ್ತು ಮನೆ ಬೆಳಗುತ್ತದೆ, ಈ ಪುಸ್ತಕಗಳು ಮನ ಬೆಳಗುತ್ತವೆ. ಈ ಕಾರ್ಯ ಯಶಸ್ವಿಯಾಗಲಿ.

ಪ್ರೊ॥ ಎಸ್. ರಾಮೇಗೌಡರು, ಪಿಇಎಸ್ ಇಂಜಿನಿಯರಿಂಗ್ ಕಾಲೇಜ್ (ಮಂಡ್ಯ ಸಮಾರಂಭ)
ಮಕ್ಕಳಿಗೆ ನಮ್ಮ ಸಂಸ್ಕೃತಿಯ ಸುಮಧುರ ಕಂಪಿನ ಅರಿವು ಉಂಟುಮಾಡುವ ಕಾರ್ಯ ರಾಷ್ಟ್ರೋತ್ಥಾನ ಪರಿಷತ್ತು ಈ ಮೂಲಕ ಕೈಗೊಂಡಿದೆ. ಇದು ಯಶಸ್ಸು ಗಳಿಸಲಿ.

ಪದ್ಮಶ್ರೀ ಡಾ॥ ಟಿ. ಎಂ. ಎ. ಪೈ, ಉದ್ಯಮಿ-ಶಿಕ್ಷಣ ತಜ್ಞರು (ಮಂಗಳೂರು ಸಮಾರಂಭದಲ್ಲಿ)
ಮಕ್ಕಳ ಚಟುವಟಿಕೆಗಳಲ್ಲಿ ಹೊಸ ಚೇತನ ತುಂಬಲು, ಅವರ ಪಥದಲ್ಲಿ ಹೊಸ ಬೆಳಕನ್ನು ಚೆಲ್ಲಲು ಶಕ್ತವಾದ ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆಯಬೇಕು. ಭಾರತ-ಭಾರತಿ ಯೋಜನೆಗೆ ನನ್ನ ಪೂರ್ಣ ಬೆಂಬಲ ಇದೆ.

**ಪದ್ಮಭೂಷಣ ಡಾ॥ ಕೋ. ಶಿವರಾಮ ಕಾರಂತರು** (ಮಂಗಳೂರು ಸಮಾರಂಭದಲ್ಲಿ)

ಮಗುವಿನ ಭಾಷೆ, ಮನೋಧರ್ಮ ತಿಳಿದು ಮನಸ್ಸು ತೇಲುವಂತೆ ಆ ಮಟ್ಟಕ್ಕೆ ಇಳಿದು ಬರೆದರೆ ಮನಸ್ಸು ಅರಳುತ್ತದೆ. ಅದು ಮಕ್ಕಳ ಸಾಹಿತ್ಯ ಆಗುತ್ತದೆ. ರಾಷ್ಟ್ರೋತ್ಥಾನ ಪರಿಷತ್ತು ಇತ್ತ ಗಮನ ಹರಿಸಲಿ.

**ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್,** ಹಿರಿಯಸಾಹಿತಿಗಳು (ಹಾಸನ ಸಮಾರಂಭದಲ್ಲಿ)

ಇಂದು ನಮಗೆ ಎಲ್ಲವೂ ಇದೆ. ಆದರೆ ಭಾರತೀಯತೆಗೆ ಬರಗಾಲ. ವಿಶ್ವಕ್ಕೇ ಭಾರತ ದರ್ಶನ ಮಾಡಿಸಿದ ಪೂರ್ವಜರನೇಕರ ಜೀವನಪರಿಚಯ ಭಾರತ-ಭಾರತಿ ಯೋಜನೆಯ ಮೂಲಕ ಸಾಧ್ಯವಾಗುತ್ತದೆ.

**ಶ್ರೀ ಎಚ್ಚೆಸ್ಕೆ,** ಖ್ಯಾತ ಲೇಖಕರು (ಹಾಸನ ಸಮಾರಂಭದಲ್ಲಿ)

ಕಿರಿಯರಿಗೆ ರಾಷ್ಟ್ರದ ಮಹಾಪುರುಷರ ಜೀವನ ತಿಳಿಸಿಕೊಡುವ ಈ ಕ್ರಾಂತಿಮಯ ಯೋಜನೆ ಯಶಸ್ವಿಯಾಗಲಿ. ಎಲ್ಲರೂ ಭಾರತ-ಭಾರತಿ ಪುಸ್ತಕಗಳನ್ನು ಕೊಳ್ಳಿ; ಉಳ್ಳವರು ಇತರರಿಗೂ ಕೊಂಡು ಕೊಡಿ.

**ಶ್ರೀಮತಿ ಆರ್ಯಾಂಬ ಪಟ್ಟಾಭಿ,** ಖ್ಯಾತ ಲೇಖಕಿ (ಚಿಕ್ಕಮಗಳೂರು ಸಮಾರಂಭದಲ್ಲಿ)

ಈಚೆಗೆ ಮಕ್ಕಳ ಸಾಹಿತ್ಯಕ್ಕೆ ಶುಕ್ರದೆಸೆ ಆರಂಭವಾಗಿದೆ....ಮಕ್ಕಳಿಗೆ ಒಳ್ಳೆಯ ಅರಿವನ್ನು ನೀಡುವುದಕ್ಕೋಸ್ಕರ ಭಾರತ-ಭಾರತಿ ಪುಸ್ತಕ ಸಂಪದ ಮಾಡುತ್ತಿರುವ ಕಾರ್ಯ ನಿಜಕ್ಕೂ ಪ್ರಸಂಶನೀಯ.

**ಪ್ರೊ॥ ಎಸ್. ಎಂ. ವೃಷಭೇಂದ್ರಸ್ವಾಮಿ** (ಧಾರವಾಡ ಸಮಾರಂಭದಲ್ಲಿ)

ಭಾವೀ ಭಾರತವನ್ನು ಸಶಕ್ತಗೊಳಿಸಬಲ್ಲ ತರುಣರನ್ನು ಸೃಜಿಸುವಲ್ಲಿ ಭಾರತ-ಭಾರತಿ ಪುಸ್ತಕ ಸಂಪದ ಮಹತ್ವದ ಹೆಜ್ಜೆ.

**ಶ್ರೀಮತಿ ಶಾಂತಾದೇವಿ ಕಣವಿ,** ಖ್ಯಾತ ಕಥೆಗಾರ್ತಿ (ಧಾರವಾಡ ಸಮಾರಂಭದಲ್ಲಿ)

ತನ್ನ ಮಗು ಸರಿಯಾಗಿ ಉಣ್ಣಲಿಲ್ಲ, ತಿನ್ನಲಿಲ್ಲ ಎಂದು ಮಾತ್ರವಲ್ಲದೆ ಇಂಥ ಒಳ್ಳೆಯ ಪುಸ್ತಕ ಓದಲಿಲ್ಲ ಎಂದು ಪ್ರತಿ ತಾಯಿಯೂ ಆತಂಕಪಡುವ ಕಾಲ ಬೇಗ ಬರಲಿ.

**ಶ್ರೀ 'ಸಿಸು' ಸಂಗಮೇಶ,** ಖ್ಯಾತ ಶಿಶುಸಾಹಿತ್ಯವೇತ್ತರು (ವಿಜಾಪುರ ಸಮಾರಂಭದಲ್ಲಿ)

ಹೆಚ್ಚುಹೆಚ್ಚು ಸಂತರ-ಶರಣರ, ಮಹಾಪುರುಷರ ಬಾಳು ಬೆಳಕಿಗೆ ಬರಲಿ. ರಾಷ್ಟ್ರೋತ್ಥಾನ ಪರಿಷತ್ತು ಚಿರಕಾಲ ಭಾರತಾಂಬೆಯ ಸೇವೆಯನ್ನು ಮಾಡಲಿ.

**ಪ್ರಾ॥ ಸಂಗಮನಾಥ ಹಂಡಿ,** ಅಧ್ಯಕ್ಷರು, ಜಿಲ್ಲಾ ಸಾಹಿತ್ಯ ಪರಿಷತ್ತು (ವಿಜಾಪುರ ಸಮಾರಂಭ)

ಮನ ಬೆಳಗಿದರೆ ಮನೆ ಬೆಳಗುವುದು. ರಾಷ್ಟ್ರೋತ್ಥಾನ ಪರಿಷತ್ತಿನವರು ನಿಜವಾದ ದೀಪಾವಳಿ ಆಚರಿಸಿದ್ದಾರೆ. ಸಾಹಿತ್ಯದ ಹೊಳೆ ಹರಿಸುತ್ತಿದ್ದಾರೆ.

ಶ್ರೀ ಶಾಂತಯ್ಯ ಮಠ, ಪ್ರಿನ್ಸಿಪಾಲ್, ಶಿಕ್ಷಣ ಕಾಲೇಜು (ಗುಲಬರ್ಗಾ ಸಮಾರಂಭದಲ್ಲಿ) 
ಪ್ರಶಂಸನೀಯ ಕಾರ್ಯ. ಪ್ರತಿಯೊಬ್ಬ ವಿದ್ಯಾರ್ಥಿ ಈ ಪುಸ್ತಕಗಳನ್ನು ಓದುವುದು ಅಗತ್ಯ.

ಶ್ರೀಮತಿ ಸರಿತಾ ಕುಸುಮಾಕರ ದೇಸಾಯಿ, ಲೇಖಕಿ (ಗುಲಬರ್ಗಾ ಸಮಾರಂಭದಲ್ಲಿ)
ರಾಷ್ಟ್ರೋತ್ಥಾನ ಪರಿಷತ್ತಿನ ಧ್ಯೇಯ ಉನ್ನತವಿರುವುದರಿಂದ ಕಾರ್ಯದಲ್ಲಿ ಸಫಲತೆ ನಿಶ್ಚಿತ.

ಶ್ರೀ ವೈ. ಎಂ. ಸಿ. ಶರ್ಮಾ, ಜಿಲ್ಲಾ ನ್ಯಾಯಾಧೀಶರು (ರಾಯಚೂರು ಸಮಾರಂಭದಲ್ಲಿ)
ಭಾರತ-ಭಾರತಿ ಪುಸ್ತಕ ಸಂಪದವು ರಾಷ್ಟ್ರೋತ್ಥಾನ ಪರಿಷತ್ತಿನ ಪವಾಡ. ಇದರಿಂದ ಮಕ್ಕಳು ಸುಸಂಸ್ಕೃತ ರಾಷ್ಟ್ರಪ್ರೇಮಿಗಳಾಗುವುದು ನಿಶ್ಚಿತ.

ಶ್ರೀಮತಿ ಗೌರಿ ಭಟ್, ಕಾಲೇಜು ಪ್ರಾಧ್ಯಾಪಕರು (ರಾಯಚೂರು ಸಮಾರಂಭದಲ್ಲಿ)
'ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಗಸು'–ಎಂಬ ಡಿ.ವಿ.ಜಿ. ವಾಣಿಯಂತಿದೆ, ಈ ಕಿಶೋರ ಸಾಹಿತ್ಯ.

ಶ್ರೀಮತಿ ಸರ್ವಮಂಗಳಮ್ಮ, ಹಿರಿಯ ಲೇಖಕಿ (ಬಳ್ಳಾರಿ ಸಮಾಸಂಭದಲ್ಲಿ)
ಭಾರತ-ಭಾರತಿ ಪುಸ್ತಕ ಸಂಪದ ಯೋಜನೆಯು ಭವಿತವ್ಯದ ಪ್ರಜೆಗಳಾದ ಎಳೆಯರಿಗೆ ಸಚ್ಚಾರಿತ್ರ್ಯದ ಸ್ಫೂರ್ತಿ, ಸಂಸ್ಕೃತಿಯ ಅಮೃತ ಎರೆಯುತ್ತದೆ.

ಶ್ರೀಮತಿ ವೇದಾವತಿ ರಾಮಚಂದ್ರರಾವ್, ಮಹಿಳಾ ಮುಂದಾಳು (ಬಳ್ಳಾರಿ ಸಮಾರಂಭದಲ್ಲಿ)
ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಭಾರತ-ಭಾರತಿ ಶಿಶುಸಾಹಿತ್ಯ ದಿವ್ಯ ಔಷಧ. ಇಂಥ ಯೋಜನೆ ನಮ್ಮ ನಾಡಿನ ಭಾಗ್ಯ. ಅದನ್ನು ತನುಮನ ಧನಗಳಿಂದ ಪ್ರೋತ್ಸಾಹಿಸಬೇಕು.

ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು (ತುಮಕೂರು ಸಮಾರಂಭದಲ್ಲಿ)
ಶ್ರೇಷ್ಠ ಪುರುಷರ ಹಾದಿಯನ್ನು ತಿಳಿಸುವ ಉತ್ತಮ ಸಾಹಿತ್ಯವನ್ನು ಬರೆಸಿ, ಸಾಮಾನ್ಯ ಪ್ರಜೆಗೂ ದೊರಕುವಂತೆ ವ್ಯಾಪಕವಾಗಿ ಸಫಲವಾಗಿ ಮಾಡಬಲ್ಲ ರಾಷ್ಟ್ರೋತ್ಥಾನ ಪರಿಷತ್ತು ಈ ಮೂಲಕ ಎಳೆಯರನ್ನು ಸುಸಂಸ್ಕೃತರನ್ನಾಗಿ ಮಾಡಲಿ.

ಶ್ರೀಮತಿ ಎಚ್. ಎಸ್. ಪಾರ್ವತಿ, ಪ್ರಸಿದ್ಧ ಲೇಖಕಿ (ಕೋಲಾರ ಸಮಾರಂಭದಲ್ಲಿ)
ಆಸಕ್ತಿ, ಆದರ್ಶ ಹಾಗೂ ಆಲೋಚನೆ ಉಂಟು ಮಾಡಿ ಸೂಕ್ತ ಮಾರ್ಗದರ್ಶನ ನೀಡುವ ಇಂಥ ಮಕ್ಕಳ ಪುಸ್ತಕಗಳು ಇಂದು ಅಗತ್ಯ.

ಶ್ರೀ ಕೆ. ರಾಮಕೃಷ್ಣ ಉಡುಪ, ಪ್ರಿನ್ಸಿಪಾಲ್, ಸರ್ಕಾರಿ ಕಾಲೇಜು (ಕೋಲಾರ ಸಮಾರಂಭದಲ್ಲಿ)
ಎಳೆ ವಯಸ್ಸಿನಲ್ಲೇ ಮಕ್ಕಳಲ್ಲಿ ಪುಸ್ತಕಪ್ರಿಯತೆ ಉಂಟಾಗುವಂತೆ ಮಾಡಬೇಕು. ಅದಕ್ಕೆ ಭಾರತ-ಭಾರತಿ ಪುಸ್ತಕಗಳು ಸಹಾಯಕವಾಗಿವೆ.

**ಶ್ರೀ ವಿಘ್ನೇಶ್ವರ ಶರ್ಮಾ ತದ್ದಲಸೆ,** ಹಿರಿಯ ಬರಹಗಾರರು (ಶಿರಸಿ ಸಮಾರಂಭದಲ್ಲಿ)



ಶರೀರದ ಬೆಳವಣಿಗೆಗೆ ಒಳ್ಳೆಯ ಆಹಾರ ಹೇಗೋ ಹಾಗೆ ಬುದ್ಧಿ ಮತ್ತು ಮನಸ್ಸುಗಳ ವಿಕಾಸಕ್ಕೆ ಒಳ್ಳೆಯ ಸಾಹಿತ್ಯ. ವಿಚಾರಸಾಹಿತ್ಯ ಹಾಗೂ ಶಿಶುಸಾಹಿತ್ಯದ ಅಭಾವವನ್ನು ಹೋಗಲಾಡಿಸುತ್ತಿರುವ ರಾಷ್ಟ್ರೋತ್ಥಾನದ ಕಾರ್ಯದಲ್ಲಿ ಸಹಕರಿಸೋಣ.

**ಪೂಜ್ಯ ಶ್ರೀ ಮೂರುಸಾವಿರ ಮಠಾಧೀಶರು** (ಹುಬ್ಬಳ್ಳಿ ಸಮಾರಂಭದಲ್ಲಿ)

ಅತ್ಯಂತ ದೂರದೃಷ್ಟಿಯಿಂದ ಮಕ್ಕಳನ್ನು ಸಂಸ್ಕಾರಯುತರನ್ನಾಗಿ ಮಾಡಲು ಹೊರಟಿರುವ ಯೋಜನೆ ಇದು; ಸ್ವಾಗತಾರ್ಹ. ನಾವೇ ಮಾಡಬೇಕಾದ ಇಂಥ ಕಾರ್ಯ ನೀವು ಮಾಡುತ್ತಿರುವುದು ಹೆಚ್ಚು ಸಂತೋಷದ ಸಂಗತಿ.

**ಶ್ರೀ ರಂ. ರಾ. ದಿವಾಕರ್,** ಹಿರಿಯ ಸಾಹಿತಿ-ಪತ್ರಿಕೋದ್ಯಮಿ (ಹುಬ್ಬಳ್ಳಿ ಸಮಾರಂಭದಲ್ಲಿ)

ಮನುಷ್ಯಶಕ್ತಿಯನ್ನು ಸದುಪಯೋಗ ಮಾಡಿಕೊಳ್ಳುವುದು ಎಲ್ಲ ಯೋಜನೆಗಳಿಗಿಂತ ಶ್ರೇಷ್ಠವಾದುದು. ಅದನ್ನು 'ಭಾರತ – ಭಾರತಿ' ಕೈಗೊಂಡಿದೆ. ಇದು ಸಾಹಿತ್ಯಸೇವೆ ಮಾತ್ರವಲ್ಲ, ಜ್ಞಾನಸತ್ರ.

**ಶ್ರೀ ಹೊ. ವೆ. ಶೇಷಾದ್ರಿ,** ಚಿಂತಕರು–ಲೇಖಕರು (ಹುಬ್ಬಳ್ಳಿ ಸಮಾರಂಭದಲ್ಲಿ)

ಟೀಕೆ ಟಿಪ್ಪಣಿಗಳ ಗದ್ದಲದ ನಡುವೆ ಶಾಂತವಾಗಿ ಭಾರತ–ಭಾರತಿ ತನ್ನದೊಂದು ಸಣ್ಣ ಹಣತೆ ಹಚ್ಚುತ್ತಿದೆ. ವಿಷ್ಣುಪುರಾಣದಲ್ಲಿ ಹೇಳಿರುವಂತೆ, 'ಭಾರತ' ಎಂದರೆ ಬೆಳಕು, ಬೆಳಕಿನ ಮಕ್ಕಳೇ ಭಾರತೀಯರು. ನೀತಿ ಚಾರಿತ್ರ್ಯದ ಮೇಲ್ಪಂಕ್ತಿ ಹಾಕಿಕೊಡುವ ಯೋಜನೆ ಇದು.

**ಶ್ರೀಮತಿ ಶಾಂತಾದೇವಿ ಮಾಳವಾಡ,** ಲೇಖಿಕಿ (ಹುಬ್ಬಳ್ಳಿ ಸಮಾರಂಭದಲ್ಲಿ)

ಹತ್ತು ಪುಸ್ತಕಗಳೂ ಹತ್ತು ಹಣತೆಗಳಂತಿವೆ; ಭಾರತದ ಭಾವೈಕ್ಯದ ಪ್ರತೀಕವಾಗಿವೆ. ಇಂಥ ಮಹಾಪುರುಷರ ಪೂಜೆಯೇ ನಿಜವಾದ ದೀಪಾವಳಿ.

**ಪೂಜ್ಯ ಶ್ರೀ ಸಿರಿಗೆರೆ ಜಗದ್ಗುರುಗಳು** (ದಾವಣಗೆರೆ ಸಮಾರಂಭದಲ್ಲಿ)

'ಭಾರತ–ಭಾರತಿ ಪುಸ್ತಕ ಸಂಪದ'— ಇದೊಂದು ಅಮೋಘ ಪ್ರಯತ್ನ; ಬಹಳ ಆವಶ್ಯಕತೆ ಇರುವಂಥ ಬೃಹದ್ ಯೋಜನೆ. ಈ ಪುಸ್ತಕಗಳ ಉಪಯೋಗ ಮಕ್ಕಳಿಗೆ ಆಗುವಂತೆ ತಾಯಂದಿರು ಗಮನ ವಹಿಸಬೇಕು.

**ಶ್ರೀಮತಿ ಪದ್ಮಾ ಶೆಣೈ,** ಪ್ರಸಿದ್ಧ ಲೇಖಿಕಿ (ಮಂಗಳೂರು ಸಮಾರಂಭದಲ್ಲಿ)

ಮನೆಮನೆಯಲ್ಲೂ ಓದಲೇಬೇಕಾದ ಪುಸ್ತಕಗಳಿವು.

**ಶ್ರೀ ಕೃಷ್ಣಮೂರ್ತಿ ಪುರಾಣಿಕರು,** ಖ್ಯಾತ ಕಾದಂಬರಿಕಾರರು (ಗೋಕಾಕ ಸಮಾರಂಭದಲ್ಲಿ)

ಭಾರತ–ಭಾರತಿ ಯೋಜನೆ ಬಹಳ ಪ್ರಶಂಸನೀಯ.

ಶ್ರೀ ದು. ನಿಂ. ಬೆಳಗಲಿ, ಪ್ರಸಿದ್ಧ ಸಾಹಿತಿಗಳು (ಬಾಗಲಕೋಟೆ ಸಮಾರಂಭದಲ್ಲಿ)


ರಾಷ್ಟ್ರೋತ್ಥಾನ ಪರಿಷತ್ತಿನ ಭಾರತ–ಭಾರತಿ ಯೋಜನೆಯ ಮಹತ್ವದ ಗುರಿ ಮತ್ತು ದಿಟ್ಟ ಸಾಹಸ ಮೆಚ್ಚುವಂಥದು. ಅದಕ್ಕೆ ಜನತೆಯ ಸಹಕಾರ ಕೋರುವೆ.

ಶ್ರೀ ತಿ. ತಾ. ಶರ್ಮಾ, ಸುಪರಿಚಿತ ನಾಡಹಿರಿಯರು (ಹರಿಹರ ಸಮಾರಂಭದಲ್ಲಿ)

ಭಾರತ–ಭಾರತಿ ಪುಸ್ತಕಗಳಿಂದ ಮುಂದಿನ ಜನಾಂಗದಲ್ಲಿ ಭೇದ ಭಾವನೆ ಮಾಯವಾಗಿ ದೇಶದ ಭವಿಷ್ಯ ಉಜ್ವಲಗೊಳ್ಳಲಿ.

ಶ್ರೀಮತಿ ಟಿ. ಸುನಂದಮ್ಮ, ಖ್ಯಾತ ಹಾಸ್ಯ ಲೇಖಕಿ (ಹರಿಹರ ಸಮಾರಂಭದಲ್ಲಿ)

ಹೀಗೆ ಕಥೆಗಳ ಮೂಲಕ ಮಕ್ಕಳ ಮನಸ್ಸನ್ನು ರೂಪಿಸುವುದು ಸುಲಭಸಾಧ್ಯ.

ಶ್ರೀ ಸಿ. ವಿ. ವೆಂಕಟರಾಯಪ್ಪ, ವಿಧಾನಸಭಾ ಸದಸ್ಯರು (ಚಿಕ್ಕಬಳ್ಳಾಪುರ ಸಮಾರಂಭದಲ್ಲಿ)

ರಾಷ್ಟ್ರೋತ್ಥಾನ ಪರಿಷತ್ತಿನ ಇಂಥ ಉತ್ತಮವಾದ ಬೃಹದ್ ಯೋಜನೆಗೆ ಸರಕಾರವೂ ಜನತೆಯೂ ಸಹಕಾರ ನೀಡುವುದು ಅಗತ್ಯ.

## ಸಡಗರ—ಸಂಭ್ರಮ

[೫–೧೧–೧೯೭೨ ರಂದು ಜರುಗಿದ ಭಾರತ–ಭಾರತಿ ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಜನಸಾಮಾನ್ಯರು ಉತ್ಸಾಹಪುಲಕಿತರಾಗಿ ಕಾರ್ಯಕ್ಕೆ ಮುಂದಾದರು. ಒಂದೊಂದು ಜಾಗದಲ್ಲೂ ಒಂದೊಂದು ವಿಶೇಷತೆ. ಆ ಪೈಕಿ ಕೆಲವು ಸ್ಥಳಗಳದ್ದು–ಇಲ್ಲಿ ಸ್ಥಳಾವಕಾಶ ಇರುವಷ್ಟು ಓದುಗರ ಅವಗಾಹನೆಗೆ ನೀಡಲಾಗಿದೆ.]

ಹುಬ್ಬಳ್ಳಿಯಲ್ಲಿ ಸಮಾರಂಭಕ್ಕೆ ಆಗಮಿಸಿದ್ದ ಮೂರುಸಾವಿರಮಠದ ಪೂಜ್ಯ ಸ್ವಾಮಿಗಳು ತಮ್ಮ ಆಶೀರ್ವಚನದ ಜತೆಗೆ ಒಂದು ಸಹಸ್ರ ರೂ. 'ಪ್ರೋತ್ಸಾಹ ಧನ'ವನ್ನೂ ಅನುಗ್ರಹಿಸಿ, ಉಳಿದವರಿಗೆ ಮಾರ್ಗದರ್ಶನ ಮಾಡಿದರು.

ಮೈಸೂರಿನಲ್ಲಿ ಶ್ರೀ 'ಕುವೆಂಪು' ಅವರಿಗೆ 'ಭಾರತ–ಭಾರತಿ' ಪುಸ್ತಕ ಮಾಲೆ ಅರ್ಪಿಸುತ್ತಲೇ, ಅವರಿಂದ "ಅದ್ಭುತ, ಅದ್ಭುತ, ಶಾರದೆ ನನ್ನ ಕೊರಳಿಗೆ!" ಎಂಬ ಹರ್ಷೋದ್ಗಾರ. ಅಲ್ಲದೆ, ಸಮಾರಂಭದ ಸ್ಥಳದಲ್ಲೇ ನಾಲ್ವರಿಂದ 'ಪ್ರೋತ್ಸಾಹ ನೀಡಿ ನಿಧಿ'ಕೆ.

ಬೀದರಿನಲ್ಲಿ ಪ್ರಿನ್ಸಿಪಾಲ್ ಧನಶ್ರೀಯವರಿಂದ ಮೊದಲ ಹತ್ತು ಪುಸ್ತಕಗಳಲ್ಲಿನ ಹತ್ತು ಮಹಾಪುರುಷರ ಬಗ್ಗೆಯೂ ಪ್ರಾಸಬದ್ಧವಾದ ದ್ವಿಪದಿಗಳ ರಚನೆ.

ವಿಜಾಪುರದಲ್ಲಿ ಶ್ರೀ ಸಾಯಿಬಾಬಾ ಭಜನ ಮಂಡಳಿಯವರು ತಮ್ಮ 'ಬಾಲ ವಿಕಾಸ ಯೋಜನೆ'ಗಾಗಿ ಬಿಡುಗಡೆಕಾರರಿಂದಲೇ ಮೊದಲ ಸೆಟ್ ಪುಸ್ತಕ ಕೊಂಡರು. ತಮ್ಮ ಮಂಡಳಿಯ ಮಕ್ಕಳಿಗೂ ಅವರಿಂದಲೇ ಕೊಡಿಸಿದರು.

ದಾವಣಗೆರೆಯ ಸಮಾರಂಭದ ಅಂಗವಾಗಿ ಸಿರಿಗೆರೆಯ 'ಅಕ್ಕನ ಬಳಗ'ದವ

ರಿಂದ 'ಹಚ್ಚೇವು ಕನ್ನಡದ ದೀಪ....' ಗೀತನೃತ್ಯದ ಅಭಿನಯ.

ರಾಯಚೂರಿನಲ್ಲಿ ಪುಸ್ತಕಗಳನ್ನು ಬಿಡುಗಡೆ ಮಾಡಿದ ಜಿಲ್ಲಾ ನ್ಯಾಯಾಧೀಶ ಶ್ರೀ ವೈ. ಎಂ. ಸಿ. ಶರ್ಮಾ ಅವರು, "ನಾನು ಇದೀಗ ವಾರ್ಷಿಕ ಚಂದಾದಾರ ನಾಗುತ್ತೇನೆ. ಉಳಿದವರೂ ಆಗಬೇಕು" ಎಂದು ಘೋಷಿಸಿದರು.

ಹರಿಹರದಂಥ ಸಣ್ಣ ಊರಿನಲ್ಲಿ ಸಮಾರಂಭದಲ್ಲಿ ಸುಮಾರು ಒಂದು ಸಹಸ್ರ ಸೆಟ್‌ಗಳ (ಹತ್ತು ಸಹಸ್ರ ಪ್ರತಿಗಳ) ಮಾರಾಟ.

ಗದಗದಲ್ಲಿ ಸಭಿಕರು ಮೊದಲು ಕಂಡುದು ಅಂದವಾದ ರೇಶಿಮೆ ಪರದೆ. ಅದು ಬದಿಗೆ ಸರಿಯುತ್ತಲೇ ಜಗಮಗಿಸುವ ವಿದ್ಯುದ್ದೀಪಗಳ ಪ್ರಕಾಶದಲ್ಲಿ ಅಲಂಕೃತ ಭಾರತ ಭೂಪಟ. ಅದರ ನಡುವೆ ಅಲ್ಲಲ್ಲಿ ಬಣ್ಣದ ಲಕೋಟೆಗಳೊಳಗೆ ಭಾರತ-ಭಾರತಿ ಪುಸ್ತಕಗಳು. ಪುಸ್ತಕಗಳ ಬಗ್ಗೆ ಮಾತನಾಡಿದ ಶ್ರೀ ಎ. ಆರ್. ಬುರ್ಲಿಯವರು ಹತ್ತು ಪುಸ್ತಕಗಳ ಪರಿಚಯದ ದೀರ್ಘಪತ್ರಕಗಳ ನೂರಾರು ಪ್ರತಿಗಳನ್ನು ಮುದ್ರಿಸಿ ವಿತರಣೆ ಮಾಡಿದರು.

ಶಿರಸಿಯಲ್ಲಿ ಭಾರತದ ನಕ್ಷೆಯೊಳಗೆ ಆಯಾ ಮಹಾಪುರುಷರ ಜನ್ಮಸ್ಥಳಗಳ ಬಳಿಯೆ ಕ್ರಮವಾಗಿ ಅವರವರ ಪುಸ್ತಕಗಳು! ಅವುಗಳನ್ನು ನೇರವಾಗಿ ಅಲ್ಲಿಂದಲೇ ಬಾಲಕ-ಬಾಲಕಿಯರಿಗೆ ತೆಗೆದುಕೊಟ್ಟು ಉದ್ಘಾಟಿಸಲಾಯಿತು.

ಚಿಕ್ಕಮಗಳೂರಿನಲ್ಲಿ ಶ್ರೀ ಬಿ. ಎಸ್. ಪುಟ್ಟೇಗೌಡರ ಅಧ್ಯಕ್ಷತೆಯಲ್ಲಿ ವಿಶೇಷ ಉತ್ಸವ ಸಮಿತಿ ರಚಿತವಾಗಿತ್ತು. ಸಮಿತಿಯಲ್ಲಿದ್ದ ಇತರರೆಂದರೆ, ಸರ್ವಶ್ರೀ ಹೆಚ್. ಆರ್. ಕೇಶವಮೂರ್ತಿ, ಎಸ್. ನಾಗೇಶಪ್ಪ, ಕಾಶಿ ವಿಶ್ವನಾಥ ಶೆಟ್ಟರು, ಎಸ್. ಕೆ. ಗಣೇಶಯ್ಯ, ಶೃ. ಕೃ. ಶಂಕರನಾರಾಯಣ, ಶ್ರೀಮತಿ ಸರಸ್ವತಿ ಶತ್ರುಘ್ನ, ಶ್ರೀಮತಿ ವಿಮಲಾರಾವ್ ಮುಂತಾದವರು. ಸಮಾರಂಭದ ಪ್ರಾರಂಭದಲ್ಲಿ ಬೇರೆ ಬೇರೆ ಪಾತ್ರಗಳಲ್ಲಿ ಹತ್ತು ಸ್ತಬ್ಧ ಚಿತ್ರಗಳ ದೃಶ್ಯಾವಳಿಯ ಪ್ರದರ್ಶನ.

ತುಮಕೂರಿನಲ್ಲಿ ಬಿಡುಗಡೆಯ ಕಾಲದಲ್ಲಿ ಮಾಯಾಲಾಂದ್ರದ ಮೂಲಕ ಹತ್ತು ಮುಖಪುಟಗಳ ಪ್ರದರ್ಶನ; ಹಿನ್ನೆಲೆ ಸಂಗೀತ ಮತ್ತು ಆಯಾ ಮಹಾಪುರುಷರನ್ನು ಕುರಿತ ಧ್ವನಿಮುದ್ರಣ ಪ್ರಸಾರ. ಸನ್ನಿವೇಶ ಹೃದಯಂಗಮ.

ಬೆಂಗಳೂರಿನಲ್ಲಿ ಮಹಾಪುರುಷರೆಲ್ಲರ ಚಿತ್ರ ಹೊತ್ತ ಪೆಟ್ಟಿಗೆಯ ಬಣ್ಣದ 'ಬಾಗಿಲು ತೆರೆದು, ಬೆಳಕು ಹರಿದು, ಸಭೆಯೆಲ್ಲ ತೊಯ್ದಾ'ಗ, ಬಿಡುಗಡೆ ಮಾಡಿದವರು ಒಳಗಿನಿಂದ ಒಂದೊಂದೇ ಪುಸ್ತಕಗಳನ್ನು ತೆಗೆದು ಬಾಲಕ-ಬಾಲಕಿಯರಿಗೆ ವಿತರಣೆ ಮಾಡಿದ ದೃಶ್ಯವನ್ನು ವರ್ಣರಂಜಿತ ಚಲನಚಿತ್ರದಲ್ಲಿ ಸೆರೆಹಿಡಿಯಲಾಯಿತು.

## ಹರಕೆ – ಹಾರೈಕೆ

[ದೀಪಾವಳಿ ದಿ. ೫-೧೧-೧೯೭೨ರಂದು ನಡೆದ 'ಭಾರತ-ಭಾರತಿ ಪುಸ್ತಕ ಸಂಪದ'ದ ಉದ್ಘಾಟನಾ ಸಮಾರಂಭಕ್ಕೆ ಶುಭಕೋರಿ ದೇಶದ ಗುರುಹಿರಿಯರು ಕಳುಹಿಸಿದ ಹರಕೆಗಳಲ್ಲಿ ಇವು ಕೆಲವು.]

**ಪೂಜ್ಯ ಶ್ರೀ ಜಗದ್ಗುರು ಶಂಕರಾಚಾರ್ಯ ಸ್ವಾಮಿಗಳು,** ದ್ವಾರಕಾ ಪೀಠ

ಸಮಾರಂಭ ಯಶಸ್ವಿಯಾಗಲಿ. ಜಯತು ಭಾರತ-ಭಾರತೀ.

**ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು,** ಶ್ರೀ ಸಿದ್ಧಗಂಗಾ ಮಠ

ಪರಿಷತ್ತಿನ ಈ ಬೃಹದ್ ಯೋಜನೆಯು ಉಜ್ವಲ ಭವಿಷ್ಯವನ್ನು ಹೊಂದುವಂತೆ ಪರಶಿವನು ಅನುಗ್ರಹಿಸಲೆಂದು ಹಾರೈಸುತ್ತೇವೆ.

**ಪೂಜ್ಯ ಶ್ರೀ ರಾಮಾನಂದ ಸ್ವಾಮಿಗಳು,** ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ

ನಿಮ್ಮ ಕಾರ್ಯವು ಜಯಪ್ರದವಾಗಿ ನೆರವೇರಲೆಂದೂ, ನಿಮಗೆಲ್ಲ ದೇವರು ನಿತ್ಯಮಂಗಳವನ್ನು ಕೃಪೆ ಮಾಡಲೆಂದೂ ಹಾರೈಸುತ್ತೇವೆ.

**ಪೂಜ್ಯ ಆಚಾರ್ಯ ಬುದ್ಧರಕ್ಷಿತ ತೇರಾ,** ಮಹಾಬೋಧಿ ಸಂಘ

'ಭಾರತ-ಭಾರತಿ ಪುಸ್ತಕ ಸಂಪದ' ಯೋಜನೆ ಯಶಸ್ವಿಯಾಗಲೆಂದು ಹಾರೈಸುತ್ತೇನೆ... ನಿಮ್ಮ ಉದಾತ್ತ ಧ್ಯೇಯ ಜಯಪ್ರದವಾಗಲಿ.

**ಪೂಜ್ಯ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಸ್ವಾಮಿಗಳು,** ಶ್ರವಣಬೆಳಗೊಳ ಪೀಠ

ಪುಸ್ತಕಗಳ ಬಿಡುಗಡೆ ಸಮಾರಂಭವು ಅತ್ಯಂತ ಯಶಸ್ವಿಯಾಗಿ ಜರುಗಿ ಮುಂದೆಯೂ ಸಂಸ್ಥೆಯು ಕೈಗೊಂಡಿರುವ ವಿಶಿಷ್ಟ ಯೋಜನೆಗಳು ಯಶಸ್ವಿಯಾಗಲೆಂದು ನಮ್ಮ ಶುಭ ಹಾರೈಕೆ.

**ಶ್ರೀ ವಿ. ವಿ. ಗಿರಿ,** ಭಾರತದ ಶ್ರದ್ಧೇಯ ರಾಷ್ಟ್ರಪತಿಗಳು

ನಿಮ್ಮ ಕಾರ್ಯದ ಯಶಸ್ಸಿಗೆ ನನ್ನ ಶುಭಾಶಯಗಳು.

**ಶ್ರೀ ಜಿ. ಎಸ್. ಪಾಠಕ್,** ಭಾರತದ ಶ್ರದ್ಧೇಯ ಉಪರಾಷ್ಟ್ರಪತಿಗಳು

ಮೊದಲ ಹತ್ತು ಪುಸ್ತಕಗಳು ದೀಪಾವಳಿಯಂದು ಕರ್ನಾಟಕದ ಮೂವತ್ತು ಮುಖ್ಯ ಸ್ಥಳಗಳಲ್ಲಿ ಬಿಡುಗಡೆಯಾಗಲಿರುವುದು ಹರ್ಷದ ಸಂಗತಿ. ನಿಮ್ಮ ಪ್ರಕಟಣೆಗೆ ನನ್ನ ಶುಭಾಶಯಗಳು.

**ಶ್ರೀಮತಿ ಸರೋಜಿನಿ ಮಹಿಷಿ,** ಪ್ರವಾಸೋದ್ಯಮ ಸಚಿವರು, ಭಾರತ ಸರಕಾರ

ರಾಷ್ಟ್ರೋತ್ಥಾನ ಪರಿಷತ್ತು ಮಕ್ಕಳಿಗಾಗಿ ಕನ್ನಡದಲ್ಲಿ ೫೦೦ ಪುಸ್ತಕಗಳನ್ನು ಪ್ರಕಟಿಸುವ ಬೃಹದ್ ಯೋಜನೆ ಕೈಗೊಂಡಿದೆಯೆಂದೂ, ಅದರ ಮೊದಲ ಕಂತು ದೀಪಾವಳಿಯಂದು ಬಿಡುಗಡೆಯಾಗುವುದೆಂದೂ ತಿಳಿದು ಸಂತೋಷವಾಯಿತು. ಈ ಕಾರ್ಯಕ್ಕೆ ಪೂರ್ಣ ಯಶಸ್ಸು ಆಗಲಿ.

**ಶ್ರೀ ಗುರೂಜಿ ಗೋಳವಲಕರ್,** ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖರು



ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್ತಿನವರು ಕೈಗೊಂಡಿರುವ ಭಾರತ-ಭಾರತಿ ಪುಸ್ತಕ ಸಂಪದ ಯೋಜನೆಯನ್ನು ಭಗವಂತನು ಹರಸಲಿ; ಬೆಳೆಸಲಿ.

**ಶ್ರೀ ಮೋಹನಲಾಲ್ ಸುಖಾಡಿಯಾ,** ಸನ್ಮಾನ್ಯ ರಾಜ್ಯಪಾಲರು, ಕರ್ನಾಟಕ

ಭಾರತದ, ಅದರಲ್ಲೂ ಕರ್ನಾಟಕದ ಮಕ್ಕಳ ಸಲುವಾಗಿ ಇರುವ 'ಭಾರತ-ಭಾರತಿ ಪುಸ್ತಕ ಸಂಪದ' ಯೋಜನೆಯು ಯಶಸ್ವಿಯಾಗಲಿ ಎಂದು ಹಾರೈಸುವೆ.

**ಶ್ರೀ ಬಿ. ಡಿ. ಜತ್ತಿ,** ಸನ್ಮಾನ್ಯ ರಾಜ್ಯಪಾಲರು, ಒರಿಸ್ಸಾ

ಸಾಹಿತ್ಯ ಮತ್ತು ಶಿಕ್ಷಣಗಳ ಮಾಧ್ಯಮದ ಮೂಲಕ ಪರಿಷತ್ತು ಸಮಾಜಕ್ಕೆ ತುಂಬ ಉಪಯುಕ್ತ ಸೇವೆ ಸಲ್ಲಿಸುತ್ತಿರುವುದು ಹರ್ಷದಾಯಕ...
ರಾಷ್ಟ್ರೋತ್ಥಾನ ಪರಿಷತ್ತಿನ ಕಾರ್ಯಗಳ ಯಶಸ್ಸಿಗೆ ನನ್ನ ಶುಭಾಶಯಗಳು.

**ಶ್ರೀ ಪಿ. ವಿ. ನರಸಿಂಹರಾವ್,** ಮಾನ್ಯ ಮುಖ್ಯಮಂತ್ರಿಗಳು, ಆಂಧ್ರಪ್ರದೇಶ

ವ್ಯವಸ್ಥಾಪಕರಿಗೆ ನನ್ನ ಶುಭಾಶಯಗಳು; ನಿಮ್ಮ ಕಾರ್ಯ ಯಶಸ್ವಿಯಾಗಲಿ.

**ಶ್ರೀ ಎ. ಆರ್. ಬದರಿನಾರಾಯಣ್,** ಶಿಕ್ಷಣ ಸಚಿವರು, ಕರ್ನಾಟಕ ರಾಜ್ಯ

ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್ತಿನವರು 'ಭಾರತ-ಭಾರತಿ ಪುಸ್ತಕ ಸಂಪದ' ಎಂಬ ಯೋಜನೆಯ ಮೂಲಕ ಕನ್ನಡದಲ್ಲಿ ಮಕ್ಕಳ ಪುಸ್ತಕಗಳನ್ನು ಪ್ರಕಟಿಸುವ ಪ್ರಚಂಡ ಯೋಜನೆ ಕೈಗೊಂಡಿರುವುದನ್ನೂ, ಅದರ ಮೊದಲ ಕಂತಿನ ಪುಸ್ತಕಗಳು ಕರ್ನಾಟಕದಾದ್ಯಂತ ೫ ನವೆಂಬರ್ ೧೯೭೭ ರಂದು ಬಿಡುಗಡೆಯಾಗಲಿರುವುದನ್ನೂ ತಿಳಿದು ಆನಂದವಾಯಿತು... ಹಾರ್ದಿಕ ಶುಭಾಶಯಗಳು.

**ಶ್ರೀ ಸಿ. ಎಚ್. ಮೊಹಮದ್ ಕೋಯಾ,** ಶಿಕ್ಷಣ ಸಚಿವರು, ಕೇರಳ

ರಾಷ್ಟ್ರೋತ್ಥಾನ ಪರಿಷತ್ತಿಗೆ ನನ್ನ ಶುಭಾಶಯಗಳು; ಸಮಾರಂಭ ಮತ್ತು ಯೋಜನೆ ಜಯಪ್ರದವಾಗಲಿ.

**ಶ್ರೀಮತಿ ಇ. ಇ. ವಾಜ್,** ಆಹಾರಖಾತೆ ಸಚಿವರು, ಕರ್ನಾಟಕ ರಾಜ್ಯ

ಸಮಾರಂಭ ಯಶಸ್ವಿಯಾಗಲೆಂದು ಹಾರೈಸುವೆ.

**ಡಾ॥ ಎ. ಎಸ್. ಅಡ್ಕೆ,** ಉಪಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾನಿಲಯ

ಹೊಸ ಪೀಳಿಗೆಯ ಮನಸ್ಸಿನಲ್ಲಿ ನಮ್ಮ ರಾಷ್ಟ್ರಜೀವನದ ಆತ್ಮದರ್ಶನ ಮೂಡಿಸುವ 'ಭಾರತ-ಭಾರತಿ' ಗ್ರಂಥಮಾಲೆಗೆ ಎಲ್ಲ ಬಗೆಯ ಯಶಸ್ಸನ್ನು ಕೋರುತ್ತೇನೆ.

**ಶ್ರೀ ಬಿ. ಮರಿರಾಜ್,** ಡಿ. ಪಿ. ಐ., ಕರ್ನಾಟಕ ರಾಜ್ಯ

ಪರಿಷತ್ತಿನ ಈ ಕಾರ್ಯ ನಿಜಕ್ಕೂ ಪ್ರಶಂಸನೀಯ. ಕನ್ನಡಿಗರಿಗೆ ದೀಪಾವಳಿಯ ಉಡುಗೊರೆಯಾಗಿ ಮೊದಲ ಹತ್ತು ಪುಸ್ತಕಗಳನ್ನು ಬಿಡುಗಡೆ ಮಾಡುತ್ತಿರುವುದು ಇನ್ನಷ್ಟು ಸಂತೋಷದ ಸಂಗತಿ....ಸಮಾರಂಭವು ಪೂರ್ತಿ ಯಶಸ್ವಿಯಾಗಲಿ.

**ಶ್ರೀ ಎಸ್. ಡಿ. ಬಗರಿ,** ರಾಜ್ಯ ಕೇಂದ್ರ ಭಂಡಾರಿ ಹಾಗೂ ಸಾರ್ವಜನಿಕ ಗ್ರಂಥಾಲಯಗಳ ಮುಖ್ಯಾಧಿಕಾರಿ

ದಿಟ್ಟ ಸಾಹಸ ಕೈಗೊಂಡಿರುವ ನಿಮಗೆ ನಮ್ಮ ಹೃತ್ಪೂರ್ವಕ ಅಬಿನಂದನೆಗಳು.
ನೀವು ಕೈಗೊಂಡ ಯೋಜನೆಯು ಅತ್ಯಂತ ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇನೆ.

**ಶ್ರೀ ಕೆ. ಕೆ. ಪೈ,** ಅಧ್ಯಕ್ಷರು, ಸಿಂಡಿಕೇಟ್ ಬ್ಯಾಂಕ್

ನಿಮ್ಮ ಪರಿಷತ್ತು ಈ ಜಾಗತಿಕ ಪುಸ್ತಕ ವರ್ಷದಲ್ಲೆ 'ಭಾರತ-ಭಾರತಿ' ಪುಸ್ತಕ ಸಂಪದದ ಹೆಸರಿನಲ್ಲಿ ಈ ಯೋಜನೆ ಕೈಗೊಂಡಿರುವುದು ಬಹಳ ಸೂಕ್ತವಾಗಿದೆ.
....ಸಮಾರಂಭವು ಪೂರ್ಣ ಯಶಸ್ಸು ಗಳಿಸಲಿ. ನಿಮ್ಮ ಹೊಸ ಯೋಜನೆಯ ಉದ್ದೇಶವು ಈಡೇರಲಿ ಎಂದು ದೇವರನ್ನು ಪ್ರಾರ್ಥಿಸುವೆ.

**ಶ್ರೀ ಎಂ. ಆರ್. ಆರ್ಯ,** ಅಧ್ಯಕ್ಷರು, ವೈಶ್ಯ ಬ್ಯಾಂಕ್

ರಾಷ್ಟ್ರೋತ್ಥಾನ ಪರಿಷತ್ತಿನವರು ಇಟ್ಟಿರುವ ಈ ದಿಟ್ಟ ಹೆಜ್ಜೆ ಎಲ್ಲರೂ ಮೆಚ್ಚತಕ್ಕದ್ದು.
... ನಿಮ್ಮ ಯೋಜನೆಗೆ ಮತ್ತು ಅದಕ್ಕೆ ಸಂಬಂಧಪಟ್ಟ ಇಂದಿನ ಸಮಾರಂಭಕ್ಕೆ ಜಯವಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

**ಶ್ರೀ ಎಂ. ವಿ. ತಿವಾರಿ,** ಪೂಜ್ಯ ಮೇಯರ್, ಬೆಂಗಳೂರು ನಗರ

ರಾಷ್ಟ್ರೋತ್ಥಾನ ಪರಿಷತ್ತು ಭಾರತ-ಭಾರತಿ ಪುಸ್ತಕ ಸಂಪದದಡಿಯಲ್ಲಿ ಮಕ್ಕಳಿಗಾಗಿ ೫೧೦ ಕನ್ನಡ ಪುಸ್ತಕಗಳನ್ನು ಪ್ರಕಟಿಸಲಿರುವುದು ಸಂತೋಷದ ಸಂಗತಿ ; ಮೆಚ್ಚಲೇಬೇಕು... ಸಮಾರಂಭ ಪೂರ್ತಿ ಯಶಸ್ವಿಯಾಗಲಿ.

**ಡಾ|| ಡಿ. ವಿ. ಗುಂಡಪ್ಪನವರು,** ಹಿರಿಯ ಸಾಹಿತಿಗಳು

ಬೆಳೆಯುತ್ತಿರುವ ನಮ್ಮ ಬಾಲಕರು-ಮುಂದಿನ ಪ್ರಜೆಗಳು-ಓದಿ ಸುಸಂಸ್ಕೃತರಾಗಲು ಅವರಿಗೆ ಒಂದು ಪುಸ್ತಕ ಭಂಡಾರವನ್ನೆ ನೀಡುತ್ತಿದ್ದೀರಿ. ಸೊಗಸಾದ ಯೋಜನೆ. ದಕ್ಷರೂ, ದೂರ ದೃಷ್ಟಿಯುಳ್ಳವರೂ ಕೈಗೊಂಡಿರುವ ಯೋಜನೆ. ಧನಸಹಾಯ ಮಾಡಿ, ಲೇಖನ ಬರೆದು ನಿಮಗೆ ನೆರವಾಗುತ್ತಿರುವ ಎಲ್ಲ ಮಹನೀಯರೂ ಅಭಿನಂದನೀಯರು. ನಿಮ್ಮ ಪರಿಷತ್ತು ಇಂತಹ ಅನೇಕ ನೂತನ ಯೋಜನೆಗಳನ್ನು ಸಾಧಿಸಿ ಆಚಂದ್ರಾರ್ಕವಾಗಿ ಬಾಳಲಿ.

**ಶ್ರೀ ವಿ. ಸೀತಾರಾಮಯ್ಯ,** ಹಿರಿಯ ಸಾಹಿತಿಗಳು

ನೀವು ಕೈಗೊಂಡಿರುವ ಪ್ರಕಾಶನ ಕಾರ್ಯ ತುಂಬಾ ಬೆಲೆಯುಳ್ಳದ್ದು. ಈ ನಾಡಿನ ಮಹಾ ಪುರುಷರನ್ನೂ ಸಂಸ್ಕೃತಿ ಚರಿತ್ರೆಗಳನ್ನೂ ಕುರಿತು ಮುಖ್ಯವಾಗಿ ವಿದ್ಯಾರ್ಥಿಗಳಿಗೆ, ಮಕ್ಕಳಿಗೆ ತಿಳಿವಳಿಕೆ ಆಗತ್ಯ. ಭಾರತ-ಭಾರತಿ ಅದನ್ನು ನೆರವೇರಿಸಲಿದೆ.
ಅದರ ಮುನ್ನಡೆ ನಿರಾತಂಕವಾಗಿ ನಡೆಯುವಂತೆಯೂ ಈ ದೀಪಾವಳಿಯಂದು ನಡೆಯಲಿರುವ ಸಮಾರಂಭ ಯಶಸ್ವಿಯಾಗುವಂತೆಯೂ ಭಗವಂತನು ಅನುಗ್ರಹಿಸಲಿ.

**ಶ್ರೀ ಟಿ. ಎಸ್. ರಾಜಂ,** ಅಧ್ಯಕ್ಷರು, ಸುಂದರಂ ಮೋಟಾರ್ಸ್ ಪ್ರೈ. ಲಿ.

ರಾಷ್ಟ್ರೋತ್ಥಾನ ಪರಿಷತ್ತಿನ ಕಾರ್ಯಕಲಾಪಗಳು ತಿಳಿದುಬಂದವು. ಮಕ್ಕಳ ಪುಸ್ತಕಗಳನ್ನು ಪ್ರಕಟಿಸುವ ವಿಚಾರ ಪ್ರಶಂಸನೀಯ. ನಿಮ್ಮ ಕಾರ್ಯಕ್ಕೆ ಸಂಪೂರ್ಣ ಯಶಸ್ಸು ಕೋರುವೆ.

**ಶ್ರೀ ಎ. ಎಸ್. ವ[illegible] ಗಳು**

....ಈಗಿನ ಯೋಜನೆಯು ಸ್ವಾಗತಾರ್ಹವೂ ಪ್ರಶಂಸನೀಯವೂ ಆಗಿದೆ...ಈ ಪುಸ್ತಕಗಳನ್ನು ಎಲ್ಲ ಮಕ್ಕಳೂ ಕಡ್ಡಾಯವಾಗಿ ಓದುವಂತಾಗಲು ಅವುಗಳಲ್ಲಿ ಕೆಲವನ್ನು ಪ್ರಾಥಮಿಕ ಶಾಲೆಗಳಿಗೆ ಪಠ್ಯಪುಸ್ತಕಗಳನ್ನಾಗಿ ಮಾಡಲು ಪ್ರಯತ್ನಿಸಬೇಕೆಂಬುದು ನನ್ನ ಸಲಹೆ.

**ಪದ್ಮಭೂಷಣ ಡಾ|| ಎಂ. ಸಿ. ಮೋದಿ, ನೇತ್ರತಜ್ಞರು**

ರಾಷ್ಟ್ರೋತ್ಥಾನ ಪರಿಷತ್ತು ಮಾನವ ಜನಾಂಗಕ್ಕೂ ರಾಷ್ಟ್ರಕ್ಕೂ ಬಹಳ ಅಮೂಲ್ಯ ಸೇವೆ ಸಲ್ಲಿಸುತ್ತಿದೆ. ಅದಕ್ಕೆ ಸಂಬಂಧಪಟ್ಟವರೆಲ್ಲರಿಗೂ ನನ್ನ ಅಭಿನಂದನೆಗಳು. ರಾಷ್ಟ್ರೋತ್ಥಾನ ಪರಿಷತ್ತು ಏಳಿಗೆ ಹೊಂದಲಿ, ಸಮೃದ್ಧವಾಗಲಿ. ಮಾನಸಿಕ ರೋಗಕ್ಕೆ ತುತ್ತಾಗಿರುವ ಜಗತ್ತಿಗೆ ಇಂಥ ಕಾರ್ಯದ ಮೂಲಕ ಒಳಗಣ್ಣು ತೆರೆಸಬೇಕಾಗಿದೆ.

## ಭಾರತ-ಭಾರತಿ ಚೊಚ್ಚಲ ಹುಟ್ಟುಹಬ್ಬ-ಒಂದು ಮೈಲಿಗಲ್ಲು

ನವೆಂಬರ್ ೪, ೧೯೭೩.

ಒಂದು ವರ್ಷದ ಕಾಲಚಕ್ರ ಉರುಳಿತು. ಯೋಜನೆಯಂತೆ ೬೦ ಪುಸ್ತಕ ಹೊರ ಬಂತು. ಎಲ್ಲಾಕಡೆಯಿಂದ ಒಳ್ಳೆ ಪ್ರತಿಕ್ರಿಯೆ ಬಂತು. ಕನ್ನಡ ಜನ ನಮ್ಮ ಬೆನ್ನು ತಟ್ಟಿದರು. ಭಾರತ-ಭಾರತಿಯ ಚೊಚ್ಚಲ ಹುಟ್ಟುಹಬ್ಬ ಕಳೆಕಳೆಯಾಗಿ, ಸಿರಿಸಿರಿ ಸಾರಸ್ವತ ಹಬ್ಬವಾಗಿ ನಡೆಯಿತು.

ಮೊದಲ ಹುಟ್ಟುಹಬ್ಬ ಒಂದು ವಿಶಿಷ್ಟ ರೀತಿಯಲ್ಲಿ ಆಚರಣೆ. ಬೆಂಗಳೂರಿನ 'ವಣ್ಣಾರಪೇಟೆ'ಯ ಬಡಮಕ್ಕಳಿಗೆ ಶ್ರೀ ಶ್ರೀ ಪೇಜಾವರ ಶ್ರೀಗಳು ಉಚಿತವಾಗಿ ಭಾರತ-ಭಾರತಿ ಪುಸ್ತಕ ಹಂಚಿದರು. ಭಾರತ-ಭಾರತಿ ಬಳಗ ಅವರಲ್ಲಿಗೇ ಹೋಯಿತು. ಶಾಲೆಗಳ ಸಾವಿರಾರು ಮಕ್ಕಳು ಸೇರಿದರು. ಎಲ್ಲರ ಮುಖದಲ್ಲೂ ಗೆಲುವು, ನಲಿವು. ಡಾ|| ಎಚ್. ನರಸಿಂಹಯ್ಯ, ಆಗಿನ ವಿದ್ಯಾಮಂತ್ರಿ ದಿ|| ಎಂ. ಮಲ್ಲಿಕಾರ್ಜುನಸ್ವಾಮಿ ಸಮಾರಂಭದಲ್ಲಿ ಭಾಗವಹಿಸಿದ್ದರು.

ಅದೇ ಸಂಜೆ ನಗರದ ಪುರಭವನದಲ್ಲಿ ಸುಂದರ ಸಮಾರಂಭ. "ಭಾರತ-ಭಾರತಿ ಪುಸ್ತಕವಲ್ಲ, ಪೂಜೆ" ಎಂದರು ಮಕ್ಕಳ ಸಾಹಿತ್ಯದ ಪಿತಾಮಹ ಶ್ರೀ ಜಿ. ಪಿ. ರಾಜರತ್ನಂ. 'ಮಾನಸಿಕ ಪ್ರೋಟೀನ್' ಎಂದರು ರಾ.ಶಿ. "ವಿಶ್ವವಿದ್ಯಾಲಯಕ್ಕಿಂತ ಹೆಚ್ಚಿನ ಕೆಲಸ ಇದು" ಎಂದು ಹೇಳಿದರು ಪ್ರೊ|| ದೇ. ಜವರೇಗೌಡ.

## ಭಾರತ-ಭಾರತಿ ಇಂಗ್ಲಿಷ್ ಪುಸ್ತಕಗಳ ಪ್ರಕಾಶನ

ಚೊಚ್ಚಲ ಹುಟ್ಟುಹಬ್ಬದ ಸವಿನೆನಪಿಗಾಗಿ ಭಾರತ-ಭಾರತಿ ಇಂಗ್ಲಿಷ್ ಪ್ರಕಾಶನ ಪ್ರಾರಂಭ. ಖ್ಯಾತ ಸಮಾಜಸೇವಕಿ ಶ್ರೀಮತಿ ಸುಧಾ ವಿ. ರೆಡ್ಡಿಯವರಿಂದ

ಮೊದಲ ಕಂತಿನ ೫ ಪುಸ್ತಕಗಳ ಬಿಡುಗಡೆ. ಕರ್ನಾಟಕದಿಂದ ಅನ್ಯ ರಾಜ್ಯಗಳಿಗೆ ಭಾರತ-ಭಾರತಿಯ ಪ್ರಯಾಣ.ಎಲ್ಲಾ ಕಡೆ ಒಳ್ಳೆ ಸ್ವಾಗತ.ಇದುವರೆಗೆ ೭೯ ಪುಸ್ತಕಗಳ ಪ್ರಕಟಣೆ. ಈ ಪುಸ್ತಕಗಳ ಖ್ಯಾತಿ ಕರ್ನಾಟಕದ ಗಡಿ ದಾಟಿ, ಸೋದರ ರಾಜ್ಯಗಳಿಗೂ ವಿಸ್ತರಿಸಿದೆ. ಭಾರತ–ಭಾರತಿ ಮುಂಬಯಿ, ಹೈದರಾಬಾದ್ ಮುಂತಾದ ನಗರಗಳಲ್ಲಿ ಕಾಲಿಟ್ಟಿತು. ಸಂಭ್ರಮದ ಸಮಾರಂಭಗಳಲ್ಲಿ ಖ್ಯಾತನಾಮರು ಭಾಗವಹಿಸಿ ಬಿಡುಗಡೆ ಮಾಡಿದರು. ಅಷ್ಟೇ ಅಲ್ಲದೆ ಭಾರತದ ಗಡಿಗಳನ್ನೂ ದಾಟಿ ಇಂಗ್ಲೆಂಡ್, ಕೆನಡಾ, ಮಾರಿಷಸ್, ಅಮೆರಿಕಾದ ಸಂಯುಕ್ತ ಸಂಸ್ಥಾನಗಳು, ಟಾಂಜಾನಿಯಾ, ದಕ್ಷಿಣ ಆಫ್ರಿಕಾ, ವೆಸ್ಟ್‌ಇಂಡೀಸ್, ಕೀನ್ಯಾ, ನೇಪಾಳ, ಫಿಜಿ, ಘಾನಾ ದೇಶಗಳಲ್ಲಿರುವ ಭಾರತೀಯರಿಗೂ ಮುಟ್ಟಿದೆ.

### ಹಿಂದಿ-ಮರಾಠಿ ಭಾರತ-ಭಾರತಿ

ಮಹಾರಾಷ್ಟ್ರದ ನಾಗಪುರದ ಬಾಬಾಸಾಹೇಬ್ ಆಪ್ಟೆ ಸ್ಮಾರಕ ಸಮಿತಿ ವತಿಯಿಂದ ಹಿಂದಿ, ಮರಾಠಿ ಪುಸ್ತಕಗಳ ಪ್ರಕಾಶನ. ಶ್ರೀ ಕೆ. ಆರ್. ರಂಗನಾಥರಾವ್ ಇದರ ಸಂಯೋಜಕರು. ಇವರ ನಿಷ್ಠೆ, ಪರಿಶ್ರಮ, ಸೇವೆ, ಚೊಕ್ಕವಾದ ವ್ಯವಸ್ಥೆಯಿಂದ ಪ್ರಕಾಶನ ಚೆನ್ನಾಗಿ ಮುಂದುವರಿಯುತ್ತಿದೆ. ಏಕೈಕವ್ಯಕ್ತಿ ಎಷ್ಟೆಲ್ಲಾ ಕೆಲಸ ಮಾಡುತ್ತಾರೆ ಎಂಬುದಕ್ಕೆ ಶ್ರೀ ರಂಗನಾಥರಾವ್ ಅವರನ್ನು ನೋಡಬೇಕು. ಶ್ರೀ ಸತ್ಯಪಾಲ್ ಪಟಾಯಿತ್ ಹಿಂದಿ ಅವತರಣಿಕೆಯ ಸಂಪಾದಕರು.

ನಾಗಪುರದಲ್ಲಿ ೨೪–೪–೧೯೭೪ ರಂದು ರಾ. ಸ್ವ. ಸಂಘದ ಸರಸಂಘಚಾಲಕರಾದ ಸನ್ಮಾನ್ಯ ಶ್ರೀ ಬಾಳಾಸಾಹೇಬ್ ದೇವರಸ್ ಅವರು ಭಾರತ–ಭಾರತಿ ಹಿಂದೀ ಪುಸ್ತಕಮಾಲೆಯ ಕಾರ್ಯಾಲಯವನ್ನು ಉದ್ಘಾಟಿಸಿ ಭಾರತ-ಭಾರತಿಗೆ ಆಶೀರ್ವದಿಸಿದರು. ಈಗಲೂ ಅವರ ಪ್ರೇರಣೆಯಿಂದ ಈ ಕಾರ್ಯ ಮುಂದುವರಿಯುತ್ತಿದೆ. ಕೆಲವು ಪ್ರಕಟಣೆಗಳು ಅವರ ಶುಭ ಸಮ್ಮುಖದಲ್ಲೂ ಬಿಡುಗಡೆಯಾದವು.

ಶ್ರೀ ಸುರೇಶ ದತ್ತಾತ್ರೇಯ ದೇಶಪಾಂಡೆ ಮರಾಠಿ ಪುಸ್ತಕಮಾಲೆಯ ಸಂಪಾದಕರು.

### ಭಾರತ - ಭಾರತಿ (ಇಂಗ್ಲಿಷ್) ಪುಸ್ತಕಗಳನ್ನು ಕುರಿತು ಪತ್ರಿಕೆಗಳು ಏನು ಹೇಳುತ್ತವೆ?

Let us hope that many more such series would come out so as to water the pleasure-garden of India, where many beautiful flowers are yet to blossom and spread their fragrance everywhere.

**— Yuva Bharati**

ವಿವೇಚನಾಶೀಲರು ಇಂಥ ಗ್ರಂಥಗಳನ್ನು ಮುಕ್ತಹೃದಯದಿಂದ ಸ್ವಾಗತಿಸುತ್ತಾರೆ.

— ಉದಯವಾಣಿ

The books provide valuable peeps into the manifold channels of expression of the mighty national genius of our motherland.

— **Vedanta Kesari**

.... such books would be worth waiting for, even for the grown-ups.

— **Hitawada**

'ಒಬ್ಬ ವ್ಯಕ್ತಿಯ ಬಗ್ಗೆ ಇಷ್ಟು ಹೇಳಿದರೆ ಸಾಕೆ?' ಎನ್ನುವ ಪ್ರಶ್ನೆಗೆ ಅವಕಾಶವಿಲ್ಲದಂತೆ ವ್ಯಕ್ತಿಚಿತ್ರಣ ನಡೆಸಿರುವುದು ಮೆಚ್ಚತಕ್ಕ ವಿಷಯ.

— ಕನ್ನಡನುಡಿ

Their value lies in the much-needed moral nourishment to preserve national character.

— **Deccan Herald**

ತಂದೆ, ತಾಯಿ, ಉಪಾಧ್ಯಾಯ ಇವರುಗಳು ಈ ಪುಸ್ತಕಗಳನ್ನು ಉಪಯೋಗಿಸಿ ಪಾಠ ಹೇಳಬೇಕು.

— **ಸಂಯುಕ್ತ ಕರ್ನಾಟಕ**

They are the books which instil a sense of pride among the children about their forbears.

— **Nagpur Times**

ಎಲ್ಲ ಪುಸ್ತಕಗಳಲ್ಲಿ ನಯವಾದ ಕತೆಗಾರಿಕೆ ಮೂಡಿಬಂದಿದೆ .... ಮಕ್ಕಳ ಮನಸ್ಸಿನಲ್ಲಿ ವಿಷಯಗಳು ನೆಲೆಯೂರಿ ನಿಲ್ಲುವುದಕ್ಕೆ ಸಹಾಯವಾಗುತ್ತದೆ.

— **ಕನ್ನಡಪ್ರಭ**

## ಮಕ್ಕಳ ಕೈಗೆ ಸರಸ್ವತಿ

ನವೆಂಬರ್ ೧೭, ೧೯೭೪.

ದ್ವಿತೀಯ ವಾರ್ಷಿಕೋತ್ಸವ, ತೃತೀಯ ವರ್ಷಾರಂಭ. ಅಂದು ಭಾರತ-ಭಾರತಿ ಪುಸ್ತಕ ಮಹಾದಾನ ಚಳವಳಿಯ ಉದ್ಘಾಟನೆ. ಭಾರತ-ಭಾರತಿಯ ಈ ಮುದ್ದಾದ

ಪುಸ್ತಕಗಳು ಅಸಂಖ್ಯಾತ ಮಕ್ಕಳ ಕೈಗೆ ಸಿಗುವಂತಾಗಬೇಕು. ಸಮಾಜದ ಎಲ್ಲ ವರ್ಗ ಪಂಗಡಗಳ, ನಾಡಿನ ಎಲ್ಲ ಜಿಲ್ಲೆ-ಎಲ್ಲೆಗಳ ಎಳೆಯರ ಕೈಯಲ್ಲೂ ಈ ಪುಸ್ತಕವನ್ನು ಇಡಬೇಕು. ಇದು ಈ ಚಳವಳಿಯ ಉದ್ದೇಶ. ಯಾರು ಎಷ್ಟು ದಾನವನ್ನು ನೀಡಿದರೆ ಅಷ್ಟೇ ಹಣವನ್ನು ರಾಷ್ಟ್ರೋತ್ಥಾನ ಪರಿಷತ್ ಅದಕ್ಕೆ ಸೇರಿಸುತ್ತದೆ. ಒಟ್ಟು ಮೊತ್ತದ ಭಾರತ-ಭಾರತಿ ಪುಸ್ತಕಗಳನ್ನು ಹಿಂದುಳಿದ ಸಮಾಜವರ್ಗಗಳ ಮಕ್ಕಳಿಗೆ ಹಂಚುತ್ತದೆ. ಇದೊಂದು ವಿನೂತನ ಯೋಜನೆ. ಖ್ಯಾತ ಕೈಗಾರಿಕೋದ್ಯಮಿ ಮತ್ತು ಮೈಸೂರು ಸಿಮೆಂಟ್ಸ್ ಕಂಪೆನಿಯ ಅಧ್ಯಕ್ಷರಾದ ಶ್ರೀ ಹಮೀರ್‌ವಾಸಿಯಾ ಚಳವಳಿಯನ್ನು ಉದ್ಘಾಟಿಸಿದರು.

ಈ ವಿನೂತನ ಯೋಜನೆಗೆ ಎಲ್ಲರಿಂದ ಮೆಚ್ಚಿಕೆ ಸಿಕ್ಕಿತು, ಎಲ್ಲಾ ಕಡೆಯಿಂದ ಪ್ರೋತ್ಸಾಹ ದೊರಕಿತು. ಸಹಸ್ರಾರು ವ್ಯಕ್ತಿಗಳಲ್ಲದೆ ಸಂಘ ಸಂಸ್ಥೆಗಳು, ವಿಶ್ವಸ್ತ ನಿಧಿಗಳು, ಪುರಸಭೆ, ತಾಲ್ಲೂಕು ಅಭಿವೃದ್ಧಿ ಮಂಡಲಿ, ಗ್ರಾಮಪಂಚಾಯತಿ, ಸಹಕಾರಿ ಸಂಸ್ಥೆಗಳು, ಧಾರ್ಮಿಕ ಪೀಠಗಳು, ರೋಟರಿ, ಲಯನ್ಸ್ ಮೊದಲಾದ ಸೇವಾಸಂಸ್ಥೆಗಳು ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳು ಅಪರಿಮಿತ ಉತ್ಸಾಹ ತೋರಿಸಿದವು. ಸಹಸ್ರಾರು ರೂ.ಗಳ ದಾನ ಸಿಕ್ಕಿತು. ಚಳವಳಿ ಎಲ್ಲಾ ಕಡೆ ವ್ಯಾಪಕವಾಗಿ ಹಬ್ಬಿತು. ನೂರಾರು ಕಡೆ ಗಣ್ಯವ್ಯಕ್ತಿಗಳು ಚಳವಳಿಯಲ್ಲಿ ಸಂತೋಷದಿಂದ ಭಾಗವಹಿಸಿದರು. ಇದುವರೆಗೆ ಸುಮಾರು ಎರಡುಲಕ್ಷ ಭಾರತ–ಭಾರತಿ ಪುಸ್ತಕಗಳನ್ನು ಹೀಗೆ ಹಂಚಿ ರಾಷ್ಟ್ರೋತ್ಥಾನ ಪರಿಷತ್ತು ವಿಕ್ರಮ ಸ್ಥಾಪಿಸಿದೆ.

## ವ್ಯವಸ್ಥಿತ ಮಾರಾಟ

ಭಾರತ-ಭಾರತಿಗೆ ಕರ್ನಾಟಕಾದ್ಯಂತ ಮೂಲೆ ಮೂಲೆಗಳಿಂದ ಏಜೆಂಟರು ನಿಯುಕ್ತರಾದರು. ಎಲ್ಲರೂ ವ್ಯಾಪಾರ ಮನೋಭಾವಕ್ಕಿಂತ ಸೇವಾ ಮನೋಭಾವದಿಂದ ಸಕ್ರಿಯವಾಗಿ ಕೆಲಸ ಮಾಡಿದರು. ಒಂದು ವಿಶೇಷ ಸಂಗತಿ ಇಲ್ಲಿ ಉಲ್ಲೇಖನೀಯ. ಶಾಲಾ ಅಧ್ಯಾಪಕರು ತಮ್ಮ ಬಿಡುವಿನ ಸಮಯದಲ್ಲಿ ಭಾರತ-ಭಾರತಿಯ ಪ್ರಚಾರ ಕೈಗೊಂಡರು. ಪ್ರಾರಂಭದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಬಿರುಸಿನಿಂದ ಮಾರಾಟವಾಯಿತು. ಭಾರತ-ಭಾರತಿ ಪುಸ್ತಕಗಳನ್ನು ಮನೆ ಮನೆಗೆ ಕೊಂಡೊಯ್ದು ಎಲ್ಲರ ಕೈಗೆ ಸಮರ್ಥವಾಗಿ ಮುಟ್ಟಿಸಿದ ನಮ್ಮ ಏಜೆಂಟರುಗಳಿಗೆ ಚಿನ್ನ-ಬೆಳ್ಳಿ ಪದಕಗಳ ವಿತರಣೆಯೂ ಆಯಿತು.

ನಮ್ಮ ಕಾರ್ಯಾಲಯದಿಂದ ಏಜೆಂಟರುಗಳಿಗೆ ಕಾಲಕಾಲಕ್ಕೆ ಸುತ್ತೋಲೆ, ಜಾಹಿರಾತು ಸಾಮಗ್ರಿ, ಪುಸ್ತಕ, ಇತ್ಯಾದಿ ತಲಪುತ್ತಿತ್ತು. ನಮ್ಮ ವ್ಯವಸ್ಥಿತ ಮಾರಾಟದ ಕ್ರಮ ಅನೇಕರಿಗೆ ಅಚ್ಚರಿ.

## ಲೇಖಕರ ಸ್ನೇಹಮೇಳ

ಪತ್ರಮುಖೇನ ಲೇಖಕ–ಪ್ರಕಾಶಕರ ಸಂಬಂಧ ಗಾಢ. ಪರಸ್ಪರ ಭೇಟಿ, ವಿಚಾರ ವಿನಿಮಯಕ್ಕೆ ಇಬ್ಬರದೂ ಕಾತರ.

೨೨–೬–೧೯೭೫ರಂದು ಬೆಂಗಳೂರಿನ 'ಶ್ರೀ ಶಾರದಾ ಪ್ರಸಾದ'ದಲ್ಲಿ ಸರಸ್ವತೀ ಪುತ್ರರ ಸಮಾಗಮ. ಲೇಖಕ–ಸಂಪಾದಕ–ಪ್ರಕಾಶಕರ ತ್ರಿವೇಣೀ ಸಂಗಮ ಅದು. ದೂರದ ಊರುಗಳಿಂದ ಬಂದಿಳಿದರು, ಪರಸ್ಪರ ಮುಖ ಪರಿಚಯದಿಂದ ಆನಂದ ಗೊಂಡರು. ಬೆಳಗ್ಗೆಯಿಂದ ಸಂಜೆಯವರೆಗೆ ಒಟ್ಟಿಗೆ ಸೇರಿ ವಿಚಾರ ವಿನಿಮಯ ನಡೆಯಿತು. 'ಪ್ರತಿ ವರ್ಷ ಹೀಗೆ ಸೇರೋಣ' ಎಂದರು. 'ಪ್ರಕಾಶಕರಿಗೆ ನೀವು ಮಾದರಿ' ಎಂದು ಬೆನ್ನುತಟ್ಟಿದರು. "ಸಕಾಲಕ್ಕೆ ನಿಮ್ಮಿಂದ ಗೌರವಧನ, ಸಾಲದ್ದಕ್ಕೆ ಪ್ರತಿವರ್ಷ 'ಅಭಿನಂದನಾ ಧನ' ಬೇರೆ. ಯಾರ್‍ರೀ ಕೊಡ್ತಾರೆ?" ಎಂದರು. ಆದರೆ "ನಿಮ್ಮ ಸಂಪಾದಕೀಯದವರು ತುಂಬಾ ಚುರುಕಪ್ಪಾ. ನಮ್ಮಿಂದ ಹಸ್ತಪ್ರತಿ ಬಾರದಿದ್ದರೆ ತಪ್ಪದೇ ತಾರೀಖಿಗೆ ಸರಿಯಾಗಿ 'ನೋಟೀಸ್' ಕಳುಹಿಸಿಬಿಡುತ್ತಾರೆ. ಇಲ್ಲವೇ ಅವರೇ ಬಂದುಬಿಡುತ್ತಾರೆ. ನಮಗೇ ಸಂಕೋಚವಾಗಿ ಹಸ್ತಪ್ರತಿ ಕೊಡಬೇಕಾಗುತ್ತದೆ" ಎಂದು ಪ್ರೀತಿಯಿಂದ 'ಬೈದರು.' "ಕನ್ನಡದಲ್ಲಿ ಈ ರೀತಿಯ ಪ್ರಕಾಶಕರು ತುಂಬಾ ವಿರಳ" ಎಂದರು. ಇದೇ ರೀತಿಯ ಸ್ನೇಹಮೇಳ ೧೯೭೮ರ ಡಿಸೆಂಬರ್ ೩೧ರಂದು ಮತ್ತೊಮ್ಮೆ ನಡೆಯಿತು.

## ಅಭಿನಂದನೆ - ಕೃತಜ್ಞತೆ

['ಭಾರತ–ಭಾರತಿ ಪುಸ್ತಕ ಸಂಪದ'ಕ್ಕೆ ಎರಡು ವರ್ಷ ತುಂಬಿತು. ಎರಡನೆ ವರ್ಷದಲ್ಲಿ ಕಾಲಿಡುತ್ತಿದ್ದ ಶುಭ ಸಂದರ್ಭದಲ್ಲಿ ಪ್ರಥಮ ವರ್ಷದ ಪುಸ್ತಕಗಳ ಎಲ್ಲ ಲೇಖಕರಿಗೂ 'ಅಭಿನಂದನಾ ಧನ'ವನ್ನು ಅರ್ಪಿಸಲಾಯಿತು. ಆ ಬಗೆಗೆ ಲೇಖಕರು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿ ರಾಷ್ಟ್ರೋತ್ಥಾನ ಪರಿಷತ್ತನ್ನು ಹುರಿದುಂಬಿಸಿದ್ದಾರೆ.]

ಮುದ್ರಣ ಕಾಗದ ಹಾಗೂ ಉಳಿದ ಸಾಧನ ಸಲಕರಣೆಗಳ ವಿಪರೀತ ಬೆಲೆ ಏರಿಕೆಯ ಬಿಕ್ಕಟ್ಟಿನ, ಮುಗ್ಗಟ್ಟಿನ ಹಿನ್ನೆಲೆಯಲ್ಲಿ ನೀವು ಲೇಖಕರಿಗೆ ಉದಾರವಾಗಿ ಧನವನ್ನೀಯುತ್ತಿರುವುದು ನಿಮಗಿಂತಲೂ ಆರ್ಥಿಕವಾಗಿ ಭದ್ರಸ್ಥಿತಿಯಲ್ಲಿರುವ ಪ್ರಕಾಶಕರಿಗೆ ಅನುಕರಣೀಯ ಉದಾಹರಣೆ.

— ಪಿ. ಎಂ. ಗಲಗಲಿ

ಅನಿರೀಕ್ಷಿತವಾಗಿ ನಿಮ್ಮ 'ಅಭಿನಂದನಾ ಧನ' ಬಂದಾಗ, ಒಂದು ಕ್ಷಣ ನನ್ನ ಕಣ್ಣು ಒದ್ದೆಯಾದವು.

— ಅರ್ಚಕ ವೆಂಕಟೇಶ

ಮಾತು ಮೂಕವಾಗಿದೆ. ತಮ್ಮಗಳ ಈ ಕೃತಜ್ಞತೆಗೆ ನನ್ನ ಕೃತಜ್ಞ, ಕೃತಜ್ಞ, ಕೃತಜ್ಞ. ತಮ್ಮ ಈ ನಿಷ್ಠೆಯಿಂದ 'ನಾಡು ನುಡಿ' ಭದ್ರಂ, ಶುಭಂ, ಮಂಗಳಂ.

— **ಸವ್ಯಸಾಚಿ**

ಭಾರತೀಯ ಸಂಸ್ಕೃತಿಯ ಸತ್ಪ್ರಾತಿನಿಧ್ಯವನ್ನು ಸಂಸ್ಥೆಯು ಸರಿಯಾಗಿ ನಿರ್ವಹಿಸುತ್ತಿರುವುದಕ್ಕೆ ಸಾಕ್ಷಿ – ಈ ಸಾಹಿತ್ಯ ಮತ್ತು ಸಾಹಿತಿಗಳ ಮೇಲಿನ ಆದರಾಭಿಮಾನಗಳು.

— **'ಕೈಪು' ಲಕ್ಷ್ಮೀನರಸಿಂಹಶಾಸ್ತ್ರೀ**

ಲೇಖಕರನ್ನು ಈ ಹಿಂದೆ ಇಷ್ಟರಮಟ್ಟಿಗೆ ಪರಾಂಬರಿಸಿದ್ದು ನಾನು ಅರಿಯೆ.

— **ಶ್ರೀನಿವಾಸ ಹಾವನೂರ**

ಈ ರೀತಿಯ ಹೊಸತನ, ಸೌಜನ್ಯ-ಅಭಿಮಾನ, ಅಕ್ಕರೆ, ಲೇಖಕರ ಬಗ್ಗೆ ಅಪರಿಮಿತ ಪ್ರೀತಿ ವಿಶ್ವಾಸಗಳು—ಇವೆಲ್ಲ ಈ ಸಂಸ್ಥೆಯ ವಿಶೇಷ ಲಕ್ಷಣಗಳು. "ಧೀದೇವಿ, ಶ್ರೀದೇವಿ"–ಇಬ್ಬರೂ ಕೋಟಿಕೋಟಿ ಕನ್ನಡಿಗರ ಈ ಅಚ್ಚುಮೆಚ್ಚಿನ ಸಂಸ್ಥೆಗೆ ಅನವರತ ಶುಭವ ಹರಸಲಿ.

— **ಬ. ನ. ಗುಂಡೂರಾವ್**

ಮಕ್ಕಳ ಜ್ಞಾನಸಂಪದವನ್ನು ತುಂಬುತ್ತಿರುವ ಸಾಹಿತ್ಯ ಭಂಡಾರಕ್ಕೆ ಅಕ್ಷರಗಳನ್ನೊದಗಿಸುತ್ತಿರುವವರಿಗೆ ದ್ವಿಗುಣ, ತ್ರಿಗುಣವಾಗಿ ಸಂಭಾವನೆ ಸಲ್ಲುತ್ತಿದೆ. ಅದರ ಜೊತೆಗೆ 'ಅಭಿನಂದನಾ' ಪುರಸ್ಕಾರವನ್ನು ಬೇರೆ ಸಲ್ಲಿಸುತ್ತಿದ್ದೀರಲ್ಲಾ! ಈ ಔದಾರ್ಯ ವಿಸ್ಮಯಕಾರಕವಾಗಿದೆ, ನನಗಂತೂ ಇದು ಹೇಗಾದರೂ ಇಳಿಸಿಕೊಳ್ಳಬೇಕಾದ ಹೊರೆ ಅನ್ನಿಸಿದೆ.

— **ತಿರುಮಲೆ ರಾಜಮ್ಮ ( ಭಾರತಿ )**

ನಿಮ್ಮ ಸಂಸ್ಥೆಯ ಸದುದ್ದೇಶ ಪ್ರಾಮಾಣಿಕತೆಗಳಿಗೆ ಇದು ಹೆಗ್ಗುರುತು.

— **ಎನ್. ರಂಗನಾಥಶರ್ಮಾ**

ಹೃದಯ ತುಂಬಿ ಬಂತು. ಲೇಖಕರ ಬಗ್ಗೆ ತಾವು ತಾಳಿರುವ ಅಭಿಮಾನ, ಗೌರವಕ್ಕೆ ಕೃತಜ್ಞತೆಗಳು.

— **ಗೋಪಾಲರಾವ ಹೇಜೀಬ**

ನಿಮ್ಮ ಈ 'ಅಭಿನಂದನಾ ಧನ'ವು ಅನಿರೀಕ್ಷಿತ, ಅಪ್ರಾರ್ಥಿತ, ಔದಾರ್ಯದ ಕೊಡುಗೆ.

—**ಎಂ. ವಿ. ಸೀತಾರಾಮಯ್ಯ**

ಪ್ರಥಮ ವರ್ಷದ ಎಲ್ಲ ಲೇಖಕರಿಗೂ 'ಅಭಿನಂದನಾ ಧನ'ವನ್ನು ಕಳುಹಿಸಿ ತಾವು ಕನ್ನಡ ಸಾಹಿತ್ಯ ಪ್ರಕಟನಾ ಕ್ಷೇತ್ರದಲ್ಲಿ ಹೊಸತನವನ್ನು ನಿರ್ಮಿಸಿದ್ದೀರಿ.

—**ಎಚ್. ಎಸ್. ಪಾಂಡುರಂಗ ಜೋಯಿಸ್**

ಅನಿರೀಕ್ಷಿತ–ಅನಪೇಕ್ಷಿತ ಆದರೂ ಇದು ಸಹೃದಯತೆಯ ವಿಲಕ್ಷಣ ವ್ಯಾಪಾರ. ಇದರಲ್ಲಿ ಧನವಿದ್ದರೂ ಅದಕ್ಕಿಂತ ಧನ್ಯತೆಯ ಹೆಗ್ಗಳಿಕೆಯೇ ಹೆಚ್ಚು.

—ಅಯ್ಯರ್ ಶ್ರೀರಾಮಶರ್ಮಾ

ಲೇಖಕರಿಗೆ ಈ ಬಗೆಯ ಪ್ರೇಮ ವಿಶ್ವಾಸಗಳನ್ನು ತೋರಿಸಿ ನಿಃಸ್ವಾರ್ಥ ಭಾವವನ್ನು ಮೆರೆದಿರುವ 'ಭಾರತ–ಭಾರತಿ ಪುಸ್ತಕ ಸಂಪದ'ವು ಪ್ರಕಾಶನ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡಿದೆ.

—ಬಿ. ಎಸ್. ಪಾಂಡುರಂಗರಾವ್

ವ್ಯವಹಾರ ರೀತ್ಯಾ ಸಲ್ಲಿಸಬೇಕಾದದ್ದನ್ನು ಕ್ಲುಪ್ತವಾಗಿ ಪಾವತಿಸಿದ ಬಳಿಕವೂ ಈ ಹೆಚ್ಚಿನ ಮೊಬಲಗನ್ನು ನೀಡಿರುವ ನಿಮ್ಮ ಹಿರಿತನವನ್ನು ಮೆಚ್ಚುತ್ತೇನೆ.

—ಜಿ. ಟಿ. ನಾರಾಯಣರಾವ್

ಒಂದು ಸಣ್ಣ ಪುಸ್ತಕಕ್ಕಾಗಿ ಲೇಖಕರಿಗೆ ಇಷ್ಟೊಂದು ಪ್ರೋತ್ಸಾಹ ಸಂಭಾವನೆ ಕೊಡುತ್ತಿರುವ ಪ್ರಕಾಶಕರಿರುವುದು ಕನ್ನಡನಾಡಿನ ಸೌಭಾಗ್ಯವೇ ಸರಿ.

—ಡಾ॥ ವೈ. ಎಸ್. ಲೂಯಿಸ್

ಸಾಮಾನ್ಯವಾಗಿ ಗುರು–ಶಿಷ್ಯ, ರೋಗಿ–ವೈದ್ಯ ಇವರುಗಳ ಸಂಬಂಧದ ಬಗ್ಗೆ ಇರುವ ನಾಣ್ಣುಡಿಯ ಸಾಲಿಗೇ ಸೇರುವ ದೃಷ್ಟಾಂತಗಳಲ್ಲಿ ಪ್ರಕಾಶಕ–ಲೇಖಕರ ಸಂಬಂಧವೂ ಒಂದೆಂದು ಹೇಳಬಹುದು. ಹಾಗಿರುವಾಗ ಹಳೆಯ ಆ ನಡವಳಿಕೆಗೆ ವಿರುದ್ಧವಾದ ನಿಮ್ಮ ವರ್ತನೆ ನೋಡಿ ಆಶ್ಚರ್ಯವಾಯಿತು.

—ಎಂ. ಕೆ. ಭಾರತೀರಮಣಾಚಾರ್ಯ

ನಿಮ್ಮ ಸಂಸ್ಥೆಯಂತಹ ವಿಶಾಲ ಮನೋಭಾವನೆಯುಳ್ಳ ಪ್ರಕಾಶನ ಸಂಸ್ಥೆಯ ಪ್ರಾಮಾಣಿಕತೆ ಉಳಿದವರಿಗೆ ಮಾದರಿಯಾಗಿದೆ.

—ಸಿ. ಎನ್. ಜಯಲಕ್ಷ್ಮೀದೇವಿ

ತಮ್ಮ ಉದಾರ ನೀತಿ ಹಾಗೂ ಧಾರಾಳ ಸ್ವಭಾವಕ್ಕೆ ಧನ್ಯವಾದಗಳು.

—ಎಚ್. ವಿ. ಶ್ರೀನಿವಾಸಮೂರ್ತಿ

ಈ 'ಅಭಿನಂದನಾ ಧನ'ದ ಕೊಡುಗೆ ಕನ್ನಡದ ಮಟ್ಟಿಗಂತೂ ಇದೇ ಪ್ರಥಮ.

—ಎನ್ಕೆ

**[' ಭಾರತ–ಭಾರತಿ ಪುಸ್ತಕ ಸಂಪದ 'ಕ್ಕೆ ಎರಡು ವರ್ಷ ತುಂಬಿತು. ಮೂರನೇ ವರ್ಷದ ಹೆಜ್ಜೆ ಇಡುತ್ತಿದ್ದ ಶುಭ ಸಂದರ್ಭದಲ್ಲಿ ಎರಡನೇ ವರ್ಷದ ಪುಸ್ತಕಗಳನ್ನು ಬರೆದ ಎಲ್ಲ ಬರಹಗಾರರಿಗೂ ' ಅಭಿನಂದನಾ ಧನ'ವನ್ನು ಅರ್ಪಿಸಲಾಯಿತು. ಬರಹಗಾರರು ತಮ್ಮ ಕೃತಜ್ಞತೆಯನ್ನು, ಸಂತೋಷವನ್ನು ವ್ಯಕ್ತಪಡಿಸಿ ರಾಷ್ಟ್ರೋತ್ಥಾನ ಪರಿಷತ್ತನ್ನು ಹರಸಿದ್ದಾರೆ.]**

ಇದು ನನಗೆ ಅನಿರೀಕ್ಷಿತವಾದುದು. ಕೇವಲ ಕಾನೂನು ದೃಷ್ಟಿಯಿಂದ ಲೇಖಕನಿಗೆ ಈ ಸಂಭಾವನೆಯನ್ನು ನೀವು ಕೊಡಬೇಕಾಗಿಲ್ಲವಾಗಿದ್ದರೂ ಅದನ್ನು ನೀವು ನೀಡಿರುವುದು ಪ್ರಕಾಶನ ಉದ್ಯಮದಲ್ಲಿ ಲೇಖಕನ ಪಾತ್ರದ ಪ್ರಾಮುಖ್ಯವನ್ನು ನೀವು ಕಂಡುಕೊಂಡಿರುವುದು ಸ್ಪಷ್ಟವಾಗುತ್ತದೆ. ಕರ್ನಾಟಕದ ಇತರ ಪ್ರಕಾಶಕರು ನಿಮ್ಮನ್ನು ಅನುಸರಿಸುವ ಕಾಲ ಬೇಗ ಬರಲೆಂದು ಹಾರೈಸುತ್ತೇನೆ.

— ಎಚ್. ವಿ. ಶ್ರೀರಂಗರಾಜ್

ತಮ್ಮ ಈ ಔದಾರ್ಯಕ್ಕೆ ನನ್ನ ಅಭಿನಂದನೆಗಳು. ತಮ್ಮ ಪ್ರಕಟನ ಕಾರ್ಯ ಅವ್ಯಾಹತವಾಗಿ ನಡೆದು ನಾಡು-ನುಡಿಯ ಸೇವೆ ಸಾಗಲಿ ಎಂದು ಹಾರೈಸುತ್ತೇನೆ.

— ಡಾ. ಶ್ರೀ. ಶೇಷರಾಘವಾಚಾರ್

ತಾವು ನಡೆಸುತ್ತಿರುವ ಕಾರ್ಯದಲ್ಲಿ ರವೆಯಷ್ಟು ಸಲ್ಲಿಸಿದ ಸಹಕಾರವನ್ನು ಮೆಚ್ಚಿಕೊಂಡು, ಆತ್ಮೀಯತೆಯಿಂದ ಈ ಲೇಖನವನ್ನು ಗೌರವಿಸಿದ್ದೀರಿ. ಇದು ನಾನು ಇನ್ನೂ ಮಾಡಬೇಕಾಗಿರುವ ಹೆಚ್ಚಿನ ಕೆಲಸಕ್ಕಾಗಿ ನನಗೆ ಬಂದಿರುವ ಜ್ಞಾಪಕಸೂಚಿ ಎಂದು ನನ್ನ ಹೃದಯದ ಅನಿಸಿಕೆ.

— ಲ. ನ. ಶಾಸ್ತ್ರೀ

ಅಳಿಲು ಭಕ್ತಿಯಿಂದ ಸೇವೆಗೈದಾಗ ಅಪಾರವಾದ ರಾಮ - ಕರುಣಾ - ಪ್ರಸಾದ ಅದಕ್ಕೆ ಸಂದಾಗ ಅಳಿಲಿಗಾದ ಕೃತಜ್ಞತಾನಂದ ಭಾವದ ಅನುಭವವಾಯಿತು. 'ರಾಷ್ಟ್ರೋತ್ಥಾನ—ಇದು ಲಾಭ ಗಳಿಕೆಯ ಉದ್ದೇಶದ ಸಂಸ್ಥೆಯಲ್ಲ' ಎಂಬುದು ಇನ್ನಷ್ಟು ನಿಚ್ಚಳವಾಯಿತು.

— ಅನಂತ ಅ. ಕಲ್ಲೋಳ

ಲೇಖಕರು ಕೇಳದೆಯೇ ನೀವಾಗಿ ಕೊಡಮಾಡಿದ ಈ 'ಅಭಿನಂದನಾ ಧನ'ಕ್ಕೆ ಕೃತಜ್ಞ. ನಿಮ್ಮ ಅಚ್ಚುಕಟ್ಟಿನ, ಶಿಸ್ತಿನ ವ್ಯವಹಾರದ ಬಗ್ಗೆ ಹಿಂದಿನಿಂದಲೂ ತಲೆದೂಗಿದವ ನಾನು ಮತ್ತೊಮ್ಮೆ ತಲೆದೂಗುವಂತೆ ಮಾಡಿದಿರಿ. ನಿಮ್ಮ ಸಂಸ್ಥೆ ಮಾದರಿಯಾಗಿ ಉಳಿಯಲಿ, ಬೆಳೆಯಲಿ.

'ಅಭಿನಂದನಾ ಧನ'ದ ಚೆಕ್ ಆಶ್ಚರ್ಯಾನಂದಗಳೊಂದಿಗೆ....ಉಪಯುಕ್ತ-ಅಗತ್ಯ ಕಾಲದಲ್ಲಿ ತಲಪಿತು. ವಾರ್ಷಿಕ ಉತ್ಸವದಂದು ನ್ಯಾಯಮೂರ್ತಿ ಶ್ರೀ ಗೋವಿಂದ ಭಟ್‌ರವರು ನೀಡಿದ 'ತೀರ್ಪು' ನಿಜಕ್ಕೂ ಸತ್ಯ.

— 'ರಸಿಕ' ಪುತ್ತಿಗೆ

ನಿಜಕ್ಕೂ ನನಗೆ 'ಆಪತ್ ಧನ'ವಾಯಿತು. ಈ ಒಂದು ನಿಮ್ಮ ಉದಾರ ಹೃದಯ ನನ್ನನ್ನು ಮೂಕನನ್ನಾಗಿ ಮಾಡಿದೆ.

— 'ಕಾಕೆಮಾನಿ'

'ಚಿಗುರುವ ಸಸಿಗೆ ಉಗುರು ಹಚ್ಚುವ' ಇಂದಿನ ಕಾಲದಲ್ಲಿ ಉದಯೋನ್ಮುಖ ಬರಹಗಾರರನ್ನು ಗುರುತಿಸಿ ಪ್ರೋತ್ಸಾಹಿಸುತ್ತಿರುವ ನಿಮ್ಮ ಕಾರ್ಯ ಶ್ಲಾಘನೀಯ.

— ಮೋಹನಚಂದ ಕೀರಣಗಿ

ಈ ನವೀನ ಪದ್ಧತಿಯು ನಿಜಕ್ಕೂ ಸಾಹಿತ್ಯ ಸರಸ್ವತಿಯ ಅರ್ಚನೆಯ ಅನುಪಮ ಹಾಗೂ ಅನುಕರಣೀಯ ವಿಧಾನವಾಗಿದೆ. ಸರಸ್ವತಿಯನ್ನು ಇಂದು ಮಾರುಕಟ್ಟೆಗೆ ಎಳೆದು ತಂದಿರುವ ಸಾಹಿತಿಗಳೂ ಹಾಗೂ ಪ್ರಕಾಶನಗಳೂ ಅನುಸರಿಸಬೇಕಾದ ಆದರ್ಶ ಮಾರ್ಗವಿದು.

— ಪ್ರಹ್ಲಾದ ವೆಂ. ಕುಳಗೇರಿ

ಈ ಯೋಜನೆಯು ನಿಜವಾಗಿಯೂ ಅಪೂರ್ವವೂ ಅಭಿನಂದನೀಯವೂ ಆಗಿದೆ. ಲೇಖಕರ ಮತ್ತು ಪ್ರಕಾಶಕರ ಈ ಮಧುರ ಸಂಬಂಧವು ಉತ್ತರೋತ್ತರ ಬೆಳೆಯುತ್ತ ಹೋಗಲೆಂದು ಆಶಿಸುವೆ.

— ವೆಂಕಟೇಶ ಗಂಗಾವತಿ

ತುಂಬು ಹೃದಯದ ಕೃತಜ್ಞತೆಗಳು. ಪ್ರಕಾಶನ ವ್ಯವಸ್ಥೆಯಲ್ಲಿ ಅಚ್ಚುಕಟ್ಟುತನಕ್ಕೆ, ಹೇಳದೆ ಮಾಡುವ ಸಾಹಸದಲ್ಲಿ ತಮ್ಮ ಸಂಸ್ಥೆ ಮಾದರಿಯಾಗಿದೆ.

— ಬಿ. ಆರ್. ಶಂಕರ್

ನಿಮ್ಮ ಕನ್ನಡಸೇವಾ ತತ್ಪರತೆ, ಲೇಖಕರಿಗೆ ಸಂಭಾವನೆ ಸಲ್ಲಿಸುವಾಗಿನ ವಿನಮ್ರತೆ ಅನುಕರಣೀಯವಾದುದು.

— ಸೂ. ಸುಬ್ರಹ್ಮಣ್ಯಂ

ಪುಸ್ತಕ ಪ್ರಕಟವಾದಾಗ ಪೂರ್ಣ ಸಂಭಾವನೆ ಕೊಟ್ಟು ಅನಂತರ ವಾರ್ಷಿಕೋತ್ಸವ ಸಂದರ್ಭದಲ್ಲಿ 'ಅಭಿನಂದನಾ ಧನ' ಕೊಡುವುದು ಪ್ರಾಯಶಃ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಪೂರ್ವ ಘಟನೆ.

— ಆರ್. ಶ್ರೀನಾಗೇಶ್

ಇಷ್ಟು ಸಣ್ಣ ಹೊತ್ತಿಗೆಯನ್ನು ಬರೆದುಕೊಟ್ಟ ನಮಗೆ ಆಗಾಗ್ಗೆ ನೀಡುತ್ತಿರುವ ಸಂಭಾವನೆಯನ್ನು ಗಮನಿಸಿದರೆ ಬಹಳ ಆಶ್ಚರ್ಯವಾಗುತ್ತದೆ.

— ಎ. ನಾಗಭೂಷಣರಾವ್ ಸಿಂಧೆ

ನಿಮ್ಮ ಪತ್ರ ಅನಿರೀಕ್ಷಿತ, ಜೊತೆಗೆ ಇದ್ದ ಚೆಕ್ ಇನ್ನಷ್ಟು ಅನಿರೀಕ್ಷಿತ. ನೀವು ವಿಶ್ವಾಸದಿಂದ ಕಳಿಸಿಕೊಟ್ಟ 'ಅಭಿನಂದನಾ ಧನ' ತಲಪಿದೆ.

— ಬಿ. ವಿ. ವೈಕುಂಠರಾಜು

'ಭಾರತ–ಭಾರತಿ'ಯ 'ಅಭಿನಂದನಾ ಧನ' ಅನಿರೀಕ್ಷಿತವಾಗಿ ಬಂದು ನನಗೆ ಬಹಳ ಅನುಕೂಲವಾಯಿತು. ಅದಕ್ಕಾಗಿ ಕೃತಜ್ಞ.

— ಕೃಷ್ಣಮೂರ್ತಿ ಪುರಾಣಿಕ

'ಅಭಿನಂದನಾ ಧನ'ಕ್ಕಾಗಿ ಕೃತಜ್ಞತೆಗಳು.

— ಕಯ್ಯಾರ ಕಿಞ್ಞಣ್ಣ ರೈ

ಈ ಅನಿರೀಕ್ಷಿತ 'ಅಭಿನಂದನಾ ಧನ'ಕ್ಕಾಗಿ ವಂದನೆಗಳು.

— ಸಿದ್ಧಯ್ಯ ಪುರಾಣಿಕ

ನಿಮ್ಮ ಸುವ್ಯವಸ್ಥೆ ಮತ್ತು ವಿಶ್ವಾಸ ದೊಡ್ಡದು, ನಾವು ಕೇವಲ ಕೃತಜ್ಞರು.

— ಹಂಪ. ನಾಗರಾಜಯ್ಯ
ಕಮಲಾ ಹಂಪನಾ

ಆಶ್ಚರ್ಯದೊಡನೆ ಸಂತೋಷವೂ ಆಯಿತು. ತಮ್ಮ ವಿಶ್ವಾಸಕ್ಕೆ ಕೃತಜ್ಞತೆಗಳು.

— ಶಂಸ ಐತಾಳ

'ಅಭಿನಂದನಾ ಧನ'ವನ್ನಾಗಿ ಕಳಿಸಿರುವುದನ್ನು ಕಂಡು, ಭಾರತ–ಭಾರತಿಯು ಎಡರುತೊಡರುಗಳ ಜಯಿಸಿ ಮುಂದೆ ಸಾಗುತ್ತಿರುವುದನ್ನು ಕೇಳಿ ಅಪಾರ ಆನಂದವಾಯಿತು.

— ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಇಷ್ಟೊಂದು ಚಿಕ್ಕ ಪುಸ್ತಕಕ್ಕೆ ಈ ರೀತಿ ಸಂಭಾವನೆ ಕೊಡುತ್ತಾ ಹೋದರೆ ನೀವು ಹೇಗೆ ಪೂರೈಸಿಕೊಳ್ಳುತ್ತೀರೋ ಎಂದು ನನಗೇ ಆಶ್ಚರ್ಯ !

—ಪದ್ಮಾ ಶೆಣೈ

ಈ 'ಅಭಿನಂದನಾ ಧನ'ದ ಕೊಡುಗೆಯು ಲೇಖಕರ ಬಗ್ಗೆ ಸಂಸ್ಥೆಯು ತಳೆದಿರುವ ಗೌರವ ಮನೋಭಾವದ ಹಾಗೂ ಎಲ್ಲ ಪ್ರಕಾಶನ ಸಂಸ್ಥೆಗಳೂ ಅನುಸರಿಸಬೇಕಾದ ಒಂದು ಹೊಸ ಆದರ್ಶದ ದ್ಯೋತಕವಾಗಿದೆಯೆಂದು ಹೇಳ ಬಯಸುತ್ತೇನೆ.

—'ಕೈಪು' ಲಕ್ಷ್ಮೀನರಸಿಂಹ ಶಾಸ್ತ್ರೀ

ಕನ್ನಡ ಮಕ್ಕಳ ಸಾಹಿತ್ಯದ ಮೇಲ್ಮೆಗಾಗಿ ಒಂದು ಸಾವಿರ ರೂಪಾಯಿಗಳ ಬಹುಮಾನ ನೀಡಲು ಯೋಜಿಸಿರುವುದು ನಿಮ್ಮ ಮುಕ್ತಮನದ ಉನ್ನತ ಆಸೆಯ ಬಿಂಬ. ಇದ್ದಕ್ಕಿದ್ದಂತೆಯೇ 'ಅಭಿನಂದನಾ ಧನ'ವನ್ನು ಕಳುಹಿಸಿರುವುದು ನನಗೆ ಅಚ್ಚರಿಯನ್ನುಂಟುಮಾಡಿತು.

—ಸರಿತಾ ಜ್ಞಾನಾನಂದ

'ಭಾರತ-ಭಾರತಿ'ಯ ಬೃಹದ್‌ಯೋಜನೆಗೆ ಎಷ್ಟೊಂದು ಖರ್ಚಾಗುತ್ತದೆ! ಅದರ ಜೊತೆ ಮತ್ತೆಮತ್ತೆ ಸಂಭಾವನಾ ಹಣ ಕಳುಹಿಸುವ ಆವಶ್ಯಕತೆ ಇತ್ತೇ ಎನ್ನುವುದು ನನ್ನ ಪ್ರಶ್ನೆ. ಇದು ಸಾಹಿತಿಗಳ ಬಗ್ಗೆ ನಿಮಗಿರುವ ಅಭಿಮಾನವನ್ನು ತೋರಿಸುತ್ತದೆ.

— ಎಚ್. ಎಸ್. ಪಾರ್ವತಿ

'ಅಭಿನಂದನಾ ಧನ' ತಲಪಿತು ; ಸಂಸ್ಥೆಯ ಔದಾರ್ಯವನ್ನು ನೆನೆನೆನೆದು ಪುಲಕಿತನಾದೆ.

— ಜಗ್ಗು ಸುದರ್ಶನಾಚಾರ್ಯ

ಈ ರೀತಿ ಲೇಖಕರಿಗೆ ತಾವು ತೋರಿಸಿರುವ ಅಯಾಚಿತ ಔದಾರ್ಯ ಪ್ರಕಾಶಕರಿಗೆಲ್ಲ ಅನುಕರಣೀಯ ಮೇಲ್ಪಂಕ್ತಿ.

—ಜಿ. ವಿ. ನಾರಾಯಣ ಮೂರ್ತಿ

ನಾವು ಕೇಳದೇ ಹಣ ನೀಡಿ ಕನ್ನಡ ಪ್ರಕಾಶನ ಪ್ರಪಂಚದಲ್ಲಿ ಒಂದು ಮೌನ ಕ್ರಾಂತಿಯೇ ಆಗುವಂತೆ ಮಾಡಿದ್ದೀರಿ.

—ಎನ್. ಪಿ. ಶಂಕರನಾರಾಯಣರಾವ್

['ಭಾರತ-ಭಾರತಿ ಪುಸ್ತಕ ಸಂಪದ'ಕ್ಕೆ ಮೂರು ವರ್ಷ ತುಂಬಿತು. ನಾಲ್ಕನೇ ವರ್ಷದ ಶುಭಾರಂಭದಲ್ಲಿ ಮೂರನೇ ವರ್ಷದ ಪುಸ್ತಕಗಳ ಎಲ್ಲಾ ಲೇಖಕರಿಗೂ 'ಅಭಿನಂದನಾ ಧನ' ಅರ್ಪಿಸಲಾಯಿತು. ಈ ಬಗ್ಗೆ ಲೇಖಕರು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿ ರಾಷ್ಟ್ರೋತ್ಥಾನ ಪರಿಷತ್ತಿನ ಕಾರ್ಯಕ್ಕೆ ಬೆನ್ನು ತಟ್ಟಿ ಹರಸಿದ್ದಾರೆ.]

ನಿರೀಕ್ಷಿತ ಫಲ ಪ್ರಾಪ್ತವಾದರೆ ಎಷ್ಟೋ ಸಂತಸವಾಗುತ್ತೆ. ಹೀಗಿರುವಲ್ಲಿ ಅನಿರೀಕ್ಷಿತವಾಗಿ ತಾವು ಕಳುಹಿಸಿಕೊಟ್ಟ ಹೆಚ್ಚಿನ ಸಂಭಾವನೆಯಿಂದ ತುಂಬ ಸಂತೋಷವಾಗಿದೆ. ಈ ರೀತಿಯಲ್ಲಿ ಲೇಖಕರನ್ನು ಪ್ರೋತ್ಸಾಹಿಸುವವರು ಅತಿ ವಿರಳ. ಇದ್ದಾರೆಯೇ ಎಂಬುದು ಪ್ರಶ್ನಾರ್ಥಕ.

—ಡಿ. ಎಸ್. ನಾರಾಯಣರಾವ್

ಲೇಖಕರನ್ನು ನೀವು ಹೀಗೆ ಪುರಸ್ಕರಿಸುತ್ತಿರುವುದು ಗಮನಾರ್ಹವಾದ ವಿಷಯ. ಪುಸ್ತಕ ಪ್ರಕಟವಾದ ಮೇಲೂ ನೀವು ಲೇಖಕರನ್ನು ಮರೆತಿಲ್ಲ. ಇದು ಸಂತಸದ ವಿಷಯ.

— ನಾ. ಡಿಸೋಜ

ಮುದ್ರಣ ಸಾಮಗ್ರಿಗಳ ಬೆಲೆ ಏರಿಕೆ, ಅಭಾವಗಳ ಮಧ್ಯೆ ತಮ್ಮ ಪ್ರಕಾಶನ ಕಾರ್ಯವೇ ಒಂದು ಮಹಾ ಸಾಹಸವೆನಿಸಿರುವಾಗ, 'ಅಭಿನಂದನಾ ಧನ'ದ ಕೊಡುಗೆಯು ತಾವು ನಡೆಸಿರುವ ಪವಾಡವೇ ಸರಿ.

— ಟಿ. ಕೆ. ರಾಮರಾವ್

ನಾನು ತಿಳಿದ ಮಟ್ಟಿಗೆ ಪುಸ್ತಕ ಪ್ರಕಟವಾದ ಮೇಲೂ, ಗೌರವಧನ ಕೊಟ್ಟನಂತರವೂ ವರ್ಷಾರಂಭದ ಸವಿನೆನಪಿಗೆಂದು ಹೀಗೆ 'ಅಭಿನಂದನಾ ಧನ' ಕೊಡುವುದು ಕನ್ನಡ ಪ್ರಕಟಣಾ ಪ್ರಪಂಚಕ್ಕೆ ಹೊಸ ವಿಷಯ.

— ಕ. ರಾ. ಮೋಹನ್

ಬಿಕೋ ಎನ್ನುವ ಗಾವುಗಾವುದ ದೂರದ ಮರಳುಗಾಡಲ್ಲಿ ನಡೆದು ಬಾಯಾರಿ ಬಸವಳಿದಿದ್ದಾಗ ಅನಿರೀಕ್ಷಿತ ತಂಪು, ಸಿಹಿನೀರಿನ ಜಲಬುಗ್ಗೆ ಕಾಣಸಿಕ್ಕಿದಷ್ಟೇ ಸಂತೋಷ ನಿಮ್ಮ ಈ ಧನಸಹಾಯ ಮಾಡಿದೆ.

— ಬಿ. ಡಿ. ಸುಬ್ಬಯ್ಯ ('ಕಾಕೆಮಾನಿ')

ಜನರನ್ನು, ಸಂಘ-ಸಂಸ್ಥೆಗಳನ್ನು, ವ್ಯಾಪಾರಿಗಳನ್ನು ನಂಬುವುದೇ ಕಷ್ಟವಾಗಿರುವ ಈ ಕಾಲದಲ್ಲಿ, ನೀವು ಹಿಮಾಲಯದಂತೆ ನಿಮ್ಮ ಪರಂಪರೆಯನ್ನು ಅಚಲ

ವಾಗಿರಿಸಿಕೊಂಡು ಲೇಖಕರನ್ನು ಕೃತಜ್ಞತೆಯಿಂದ ಸ್ಮರಿಸುತ್ತಿರುವುದನ್ನು ಕಂಡು ಆಶ್ಚರ್ಯವಾಯಿತು. ನಮ್ಮ ದೇಶದಲ್ಲಿ ಇಂಥ ಪ್ರಾಮಾಣಿಕ ಸಂಸ್ಥೆಗಳು ಬಾಳಿ ಬದುಕಲಿ – ಎಂದು ದೇವರನ್ನು ಪ್ರಾರ್ಥಿಸುತ್ತೇನೆ.

'ರಸಿಕ' ಪುತ್ತಿಗೆ

ಈ ಮೂರು ವರ್ಷಗಳಲ್ಲಿ ಬಂದ ಕಠಿಣ ಸವಾಲುಗಳನ್ನೆಲ್ಲ ದಿಟ್ಟತನ ಮತ್ತು ದೃಢಸಂಕಲ್ಪಗಳಿಂದ ಎದುರಿಸಿ ದೇಶದಲ್ಲೆಲ್ಲಾ ಜನಪ್ರಿಯತೆಯನ್ನೂ ವಿದೇಶಗಳಲ್ಲಿ ಮೆಚ್ಚುಗೆಯನ್ನೂ ಗಳಿಸಿ 'ಭಾರತ-ಭಾರತಿ ಪುಸ್ತಕ ಸಂಪದ' ಆರೋಗ್ಯವಾಗಿ ಬೆಳೆದಿದೆ. ಸತ್ತ್ವ, ಕಾಂತಿಗಳಿಂದ ಬೆಳಗುತ್ತಿದೆ. ಅದರ ಮುಂದಿನ ವರುಷಗಳಲ್ಲೂ ಯಶಸ್ಸಿನಿಂದ ಹೆಚ್ಚಿನ ಯಶಸ್ಸಿಗೆ ಸುಗುಮವಾಗಿ ಹಾರುವ ತನ್ನ ಧ್ಯೇಯವನ್ನು ಸಾಧಿಸಿ 'ಸಂಪದ' ಎಂಬ ಹೆಸರನ್ನು ಅನ್ವರ್ಥಗೊಳಿಸಿಕೊಳ್ಳಲಿ ಎಂದು ಹಾರೈಸುತ್ತೇನೆ.

—ಕೆ. ಬಿ. ಪ್ರಭುಪ್ರಸಾದ್

ಕಿರಿಯ ಲೇಖಕರ ಕೃತಿಗಳನ್ನು ಸ್ವಾಗತಿಸಿ, ಬೆಳಕಿಗೆ ತಂದು ಪ್ರೋತ್ಸಾಹಿಸಿ 'ಅಭಿನಂದನಾ ಧನ'ವನ್ನು ನೀಡುವ ದಿಟ್ಟ ಸಾಹಸ ಪ್ರಶಂಸನೀಯ. ಪ್ರಕಾಶಕರೆಲ್ಲರೂ ಈ ದಾರಿಯಲ್ಲಿ ಹೊರಟರೆ ನಿಜವಾಗಿಯೂ ಕನ್ನಡ ಸಾಹಿತಿ ಬದುಕಿಯಾನು. ಕನ್ನಡ ಸಾಹಿತ್ಯ ಬೆಳೆದೀತು. 'ಭಾರತ-ಭಾರತಿ'ಯ ಕಂಪು ವಿಶ್ವವ್ಯಾಪಿಯಾಗಲೆಂದು ಹಾರೈಸುವೆ.

— ಮಾ. ಸು. ರಾವ್

ನಿಜವಾಗಿಯೂ ನಿಮ್ಮದು ದಿಟ್ಟತನದ ಪಯಣ. ನಮ್ಮ ಆಡುಭಾಷೆಯಲ್ಲಿ ನಿಮ್ಮದು 'ಕೆಟ್ಟ ಧೈರ್ಯ'. ದಶದಿಕ್ಕುಗಳಿಂದಲೂ ಸರ್ವ ವಿಧದ ಅಡ್ಡಿ-ಆತಂಕಗಳು ನಿಮ್ಮ ಮೇಲೆ ಏರಿಬರುತ್ತಿದ್ದರೂ ನಿಮ್ಮಿಂದ ಕನ್ನಡ ವಾಗ್ದೇವಿಯ ಸೇವೆ ಎಂದಿನಂತೆ ಅವಿಚಲವಾಗಿ ನಡೆದೇ ಇದೆ. ಪರಮಾತ್ಮನ ಅನುಗ್ರಹ ನಿಮ್ಮ ಮೇಲೆ ಸಂಪೂರ್ಣ ತುಂಬಿದೆ ಎಂಬುದಕ್ಕೆ ಇದುವೇ ಸಾಕ್ಷಿ. ಅದೇ ನಿಮ್ಮನ್ನು ಕೊನೆಯ ತನಕ ರಕ್ಷಿಸಿ ಜಯಮಾಲೆ ತಂದುಹಾಕುವುದು.

—ಡಾ|| ದ. ನ. ಶಾನಭಾಗ್

ವಿಶ್ವಾಸದಿಂದ 'ಅಭಿನಂದನಾ ಧನ' ಕಳುಹಿಸಿ, ಲೇಖಕರನ್ನು ಜ್ಞಾಪಿಸಿಕೊಳ್ಳುವ ನಿಮ್ಮ ಒಳ್ಳೆಯ ಗುಣವನ್ನು ಲೇಖಕ ಬಳಗ ಎಂದೆಂದಿಗೂ ಮರೆಯುವಂತಿಲ್ಲ. ಎಲ್ಲ ಕಷ್ಟನಷ್ಟಗಳನ್ನೂ ಮೆಟ್ಟಿ ನಿಂತು 'ಭಾರತ-ಭಾರತಿ' ಪುಸ್ತಕ ಸಂಪದ ದಿಟ್ಟತನದಿಂದ ಸಾಗಲಿ ಎಂದು ಹಾರೈಸುತ್ತೇನೆ.

—'ಚಿರಂಜೀವಿ'

ಮುದ್ರಣದ ತುರ್ತು ಪರಿಸ್ಥಿತಿಯಲ್ಲೂ ಆರಂಭಿಸಿದ ಈ ಹೊಸ ಸಂಪ್ರದಾಯವನ್ನು ನೀವು ನಡೆಸಿಕೊಂಡು ಬರುತ್ತಿರುವುದು ಆಶ್ಚರ್ಯ. ಎಲ್ಲ ಕಷ್ಟಗಳ ನಡು

ವೆಯೂ 'ಭಾರತ-ಭಾರತಿ' ಯೋಜನೆ ಯಶಸ್ವಿಯಾಗಿ ನೆರವೇರಿ, ಗುರಿ ಸೇರಿ ಮಕ್ಕಳ ಸಾಹಿತ್ಯದಲ್ಲಿ ಅಮೂಲ್ಯಕಾಣಿಕೆಯನ್ನು ನೀಡಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

—ಈಶ್ವರಚಂದ್ರ

ತತ್ತ್ವನಿಷ್ಠೆಗೆ ಇನ್ನೊಂದು ಹೆಸರಾಗಿರುವ ರಾಷ್ಟ್ರೋತ್ಥಾನ ಪರಿಷತ್ ಇಂದು ಎದುರಿಸುತ್ತಿರುವ ಸಮಸ್ಯೆಗಳು ಒಂದೆರಡಲ್ಲ. ಎಂತಹ ಕಠಿಣ ಪರಿಸ್ಥಿತಿಯನ್ನೂ ಪರೀಕ್ಷೆಯಂತೆ ಎದುರಿಸಿ ಯಶಸ್ಸು ಗಳಿಸುವ ಛಲ ಅದರದು. ಈ ಚೈತನ್ಯದ ಜ್ಯೋತಿ ಸದಾ ಪ್ರಜ್ವಲಿಸುತ್ತಿದ್ದು ನಾಡ ಜನತೆಯ ಹೃದಯಗಳನ್ನು ಬೆಳಗಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

— ಕೆ. ಶಿವಶಂಕರ್

ರಾಷ್ಟ್ರೋತ್ಥಾನ ಪರಿಷತ್ತಿನ ನೇತೃತ್ವದಲ್ಲಿ ಭಾರತ-ಭಾರತಿ ಅತ್ಯಂತ ಯಶಸ್ವಿಯಾಗಿ ಭಾರತ-ಪುತ್ರರ ಆತ್ಮವಿಕಾಸಕ್ಕೆ ನೆರವಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಭಾರತ-ಭಾರತಿಗೆ ನಾನು ಸಲ್ಲಿಸಿದ ಸೇವೆ ಅಲ್ಪವಾದರೂ ಅದನ್ನು ಅಭಿಮಾನದಿಂದ ಸ್ವಾಗತಿಸಿದ ತಮಗೆ ನನ್ನ ತುಂಬುಹೃದಯದ ವಂದನೆಗಳು.

— ಸಿ. ವ್ಹಿ. ಕೆರಿಮನಿ

ಎಷ್ಟೋ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಮಾಲೆಯನ್ನು ಯಶಸ್ವಿಯಾಗಿ ನಡೆಸಿ, ಗೌರವಧನವನ್ನು ನೀಡಿರುವುದು ಅಭಿನಂದನೀಯ. ನಿಮ್ಮ ಉದ್ಯಮ ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಹಾರೈಸುತ್ತೇನೆ.

— ಎಂ. ಜಿ. ನಂಜುಂಡಾರಾಧ್ಯ

ಶ್ರೀ ಜಿ. ಪಿ. ರಾಜರತ್ನಂ ಅವರು ಈ ಯೋಜನೆಯನ್ನು 'ಪೂಜೆ' ಎಂದು ಕರೆದರು. ಈ ಪೂಜಾಕಾರ್ಯದಲ್ಲಿ ಭಾಗಿಯಾಗಲು ತಾವು ನನಗೆ ಅವಕಾಶ ಮಾಡಿ ಕೊಟ್ಟಿರಿ. ಈಗ ನೀವು ಕಳುಹಿಸಿರುವ 'ಅಭಿನಂದನಾ ಧನ' ಆ ಪೂಜೆಯ ಪ್ರಸಾದ.

—ಬೆ. ಗೋ. ರಮೇಶ್

ಒಂದು ಬಾರಿ 'ಗೌರವ ಧನ' ಕೊಟ್ಟರೆ ತಮಗೂ ಲೇಖಕರಿಗೂ ಇರುವ ಸಂಬಂಧ ತೀರಿತೆಂದು ಭಾವಿಸಿರುವ ಪ್ರಕಾಶಕರು ಇರುವ ಈ ಕಾಲದಲ್ಲಿ, ನಿಮ್ಮ ನಡೆ ವಳಿಕೆಗೆ ಲೇಖಕ ಮಿತ್ರರೆಲ್ಲರೂ ತಮ್ಮ ಮೆಚ್ಚುಗೆಯನ್ನು, ಕೃತಜ್ಞತೆಯನ್ನು ವ್ಯಕ್ತ ಪಡಿಸಬೇಕಾಗುತ್ತದೆ. ನನ್ನ ಸಣ್ಣ ಪುಸ್ತಕಕ್ಕೆ ತಾವು ಕಳುಹಿಸಿರುವ 'ಅಭಿನಂದನಾ ಧನ' ದೊಡ್ಡದಾಗಿದೆ, ಭಾರವಾಗಿದೆ.

—ತೊ. ಸು. ಸುಬ್ರಹ್ಮಣ್ಯಂ

ಹಣವೆಂದರೆ ಸಾಕು ಯಾರಾದರೂ ಬಾಯಿಬಿಡುವರು—ಎಂಬುದು ಲೋಕವಿದಿತ. ಆದರೆ ಇಷ್ಟು ಪುರಸ್ಕಾರಕ್ಕೆ ಮತ್ತು ಅಭಿನಂದನಕ್ಕೆ ನನಗೆ ಅರ್ಹತೆ ಇದೆಯೇ ಎಂದು ನನ್ನಲ್ಲಿ ನಾನೇ ಪ್ರಶ್ನಿಸಿಕೊಳ್ಳುತ್ತಿದ್ದೇನೆ.

— ಬಿ. ಎಸ್. ಎಸ್. ಕೌಶಿಕ್

ರಾಷ್ಟ್ರೋತ್ಥಾನ ಪರಿಷತ್ತು ಕೈಗೊಂಡಿರುವ ಈ ಕಾರ್ಯ ಅತ್ಯಂತ ಮಹತ್ವ ಪೂರ್ಣವಾದದ್ದು ; ಈ ಮಹಾ ಯೋಜನೆಗೆ ನಾನು ಸಲ್ಲಿಸಿರುವ ಕಿಂಚಿತ್ ಸೇವೆಗೆ ಬಹು ಹೆಚ್ಚಿನ ಪ್ರತಿಫಲ ಸಿಕ್ಕಿದೆ.

— ಟಿ. ಸುನಂದಮ್ಮ

ತಾವು ಲೇಖಕರಿಗೆ ಕೊಡುತ್ತಿರುವ ಉತ್ತೇಜನ ಪ್ರಶಂಸನೀಯ. ತಾವು ಕನ್ನಡ ಜನತೆ ಹಾಗೂ ಸಾಹಿತ್ಯ ಪ್ರಗತಿಗಾಗಿ ಮಾಡುತ್ತಿರುವ ಸೇವೆ ಅಮೋಘ.

—ಎಸ್. ವಿ. ಶ್ರೀನಿವಾಸರಾವ್

## ನಮ್ಮ ಕಲಾವಿದರು

ಭಾರತ-ಭಾರತಿ ರಕ್ಷಾಪುಟ ಮೋಹಕ. ಖ್ಯಾತ ಕಲಾವಿದರ ಸಹಕಾರ ಇದಕ್ಕೆ ಕಾರಣ. ಚಿತ್ರ ಸುಂದರವಾಗಿರಬೇಕು, ನೈಜವಾಗಿರಬೇಕು, ಅಧಿಕೃತವಾಗಿರಬೇಕು, ಮಕ್ಕಳ ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲಬೇಕು. ಕಲಾವಿದರ ಕುಂಚ ನಲಿದಾಡಿತು. ಅಧಿಕೃತ ಚಿತ್ರಗಳಿಗಾಗಿ ಬೇರೆ ಬೇರೆ ಸ್ಥಳಗಳಿಗೆ ಹೋಗಿ ಕಲಾವಿದರು ಚಿತ್ರ ಬರೆದರು. ಕಲ್ಪನಾಚಿತ್ರಗಳಿಗೆ ಆಧಾರದಿಂದ ಚಿತ್ರ ರಚಿಸಿದರು.

ಯೋಜನೆಯ ಪ್ರಾರಂಭದ ದಿವಸಗಳಲ್ಲಿ ಕಲಾವಿದ 'ಶ್ರೀ' ನಮ್ಮೊಡನಿದ್ದು ಶ್ರಮಿಸಿದರು. ಪರಿಷತ್‌ನ ಅಧಿಕಾರಿಗಳು ಮದ್ರಾಸ್, ಬೊಂಬಾಯಿ ನಗರಗಳಿಗೆ ಹೋಗಿ ಅಲ್ಲಿಯ ಖ್ಯಾತ ಕಲಾವಿದರ ಸಂಪರ್ಕಮಾಡಿದರು. ಅವರೆಲ್ಲರೂ ಈ ಯೋಜನೆಯಲ್ಲಿ ತಮ್ಮ ಕುಂಚ ಆಡಿಸಿದ್ದಾರೆ.

ಪರಿಷತ್‌ನ ಕಲಾವಿದರೇ ಆದ ಶ್ರೀ ಕೆ. ಎಂ. ಚಂದ್ರಮೂರ್ತಿ ಯೋಜನೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಚಿತ್ರ ಬರೆದಿದ್ದಾರೆ. ಎಲ್ಲಾ ಕಲಾವಿದರೂ ಸ್ಮರಣೀಯರು. ವಿವಿಧ ಅವಧಿಗಳಲ್ಲಿ ಭಾರತ-ಭಾರತಿಯಲ್ಲಿ ಸೇವೆ ಸಲ್ಲಿಸಿದ ಶ್ರೀ ಕೆ. ಗಣೇಶ ಆಚಾರ್ಯ ಮತ್ತು ಶ್ರೀ ಬಿ. ಎಂ. ವೆಂಕಟೇಶ್ ಅವರುಗಳಿಗೂ ವಂದನೆಗಳು ಸಲ್ಲುತ್ತವೆ.

## ಮರೆಯಾದ ಹಿರಿಯರ ಶ್ರೀರಕ್ಷೆ

ಶ್ರೀ ತಿ. ತಾ. ಶರ್ಮ ಮೇರುಸದೃಶ ವ್ಯಕ್ತಿ. ಧೀಮಂತ ಸ್ವಾತಂತ್ರ್ಯ ಹೋರಾಟಗಾರ, ಉದ್ದಾಮ ಪಂಡಿತ. ಸಾಹಿತ್ಯ ಸಂಶೋಧನೆ, ರಾಜಕಾರಣ, ಪತ್ರಿಕೋದ್ಯಮ – ಇವೇ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಇವರದು.

ರಾಷ್ಟ್ರೋತ್ಥಾನ ಪರಿಷತ್ತಿಗೂ ಇವರಿಗೂ ತುಂಬಾ ನಂಟು. ಭಾರತ-ಭಾರತಿ ಪುಸ್ತಕ ಸಂಪದಕ್ಕೆ ಬರೆಯಲು ಅವರ ಪಂಡಿತ ಗಂಭೀರ ಲೇಖನಿ ಸರಳವಾಗಿ ಹರಿಯಿತು. ಮೊದಲ ಕಂತಿನಲ್ಲೇ ಇವರು ಬರೆದ "ಸುಭಾಷ್ ಚಂದ್ರ ಬೋಸ್" ಪ್ರಕಟವಾಯಿತು. ಇದಕ್ಕೆ ಸಲ್ಲಬೇಕಾದ ಗೌರವ ಸಂಭಾವನೆ "ಒಲ್ಲೆ" ಎಂದರು. "ಮಕ್ಕಳಿಗೆ ಇದು ನನ್ನ ಪ್ರೀತಿಯ ಕಾಣಿಕೆ" ಎಂದರು. ಬಲವಂತವಾಗಿ ಜೇಬಿಗೆ ತುರುಕಲಾಯಿತು. ಸಂಪದಕ್ಕೆ 'ರಾಸಬಿಹಾರಿ ಬೋಸ್' ಬಗ್ಗೆ ಇನ್ನೊಂದು ಪುಸ್ತಕ ಬರೆದುಕೊಟ್ಟರು. 'ಗೌರವ ಧನ ಕೊಟ್ಟೀರ, ಜೋಕೆ' ಎಂದರು. ಅವರ ಮನೆಗೆ ಹೋದಾಗಲೆಲ್ಲಾ ಭಾರತ-ಭಾರತಿ ಬಗ್ಗೆ ವಿಚಾರಣೆ. "ಆ ಶೀರ್ಷಿಕೆ ಯಾರು ಬರೆಯುತ್ತಾರೆ? ಅವರಿಗೆ ಈ ಒಂದು ಪುಸ್ತಕ ನೋಡುವಂತೆ ಹೇಳಿ" ಎನ್ನುತ್ತಿದ್ದರು. "ಕನ್ನಡದಲ್ಲಿ ಈ ಕಾರ್ಯ ಮಾಡಿ ನೀವು ಸಾರ್ಥಕ ಸೇವೆ ಮಾಡುತ್ತಿದ್ದೀರಿ" ಎಂದು ಹಾರೈಸಿದ್ದರು.

ಪ್ರಸಿದ್ಧ ಶಿಕ್ಷಣವೇತ್ತ ಶ್ರೀ ಕೋಲಾರ ಸಂಪದ್ಗಿರಿರಾಯರಿಗೆ 'ಸುಬ್ರಹ್ಮಣ್ಯ ಭಾರತಿ' ಪುಸ್ತಕ ಬರೆಯಲು ಪ್ರಾರ್ಥಿಸಿದೆವು. ಆಗ "ಪರಿಷತ್ತು ತುಂಬಾ ಶ್ಲಾಘನೀಯ ಕಾರ್ಯ ಮಾಡುತ್ತಿದೆ, ಇಂಥಾ ಒಳ್ಳೆ ಸಂಸ್ಥೆಗೆ ಬರೆದು ಕೊಡಲು ನನಗೆ ತುಂಬಾ ಸಂತೋಷ" ಎಂದರು. ಅವರು ಅನಿರೀಕ್ಷಿತವಾಗಿ ನಿಧನ ಹೊಂದುವುದಕ್ಕೆ ಹಿಂದಿನ ದಿನ "ಸುಬ್ರಹ್ಮಣ್ಯ ಭಾರತಿ" ಹಸ್ತಪ್ರತಿ ಸಿದ್ಧಪಡಿಸಿಯೇ ಚಿರನಿದ್ರೆಗೆ ಹೊರಟರು. ಅವರ ಕೊನೆಯ ಕೃತಿ ಸಂಪದದ ಈ ಪುಸ್ತಕ.

ಸೌಜನ್ಯ, ಸಜ್ಜನಿಕೆಯ ಶುದ್ಧ ಜೀವ ಡಿ. ವಿ. ಜಿ. ಅವರು "ಬೆಳೆಯುತ್ತಿರುವ ನಮ್ಮ ಬಾಲಕರು ಮುಂದಿನ ಪ್ರಜೆಗಳು ಓದಿ ಸುಸಂಸ್ಕೃತರಾಗಲು ಅವರಿಗೆ ಒಂದು ಪುಸ್ತಕ ಭಂಡಾರವನ್ನೇ ನೀಡುತ್ತಿದ್ದೀರಿ. ಸೊಗಸಾದ ಯೋಜನೆ. ದಕ್ಷರೂ, ದೂರ ದೃಷ್ಟಿಯುಳ್ಳವರೂ ಕೈಗೊಂಡಿರುವ ಯೋಜನೆ. ಧನಸಹಾಯ ಮಾಡಿ, ಲೇಖನ ಬರೆದು ನಿಮಗೆ ನೆರವಾಗುತ್ತಿರುವ ಎಲ್ಲ ಮಹನೀಯರೂ ಅಭಿನಂದನೀಯರು. ನಿಮ್ಮ ಪರಿಷತ್ತು ಇಂತಹ ಅನೇಕ ನೂತನ ಯೋಜನೆಗಳನ್ನು ಸಾಧಿಸಿ ಆಚಂದ್ರಾರ್ಕವಾಗಿ ಬಾಳಲಿ" ಎಂದರು. ಇವರುಗಳ ಶ್ರೀರಕ್ಷೆ ನಮಗೆ ಶಕ್ತಿ; ಇವರ ಮಾತು ನಮಗೆ ಸ್ಫೂರ್ತಿ.

ನಮ್ಮ ಕೆಲಸದಲ್ಲಿ ಅಭಿಮಾನವಿಟ್ಟ ಪುಸ್ತಕಗಳನ್ನು ಬರೆದುಕೊಟ್ಟವರು, ಸಲಹೆಗಳನ್ನು ನೀಡಿದ ಮ. ಶ್ರೀಧರಮೂರ್ತಿ, ಭಾರತೀಸುತ, ಅರ್ಚಿಕ ವೆಂಕಟೇಶ, ರಾಜಶ್ರೀ —ಇವರು ಈಗ ಕಣ್ಮರೆಯಾಗಿದ್ದಾರೆ. ಅವರ ಬೆಂಬಲ ನಮ್ಮ ಮನಸ್ಸಿನಲ್ಲಿ ಸದಾ ಹಸಿರು.

ನಮ್ಮ ಪ್ರಧಾನ ಸಂಪಾದಕ ಶ್ರೀ ಶೇಷಗಿರಿರಾಯರ ನಿವಾಸದಲ್ಲಿ ಶ್ರೀಮತಿ ಶಾಂತಾದೇವಿ ಅವರಿಂದ ಸದಾ ನಗುಮುಖದ ಸ್ವಾಗತ. ಪರಿಷತ್‌ನಿಂದ ಯಾವಾಗ ಯಾರೇ ಹೋಗಲಿ ಸಹನೆಯಿಂದ ವಿಚಾರಣೆ. "ಭಾರತ-ಭಾರತಿ ಹೇಗೆ ನಡೆಯು

ತ್ತಿದೆ ?" "ಎಷ್ಟು ಪುಸ್ತಕ ಮುದ್ರಣವಾಯಿತು ? ನೀವುಗಳೆಲ್ಲಾ ಎಷ್ಟು ಕೆಲಸ ಮಾಡುತ್ತೀರಪ್ಪಾ, ಸಂತೋಷವಾಗುತ್ತೆ" ಎನ್ನುತ್ತಿದ್ದರು. ಇವರ ಅಕಾಲ ನಿಧನ ತುಂಬಾ ವಿಷಾದನೀಯ. "ಯೋಜನೆ ಪೂರ್ತಿಗೊಂಡಾಗ ಹೇಗಿರುತ್ತೆ ?" ಎಂದು ಒಮ್ಮೆ ನನ್ನೊಡನೆ ಕೇಳಿದ್ದರು.

ಈಗ ಯೋಜನೆ ಪೂರ್ತಿ ಆಯ್ತು, ಆದರೆ ಅವರೇ ಇಲ್ಲ. ವಿಧಿನಿಯಮ.

## 'ಮಧು' ಚೆಲ್ಲಿಹೋಯಿತು

ಜುಲೈ ೩೧, ೧೯೭೪.

ಭಾರತ-ಭಾರತಿ ಸಂಪಾದಕೀಯಕ್ಕೊಂದು ಪೆಟ್ಟು.

ಶ್ರೀ ಜೆ. ಮಧುಸೂದನ್ ರಾಷ್ಟ್ರೋತ್ಥಾನ ಸಾಹಿತ್ಯ ಮತ್ತು 'ವಾರ್ತಾ' ಸಂಪಾದಕರು. ಭಾರತ-ಭಾರತಿ ಸಂಪಾದಕೀಯಕ್ಕೆ ಇವರದು ಗಣನೀಯ ಸೇವೆ. ತುಂಬಾ ಪ್ರತಿಭಾವಂತ. ಮಿಂಚಿನ ಬರಹ, ಹರಿತ ಶೈಲಿಯ ಮಾತು, ಕ್ಷಿಪ್ರ ಗ್ರಹಣಶಕ್ತಿ, ನಿರ್ಭೀತ ವಿಮರ್ಶೆಯ 'ಮಧು' ಅನಿರೀಕ್ಷಿತವಾಗಿ ನಿಧನಹೊಂದಿದರು.

'ಭಾರತ-ಭಾರತಿ'ಗೆ ಬಂದ ಹಸ್ತಪ್ರತಿಯ ಮೇಲೆ ಒಮ್ಮೆ ಕಣ್ಣಾಡಿಸಿ ಅದರ ಸತ್ವಪರೀಕ್ಷೆ ಮಾಡುತ್ತಿದ್ದರು. ಪ್ರತಿಯೊಂದು ಶಬ್ದದ ವಿಮರ್ಶೆ—ಸಂದೇಹ ಬಂದೆಡೆ ಕೂಲಂಕಷ ಪರೀಕ್ಷೆ ಮಾಡದೆ ಬಿಡುತ್ತಿರಲಿಲ್ಲ. ಒಂದು ವಿವರ ಸಂದೇಹ ಬಂದರೆ ಸರಿ ನೋಡಲು ಪ್ರಧಾನ ಸಂಪಾದಕರಿಗೆ ಎಷ್ಟೋ ವರ್ಷಗಳ ಹಿಂದಿನ ಪತ್ರಿಕೆಗಳು, ಪುಸ್ತಕಗಳು ಎಲ್ಲವನ್ನೂ ಒದಗಿಸುತ್ತಿದ್ದರು. ಪ್ರತಿಯೊಂದರಲ್ಲೂ ತುಂಬಾ ಸೂಕ್ಷ್ಮ ಈತ. ತಾವು ಕೈಯಿಟ್ಟ ಕೆಲಸದಲ್ಲಿ ಎಳ್ಳಷ್ಟೂ ಲೋಪದೋಷಗಳಿರಬಾರದು. ಕರಡು ತಿದ್ದುವಾಗ ಒಂದೂ ತಪ್ಪು ಉಳಿಯಬಾರದು, ಹಾಗೆ ನೋಡುತ್ತಿದ್ದ 'ಕಾಕ ದೃಷ್ಟಿ' ಇವರದು. ಭಾರತ-ಭಾರತಿಯನ್ನು ಭದ್ರಗೊಳಿಸಲು ಶ್ರಮಿಸುತ್ತಿದ್ದ ಅನೇಕ ಕೈಗಳಲ್ಲಿ ಒಂದು ಕೈ ಮುರಿದು ಬಿದ್ದಂತಾಯಿತು.

## ಕರ್ನಾಟಕ ಸರ್ಕಾರದ ಸಹಾಯ

ಭಾರತ-ಭಾರತಿ ಪುಸ್ತಕಗಳನ್ನು ಕರ್ನಾಟಕದ ಎಲ್ಲಾ ಶಾಲೆಯ ಮಕ್ಕಳಿಗೂ ಹಂಚಿ ಎಂದು ಸರ್ಕಾರವನ್ನು ಏಕೆ ಕೇಳಬಾರದು ? ಒಂದು ಯೋಚನೆ ಹೊಳೆಯಿತು. ಶ್ರೀ ತಿ. ತಾ. ಶರ್ಮ, ಡಾ॥ ಎಂ. ಎ. ನರಸಿಂಹಾಚಾರ್, ಶ್ರೀ ಸಂ. ಮಧ್ವರಾವ್, ಶ್ರೀ ವೈ. ಜಿ. ಜಯದೇವ್, ಶ್ರೀ ಮಳ್ಳೂರು ಆನಂದರಾವ್, ಶ್ರೀ ಅರಕಲಿ ನಾರಾಯಣ್—ಅವರುಗಳು ಆಗಿನ ವಿದ್ಯಾಮಂತ್ರಿ ಶ್ರೀ ಎ. ಆರ್. ಬದರೀ ನಾರಾಯಣ್ ಅವರನ್ನು ಭೇಟಿಮಾಡಿ ಮನವಿ ಸಲ್ಲಿಸಿದರು. ಶ್ರೀ ಬದರೀನಾರಾಯಣ್ ವಿದ್ಯಾಪ್ರೇಮಿ, ಸಹೃದಯ ಸಂಪನ್ನ. ನಮ್ಮ ಪ್ರಾರ್ಥನೆಗೆ ಅಂಗೀಕಾರ ಸರಕಾರದಿಂದ

ದೊರಕಿತು. ಭಾರತ–ಭಾರತಿಯು ೨೦೦ ಪುಸ್ತಕಗಳನ್ನು ಹೊರತಂದು ಕನ್ನಡ ಕಾರ್ಯಕ್ಕೆ ಸರ್ಕಾರ ಪ್ರೋತ್ಸಾಹ ನೀಡಿತು. ಈ ಕಾರ್ಯಕ್ಕೆ ಸಹಕರಿಸಿದ ಎಲ್ಲಾ ಮಹನೀಯರು ಕೃತಜ್ಞತೆಗೆ ಪಾತ್ರರು.



## ಪ್ರಕಟಣೆ ನಿಂತಿತು

೧೯೭೬. ಏಪ್ರಿಲ್ ೬. ರಾಷ್ಟ್ರೋತ್ಥಾನ ಪರಿಷತ್‌ಗೆ ಬೀಗಮುದ್ರೆ ಬಿತ್ತು. ಇದರಿಂದ ನಿಯಮಿತವಾಗಿ ಪ್ರಕಟವಾಗುತ್ತಿದ್ದ ಭಾರತ–ಭಾರತಿ ನಿಂತಿತು. ಎಲ್ಲಾ ಅಸ್ತವ್ಯಸ್ತ. ಐದು ವರ್ಷದ ನಮ್ಮ ಯೋಜನೆ ಎಂಟು ವರ್ಷಕ್ಕೆ ವಿಸ್ತರಿಸಿತು.

೧೯೭೭ರ ಮಾರ್ಚ್‌ನಲ್ಲಿ ಪರಿಷತ್ ತೆರೆದಾಗ ಲಕ್ಷಾಂತರ ರೂಪಾಯಿ ನಷ್ಟ. ಭಾರತ–ಭಾರತಿಯ ಅಚ್ಚುಮೊಳೆಗಳ ನಾಶ. ಮತ್ತೆ ಪ್ರಕಟಣೆ ಆರಂಭಿಸುವಾಗ ಕಾಗದ, ರಟ್ಟು ಮತ್ತು ಮುದ್ರಣ ಸಾಮಗ್ರಿಗಳ ಬೆಲೆ ಗಗನಕ್ಕೇರಿತ್ತು. ಆದರೂ ಮಾತಿನಂತೆ ನಡೆಯಬೇಕು, ಮೊದಲಿನ ಬೆಲೆ ಉಳಿಸಬೇಕು ಎಂಬ ನಿರ್ಧಾರ. ಕರ್ನಾಟಕ ಸಹಕಾರಿ ಮುದ್ರಕರ ಸಂಘ ರಿಯಾಯತಿ ದರದಲ್ಲಿ ಕಾಗದ ನೀಡಿತು. ಸ್ವಲ್ಪ ಸುಧಾರಿಸುವಂತಾಯಿತು. ಮುದ್ರಕರ ಸಂಘದ ಅಧಿಕಾರಿಗಳಿಗೆ ನಮ್ಮ ಕೃತಜ್ಞತೆ ಸಲ್ಲಬೇಕು.

## ಭಾರತ–ಭಾರತಿ ಸಪ್ತಗಿರಿ ಹತ್ತಿತು

ಕರ್ನಾಟಕದ ಉದ್ದಗಲಕ್ಕೂ, ದಡದಂಚಿನಿಂದ ಕಡಲಾಚೆಯವರೆಗೂ ನಲಿದಾಡಿದ ಭಾರತ–ಭಾರತಿಗೆ 'ಸಪ್ತಗಿರಿ' ಹತ್ತುವ ಸುಯೋಗ.

ಭಾರತ–ಭಾರತಿಯಲ್ಲಿ ಪ್ರಕಟವಾಗಿರುವ ಕೆಲವು ಧಾರ್ಮಿಕ, ಪೌರಾಣಿಕ ಪುಸ್ತಕಗಳನ್ನು ತೆಲುಗು, ತಮಿಳು ಮತ್ತು ಮಲೆಯಾಳಂ ಭಾಷೆಗಳಲ್ಲಿ ಪ್ರಕಟಿಸಬೇಕೆಂದು ತಿರುಮಲೆ–ತಿರುಪತಿ ದೇವಸ್ಥಾನದ ಅಧಿಕಾರಿಗಳನ್ನು ಪ್ರಾರ್ಥಿಸಿದೆವು. ಶ್ರೀಶ್ರೀ ಪೇಜಾವರ ಮಠಾಧೀಶರ ಶಿಫಾರಸ್ಸು ದೊರೆಯಿತು. ಶ್ರೀ ವೆಂಕಟೇಶ್ವರ ಸಾನ್ನಿಧ್ಯದಲ್ಲಿ 'ಜ್ಞಾನಸತ್ರ'ದ ಪ್ರಾರಂಭ. ನಮ್ಮ ಯೋಜನೆಗೆ ಒಪ್ಪಿಗೆ ಸಿಕ್ಕಿತು. ಆರಿಸಿದ ೧೦೦ ಪುಸ್ತಕಗಳ ಪ್ರಕಟಣೆಗೆ ನಿಶ್ಚಯ ಮಾಡಿದರು. ದಕ್ಷಿಣ ಭಾರತದ ಎಲ್ಲೆಡೆ ಭಾರತ–ಭಾರತಿಯ ದಾಪುಗಾಲು. ನಮ್ಮ ಈ ಪ್ರಯತ್ನದಲ್ಲಿ ಸಹಕರಿಸಿದ ಹಿಂದೂ ಧರ್ಮ ರಕ್ಷಣಾ ಸಂಸ್ಥೆಯ ಸಹಕಾರ್ಯದರ್ಶಿ ಶ್ರೀ ಕೋದಂಡರಾಮಯ್ಯ ಇಲ್ಲಿ ಸ್ಮರಣೀಯರು.

### ಅಜ್ಞಾತ ಸೇವಕರು

ಭಾರತ-ಭಾರತಿ ಯೋಜನೆಯಲ್ಲಿ ಅಜ್ಞಾತರಾಗಿ ಹಗಲು – ರಾತ್ರಿಯೆನ್ನದೆ ನಗುನಗುತ್ತಾ ವಿವಿಧ ಕೆಲಸ ಮಾಡಿದ ಗೆಳೆಯರಾದ ಶ್ರೀ ಕೆ. ಆರ್. ಶ್ರೀಧರ್ ಮತ್ತು ಶ್ರೀ ಮಧುಕರ್–ಇವರುಗಳ ಸೇವೆಯೇನು ಕಮ್ಮಿಯಿಲ್ಲ.

### ವೈಯಕ್ತಿಕ ಕೃತಜ್ಞತೆ

ಈ ಯೋಜನೆಯ ಕಲ್ಪನೆ ಮೂಡುತ್ತಿರುವಾಗ ಶ್ರೀ ಮಧ್ವರಾಯರಿಂದ ನನಗೊಂದು ಕರೆ ಬಂತು. ೧೫ ದಿನಗಳ ನಂತರ ಭೇಟಿಮಾಡಿದೆ. ಈ ಯೋಜನೆಯ ಒಂದು ಚಿತ್ರವನ್ನು ನೀಡಿದರು. ಹಾಗೇ ಕಾಲಚಕ್ರ ಉರುಳಿತು. ಅವರ ವಾತ್ಸಲ್ಯ, ಸ್ಫೂರ್ತಿ ಈ ಕಾರ್ಯಕ್ಕೆ ನನ್ನನ್ನು ಎಳೆಯಿತು. ನಾನು ಅವರಿಗೆ ಚಿರಋಣಿ. ಅಂದಿನಿಂದ ಇಂದಿನವರೆಗೆ ಯೋಜನೆಗೆ ಹಾಗೂ ಪರಿಷತ್ತಿನ ಇತರ ಚಟುವಟಿಕೆಗಳಲ್ಲಿ ನನ್ನ ಕರ್ತವ್ಯ ನಿರ್ವಹಣೆಯಲ್ಲಿ ಮಾರ್ಗದರ್ಶನ, ಪ್ರೇರಣೆ ನೀಡಿದ ಹಿರಿಯರಿಗೂ ಮತ್ತು ಸಹಕರಿಸಿದ ಎಲ್ಲ ಮಿತ್ರರಿಗೂ ನಾನು ಋಣಿಯಾಗಿದ್ದೇನೆ.

### ಇದು ನಮ್ಮ ಕಥೆ

೮ ವರ್ಷಗಳಿಂದ ನಾವು ನಡೆದ ಬಂದ ದಾರಿಯ ಕಥೆ ಇದು. ಈ ಸಮಯದಲ್ಲಿ ನಮಗೆದುರಾದ ಕಷ್ಟ–ನಷ್ಟಗಳಿಗೇನೂ ಕಮ್ಮಿಯಿಲ್ಲ, ಅಡ್ಡಿ–ಆತಂಕಗಳಿಗೇನೂ ಕೊರತೆಯಿರಲಿಲ್ಲ. ಆದರೂ ನಡೆದು ಬಂದಿದ್ದೇವೆ; ಗುರಿ ಮುಟ್ಟಿದ್ದೇವೆ. ನಿಷ್ಠಾವಂತ ಸಹಕಾರಿಗಳೊಡನೆ, ಶ್ರದ್ಧಾವಂತ ಕೆಲಸಗಾರರೊಡನೆ ದಾರಿ ಸರಿದಿದ್ದು ಕಷ್ಟವೆನಿಸಲಿಲ್ಲ. ಈ ಯೋಜನೆಯಲ್ಲಿ ನಮ್ಮೊಡನೆ ಸರಿಸಮನಾಗಿ ದುಡಿದ ಎಲ್ಲ ಮಹಾನುಭಾವರಿಗೆ ಶತ ಪ್ರಣಾಮಗಳು. ನಮ್ಮ ಪ್ರಮಾದದಿಂದ ನೆನೆಯದೇ ಬಿಟ್ಟವರು ಕೃಪೆಯಿಂದ ಕ್ಷಮಿಸಬೇಕು; ಮನ್ನಿಸಬೇಕು.

### ನಮ್ಮ ಕನಸು

ಭಾರತ–ಭಾರತಿ ಪುಸ್ತಕ ಕಿರಿಯರ ಮನಸ್ಸನ್ನು ಹದಗೊಳಿಸುತ್ತದೆ; ಹಿರಿಯ ಮೌಲ್ಯಗಳನ್ನು ಅಭ್ಯಸಿಸುತ್ತದೆ. ಸದಭಿರುಚಿಯ ಜನಶಿಕ್ಷಣ ಕಾರ್ಯದಲ್ಲಿ ನಮ್ಮದೊಂದು ಸಣ್ಣ ಸೇವೆ. ಸಮಾಜದಲ್ಲಿ ಶಿಕ್ಷಣ, ಸಂಸ್ಕೃತಿ, ಜನಸೇವೆಯ ನಿರಂತರ ಕಾರ್ಯದಲ್ಲಿ ನಮ್ಮದೊಂದು ಕೈ ಸೇರಿಸಿದ್ದೇವೆ. ಇದರಿಂದ ಸ್ವಲ್ಪವಾದರೂ ಒಳ್ಳೆಯದಾಗಿದ್ದರೆ ನಮ್ಮ ಕಾರ್ಯ ಸಾರ್ಥಕ. ಈ ಕಾರ್ಯದಿಂದ ಸ್ಫೂರ್ತಿಗೊಂಡು ಸಮಾಜದಲ್ಲಿ ಬೇರೆ ಬೇರೆ ಇದೇ ರೀತಿಯ ಯೋಜನೆಗಳು ಆರಂಭವಾದರೆ, ಕಿರಿಯರ ಜನಶಿಕ್ಷಣ ಸೇವಾಕಾರ್ಯದಲ್ಲಿ ಕೈಗೂಡಿಸಿದರೆ ನಮ್ಮ ಕನಸು ನನಸಾದೀತು. ತಾಯಿ ಭಾರತಿಯ ದೇಗುಲದಲ್ಲಿ 'ಜ್ಞಾನಜ್ಯೋತಿ'ಯ ದೀಪಾವಳಿ ಸದಾ ನಡೆಯುತ್ತಿರಲಿ– ಅದೇ ನಮ್ಮ ಕನಸು.

## ಈ ಯೋಜನೆಯಲ್ಲಿ......



| | |
|---|---|
| * ಋಷಿ–ಮುನಿಗಳು | ೧೨ |
| * ಪುರಾಣಪುರುಷರು | ೨೮ |
| * ಸಾಧುಸಂತರು | ೫೫ |
| * ಆಚಾರ್ಯರು | ೧೮ |
| * ವೀರ ಬಾಲಕರು | ೯ |
| * ಮಹಾಮಾತೆಯರು | ೪೫ |
| * ವೀರಪುರುಷರು | ೪೧ |
| * ಆಧುನಿಕ ಮಹಾಪುರುಷರು | ೧೧೦ |
| * ಕ್ರಾಂತಿಕಾರಿಗಳು | ೩೦ |
| * ವಿಜ್ಞಾನಿಗಳು | ೧೮ |
| * ಸಾಹಿತಿ–ಕಲೋಪಾಸಕರು–ಸಂಗೀತಗಾರರು | ೧೩೬ |
| * ಕ್ರೀಡಾಪಟುಗಳು | ೧೮ |
| | ೫೧೦ |

—ಹೀಗೆ ೫೧೦ ಮಹಾಪುರುಷರು ಭಾರತ–ಭಾರತಿಯಲ್ಲಿ ಕಂಗೊಳಿಸಿದ್ದಾರೆ.



## ಕೃತೋ ಸ್ಮರ

ಈ ಮಹಾ ಚೇತನಗಳ ತ್ಯಾಗ, ಶೌರ್ಯ, ವಿವೇಕ ಮತ್ತು ಆದರ್ಶಯುತವಾದ ಜೀವನವನ್ನು ಭಾರತೀಯ ಕಂದಮ್ಮಗಳಿಗೆ ಒಯ್ಯುವ ನಮ್ಮ ಅಳಿಲು ಸೇವೆಯಲ್ಲಿ ಸಹಕರಿಸಿ ಭಾರತ-ಭಾರತಿಯ ಯಶಸ್ಸಿಗೆ ಕಾರಣರಾದ ಅಸಂಖ್ಯ ಜ್ಞಾತ-ಅಜ್ಞಾತ ಮಹಾನುಭಾವರಿಗೆ ನಮ್ಮ ಅಂತರಾಳದ ಪ್ರೇಮಪೂರ್ವಕ ಕೃತಜ್ಞತಾ ನಮನಗಳು.